


# ಮಲೆಯ ಮಾದೇಶ್ವರ

ಡಾ|| ಬಿ. ಎಸ್. ಸ್ವಾಮಿ



ಕರ್ನಾಟಕ ಜಾತ್ರೆಗಳು - ೪

ಪ್ರಧಾನ ಸಂಪಾದಕರು
ಡಾ. ಜೀ.ಶಂ. ಪರಮಶಿವಯ್ಯ

ಸಂಪಾದಕರು
ಹ.ಕ. ರಾಜೇಗೌಡ
ಡಾ. ಡಿ.ಕೆ. ರಾಜೇಂದ್ರ

# ಮಲೆಯ ಮಾದೇಶ್ವರ

# ಮಲೆಯ ಮಾದೇಶ್ವರ

ಲೇಖಕರು :

ಡಾ॥ ಬಿ. ಎಸ್. ಸ್ವಾಮಿ

ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ
೧೪/೩, ನೃಪತುಂಗ ರಸ್ತೆ
ಬೆಂಗಳೂರು – ೫೬೦ ೦೦೨

MALEYAMADESHWARA - A writeup on the Car Festival of Maleyamadeshwara by Dr. B. S. Swamy Published by Janapada Yakshagana Academy No 14/3, Nrupa-thunga Road, Bangalore - 5600 002 Pp xii + 79 Price Rs. 10/- First Edition 1995.

ಹಕ್ಕು : ಲೇಖಕರದು

ಬೆಲೆ : ಹತ್ತು ರೂಪಾಯಿ

ಮುದ್ರಕರು : ಮಂಡ್ಯ ಕಂಪ್ಯೂಟರ್ ಸೆಂಟರ್
[illegible], ಮಂಡ್ಯ

# ಪ್ರಧಾನ ಸಂಪಾದಕರ ಮಾತು

ಕರ್ನಾಟಕ ಜಾನಪದ ಅಕಾಡಮಿಯು ನಮ್ಮ ಸಂಸ್ಕೃತಿ ಮೂಲವಾದ ಅನೇಕ ವಿಷಯಗಳನ್ನು ಕುರಿತಂತೆ ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಲು ನಿರ್ಧರಿಸಿತು. ಹೀಗೆ ಆರಂಭಿಸಿದ ಅನೇಕ ಮಾಲೆಗಳಲ್ಲಿ ಕರ್ನಾಟಕ ಜಾತ್ರೆಗಳ ಮಾಲೆಯೂ ಒಂದು.

ಕನ್ನಡ ನಾಡಿನಾದ್ಯಂತ ಪ್ರತಿಯೊಂದು ಹಳ್ಳಿಯಲ್ಲಿಯೂ ಅದರದೇ ಆದ ಗ್ರಾಮದೇವತೆಯ ದೇವಾಲಯವಿರುವುದನ್ನು ಕಾಣಬಹುದು. ಈ ದೇವತೆಗಳ ಹುಟ್ಟು ಬೆಳವಣಿಗೆ, ಜನಾಕರ್ಷಣೆ, ಹಬ್ಬ, ಜಾತ್ರೆ, ಆಚರಣೆ, ವಿಧಿ, ನಿಷೇದ ಇವೆಲ್ಲ ವೈವಿಧ್ಯ ಪೂರ್ಣವಾಗಿದ್ದು ಅಭ್ಯಾಸ ಯೋಗ್ಯವಾಗಿವೆ. ಇವುಗಳ ಅಧ್ಯಯನ ನಮ್ಮ ಗ್ರಾಮ ಜೀವನದ ವೈವಿಧ್ಯತೆಯನ್ನು ತನ್ನಲ್ಲಿ ಅಡಗಿಸಿಕೊಂಡಿರುವುದರ ಜೊತೆಗೆ ಮಾನವ ಶಾಸ್ತ್ರ, ಸಂಸ್ಕೃತಿ ಅಧ್ಯಯನ ಜಾನಪದ ಅಧ್ಯಯನ ಮತ್ತು ಇತಿಹಾಸಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಈ ಹಿನ್ನೆಲೆಯಲ್ಲಿ ಅಕಾಡಮಿ ಕರ್ನಾಟಕ ಗ್ರಾಮದೇವತೆಗಳು ಮತ್ತು ಅವುಗಳ ಜಾತ್ರೆಗಳನ್ನು ಕುರಿತಂತೆ ಹಸ್ತಪ್ರತಿಗಳಿಗೆ ಕರೆನೀಡಿತು. ನಮ್ಮ ಕರೆಗೆ ಓಗೊಟ್ಟು ಹತ್ತು ಜನ ಲೇಖಕರು ಹಸ್ತಪ್ರತಿಗಳನ್ನು ಕಳಿಸಿಕೊಟ್ಟರು.

ಅಕಾಡಮಿಯು ಪ್ರಕಟನೆಗೆ ತೆಗೆದುಕೊಂಡ ಪ್ರತಿಯೊಂದು ಮಾಲೆಗೂ ಬಂದ ಹಸ್ತಪ್ರತಿಗಳನ್ನು ಪರಿಶೀಲಿಸಿ, ಸಂಪಾದಿಸಿ ಮುದ್ರಣಕ್ಕೆ ಅಣಿ ಮಾಡಲು ಇಬ್ಬರು ಸಂಪಾದಕರನ್ನು ನೇಮಿಸಲಾಯಿತು. ಜಾತ್ರೆಯ ಮಾಲೆಗೆ ನಾಡಿನ ಪ್ರಸಿದ್ಧ ಜಾನಪದ ವಿದ್ವಾಂಸರುಗಳಾದ ಶ್ರೀ ಹ. ಕ. ರಾಜೇಗೌಡರು ಹಾಗೂ ಡಾ. ಡಿ. ಕೆ. ರಾಜೇಂದ್ರ ಅವರನ್ನು ಸಂಪಾದಕರಾಗಿ ಆಯ್ಕೆ ಮಾಡಲಾಯಿತು. ಈ ಮಿತ್ರರಿಬ್ಬರೂ ತಮ್ಮ ಪಾಲಿನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದಾರಷ್ಟೇ ಅಲ್ಲ ಜಾತ್ರೆ ಮಾಲೆಯ ಹತ್ತು ಗ್ರಂಥಗಳು ಹೊರಬರಲು ಕಾರಣರಾಗಿದ್ದಾರೆ. ನಮ್ಮ ಗ್ರಾಮ ಸಂಸ್ಕೃತಿಯನ್ನು ಉಳಿಸುವ ಅಕಾಡಮಿಯ ಈ ಯೋಜನೆಯು ಯಶಸ್ವಿಯಾಗಲು ಕಾರಣರಾದ ಈ ಇಬ್ಬರು ಹಿರಿಯ ವಿದ್ವಾಂಸರನ್ನು ಅಕಾಡಮಿಯ ಪರವಾಗಿ ವಂದಿಸುತ್ತೇನೆ. ಜಾನಪದ ಅಧ್ಯಯನ ಮತ್ತು ಸಂಶೋಧನೆಯಲ್ಲಿ ನಿರತರಾಗಿರುವ ಈ ಮಾಲೆಯ ಗ್ರಂಥಕರ್ತರಿಗೂ ಇವುಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಮಂಡ್ಯ ಕಂಪ್ಯೂಟರ್ ಸೆಂಟರ್ ಮುದ್ರಣಾಲಯದವರಿಗೂ ಅಕಾಡಮಿಯ ಪರವಾಗಿ ವಂದನೆಗಳು ಸಲ್ಲುತ್ತವೆ.

ಡಾ. ಜೀ. ಶಂ. ಪರಮಶಿವಯ್ಯ
ಅಧ್ಯಕ್ಷ ಹಾಗು ಪ್ರಧಾನ ಸಂಪಾದಕ

# ಸಂಪಾದಕರ ಮಾತು

ಜಾನಪದದ ಆದಿ ಹೇಗೆ ನಿಗೂಢವೋ, ಅಂತ್ಯವೂ ಹಾಗೇ ನಿಗೂಢ, ಹುಡುಕಿದಷ್ಟೂ, ತಡಕಿದಷ್ಟೂ ಕೊನೆಯಿಲ್ಲದ ಅದರ ಎಳೆಗಳು ನಮ್ಮನ್ನು ಆ ನಿಗೂಢದತ್ತಲೇ ಕೊಂಡೊಯ್ಯುತ್ತವೆ. ಹೊಸ ಹೊಸ ಬೆರಗುಗಳನ್ನು ತೋರುತ್ತ ಬಿಚ್ಚಿಕೊಳ್ಳುವ ಅದರ ಪದರಗಳು, ನಮ್ಮ ಪ್ರಾಚೀನ ಸಂಸ್ಕೃತಿಯ ಅದ್ಭುತಗಳನ್ನು ಒಂದೊಂದಾಗಿ ಕಣ್ಣಮುಂದೆ ತರುತ್ತವೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನ ವೈಜ್ಞಾನಿಕ ತಳಹದಿಯ ಮೇಲೆ ತನ್ನ ಕಾರ್ಯವನ್ನು ಆರಂಭಿಸಿ ಕಾಲು ಶತಮಾನವನ್ನು ಸಮೀಪಿಸುತ್ತಿದೆ. ಅಂದಿನಿಂದಲೂ ಜಾನಪದ ಸಂಬಂಧವಾದ ಚಟುವಟಿಕೆಗಳು ಬೇರೊಂದು ರೀತಿಯಲ್ಲಿಯೇ ಆರಂಭಗೊಂಡು, ಗಮನಾರ್ಹ ಸಾಧನೆಯನ್ನೇ ಮಾಡುತ್ತ, ತೋರುತ್ತ ಬಂದಿದೆ. ಸಂಗ್ರಹಣೆ, ಸಂಶೋಧನೆ, ಸಂಪಾದನೆಗಳೇ ಅಲ್ಲದೆ, ಅವನ್ನು ಕುರಿತು ತಲಸ್ಪರ್ಶಿಯಾದ ವಿಮರ್ಶೆ ಹಾಗೂ ಅಧ್ಯಯನ ಕೂಡ, ನಮ್ಮ ಸಂಸ್ಕೃತಿಯ ಮಹತ್ವವನ್ನೂ ಅದರ ಹಲವು ಅಚ್ಚರಿಗಳನ್ನೂ ವಿವರಿಸುವಲ್ಲಿ ಯಶಸ್ವಿಯಾಗಿದೆ. ಸಾಹಿತ್ಯಕ್ಕಷ್ಟೇ ಕಟ್ಟು ಬೀಳದೆ, ಜಾನಪದದ ಏನೆಲ್ಲವನ್ನೂ ಕೈಗೆತ್ತಿಕೊಂಡು ಶೋಧಿಸಿ, ಅವುಗಳ ಮರ್ಮವನ್ನು ಭೇದಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ರೂಪುಗೊಂಡ ಹೊಸ ಹೊಸ ಸಿದ್ಧಾಂತಗಳ ಹಿನ್ನೆಲೆಯಲ್ಲಿ, ಜಾನಪದದ ಒಂದೊಂದು ವಸ್ತು - ವಿಷಯಗಳನ್ನು ವಿಶ್ಲೇಷಿಸುತ್ತ ಹೋದಂತೆ ದೊರೆತ ಹಲವು ಸಂಗತಿಗಳು ಅವನ್ನು ಹೆಚ್ಚು ಹುರಿದುಂಬಿಸಿ ಇನ್ನೂ ಹೆಚ್ಚು ಕಾರ್ಯೋನ್ಮುಖನಾಗಲು ಪ್ರೇರಕವಾಗಿವೆ. ಈ ಎಲ್ಲ ಕೆಲಸ ಕಾರ್ಯಗಳೂ ವೈಯಕ್ತಿಕ ನೆಲೆಯಲ್ಲಿ ನಡೆದಿರುವಂತೆಯೆ, ಕಾಲಕಾಲಕ್ಕೆ ಹುಟ್ಟಿಕೊಂಡ ಹಲವು ಸಂಸ್ಥೆಗಳೂ, ವಿಶ್ವವಿದ್ಯಾನಿಲಯಗಳು, ಅಕಾಡೆಮಿ, ಪರಿಷತ್ತು ಮುಂತಾದವು ಅದಕ್ಕೆ ಹೆಚ್ಚಿನ ಚಾಲನೆಯನ್ನು ಕೊಡುವಲ್ಲಿ ಯಶಸ್ವಿಯಾಗಿವೆ. ಜಾನಪದದ ಒಟ್ಟು ಕಾರ್ಯ ಹೆಚ್ಚು ಸಮರ್ಥವಾಗಿ ಹಾಗು ಸಾರ್ಥಕವಾಗಿ ಮುನ್ನಡೆಯಲು ಪ್ರೇರಕವಾಗಿವೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಸ್ತಿತ್ವಕ್ಕೆ ಬಂದ ಮೇಲೆ ಹಲವಾರು ಮಹತ್ವದ ಕೆಲಸಗಳನ್ನು ಮಾಡುತ್ತಾ ಬಂದಿದೆ. ಧ್ವನಿಮುದ್ರಣ, ಛಾಯಾಚಿತ್ರೀಕರಣಗಳ ಜೊತೆ ಜೊತೆಯಲ್ಲಿಯೇ ಗ್ರಂಥ ಪ್ರಕಟಣೆಯನ್ನೂ ಹೆಚ್ಚಿನ ರೀತಿಯಲ್ಲಿ ಕೈಗೊಂಡಿದೆ. ಡಾ. ಜೀ. ಶಂ. ಪರಮಶಿವಯ್ಯ ಅವರು ಅಕಾಡೆಮಿಯ ಅಧ್ಯಕ್ಷರಾಗಿ ಬಂದ ಮೇಲೆ ತಮ್ಮ ಅಧಿಕಾರದ ಕೊನೆಯ ಅವಧಿಯನ್ನು ಪ್ರಕಟಣೆಗೆ ಮೀಸಲಾಗಿಸಿದ್ದು ಜಾನಪದದ ದೃಷ್ಟಿಯಿಂದ ಒಂದು ಮಹತ್ವದ ಸಂಗತಿ, ಜಾನಪದಕ್ಕಾಗಿ ದುಡಿದ ಪ್ರಮುಖರ ಸಂಕ್ಷಿಪ್ತ ಜೀವನ ಚರಿತ್ರೆ, ಹಾಗೂ ಜಾನಪದದ ಹಲವು ಪ್ರಮುಖ ವಿಷಮಗಳನ್ನೊಳಗೊಂಡ ಕಿರುಹೊತ್ತಗೆಗಳನ್ನು ಪ್ರಕಟಿಸುವ ಯೋಜನೆ ಇವುಗಳಲ್ಲಿ ಮುಖ್ಯವಾದುದು.

ಜಾತ್ರೆಗಳು ನಮ್ಮ ಸಂಸ್ಕೃತಿಕ ಪರಂಪರೆಯ ಪ್ರಮುಖ ದಾಖಲೆಗಳು. ಗ್ರಾಮೀಣ ಬದುಕಿನ ಜೀವಂತ ನಾಡಿಮಿಡಿತಗಳು, ಸಾಮಾಜಿಕ, ಧಾರ್ಮಿಕ ಹಾಗೂ ಕಲಾತ್ಮಕ ಬದುಕಿನ

ಜೀವಸತ್ವ ಅಲ್ಲಿ ಹಲವು ಮುಖಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣಬಹುದು. ಜಾತ್ರೆ ಕೇವಲ ಜನ-ದನಗಳ, ವ್ಯಾಪಾರ-ವಹಿವಾಟುಗಳ, ಕೇಂದ್ರವಷ್ಟೇ ಅಲ್ಲ; ಅದೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗಮ. ಒಂದೊಂದು ಜಾತ್ರೆಯೂ, ಒಂದೊಂದು ಗ್ರಾಮದ, ಗ್ರಾಮದೇವತೆಯ ಹಿನ್ನೆಲೆಯನ್ನೂ, ಅದರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನೂ ಒಳಗೊಂಡಿರುತ್ತದೆ. ಒಂದು ಜಾತ್ರೆಯ ತಲಸ್ಪರ್ಶಿಯಾದ ಅಧ್ಯಯನವೆಂದರೆ, ಅದೊಂದು ಸಂಸ್ಕೃತಿಯ ಅಧ್ಯಯನವಿದ್ದಂತೆ. ಅದರ ಹುಟ್ಟು, ಬೆಳವಣಿಗೆ, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯಗಳು, - ಇವೆಲ್ಲವನ್ನೂ ಮೈಗೂಡಿಸಿಕೊಂಡಿರುತ್ತದೆ. ಜಾತ್ರೆಗಳು ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದಿರುವಂತೆಯೇ, ಸಾಮಾಜಿಕ ಮಹತ್ವವನ್ನೂ ಪಡೆದುಕೊಂಡಿವೆ. ಅವು ಅಂದಿನಿಂದ ಇಂದಿನವರೆವಿಗೂ ಅಷ್ಟೇ ಮಹತ್ವವನ್ನು ಉಳಿಸಿಕೊಂಡು ಬಂದಿರುವುದರ ಹಿನ್ನೆಲೆಯೇ ಇದಾಗಿದೆ.

ಕರ್ನಾಟಕ ಜಾನಪದ ಅಕಾಡಮಿಯು ಹಮ್ಮಿಕೊಂಡ ಕರ್ನಾಟಕದ ಜಾತ್ರೆಗಳು ಮಾಲೆಗೆ ಈ ಪುಸ್ತಕವನ್ನು ಬರೆದುಕೊಟ್ಟವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಮಂಡ್ಯ ಕಂಪ್ಯೂಟರ್ ಸೆಂಟರ್ ಮುದ್ರಣಾಲಯದವರಿಗೆ ಅಕಾಡಮಿಯ ಪರವಾಗಿ ವಂದನೆಗಳು.

ಹ. ಕ. ರಾಜೇಗೌಡರು
ಡಾ. ಡಿ.ಕೆ. ರಾಜೇಂದ್ರ

* * * * *

## ವಿಷಯ ಸೂಚಿಕೆ


| | |
|---|---|
| ಪ್ರಧಾನ ಸಂಪಾದಕರ ಮಾತು | v |
| ಸಂಪಾದಕರ ಮಾತು | vii |
| ಕ್ಷೇತ್ರ ಪರಿಚಯ | ೧ |
| ಶಿಷ್ಟ ಜಾತ್ರೆ | ೧೧ |
| ಜಾತ್ರೆ - ಒಂದು ವಿಶ್ಲೇಷಣ | ೧೨ |
| ಸಾಹಿತ್ಯದಲ್ಲಿ ಜಾತ್ರೆ | ೧೮ |
| ಜನಪದ ಸಾಹಿತ್ಯದಲ್ಲಿ ಜಾತ್ರೆ | ೨೨ |
| ಅಲ್ಲಲ್ಲಿ ಜಾತ್ರೆ | ೨೫ |
| ದೇವರ ಗುಡ್ಡರ ದೀಕ್ಷೆ | ೨೮ |
| ಕಂಸಾಳೆ ಮೇಳ | ೩೩ |
| ಜಾತ್ರೆ, ಉತ್ಸವ ಆಚರಣೆಗಳು | ೩೫ |
| ಜನಪದ ಸಾಹಿತ್ಯದಲ್ಲಿ ಜಾತ್ರೆ | ೪೭ |
| ಮಾದೇಶ್ವರ ಸಾಂಗತ್ಯ | ೫೧ |

# ಮಲೆಯ ಮಾದೇಶ್ವರ

# ಕ್ಷೇತ್ರ ಪರಿಚಯ

"ಅತ್ತ ಆರು ಗಾವುದ
ಇತ್ತ ಆರು ಗಾವುದ
ಸುತ್ತ ಹನ್ನೆರಡು ಗಾವುದ
ಬ್ಯಾಡು ಗಂಪುಣ ಸೀಮೆ ನಟ್ಟನಡರಣ್ಣ
ಜಲಾ ಕಂಡು ತಳಾ ಒಳ್ಳೇದು ಅಂತ್ಹೇಳಿ
ಆನೆ ತಲೆಧಿಂಬಿನಿಂದ ಹಾರಿ
ಬಿದ್ರುಮಳೆಯಲ್ಲಿ ನೆಲೆಗೊಂಡಂತ
ಮುದ್ದು ಮಾಯಕ್ಕಾರನ ಪಾದಕ್ಕೊಂದ್ಸಲ
ಉಘೇ ಅನ್ನಿ ........

ಇದು ನಮ್ಮ ಜನಪದ ಕವಿಗಳು ಮಾದೇಶ್ವರನ ಬಗೆಗೆ ಮಾಡುವ ನೆನೆವಾಕೆ. ಕಂಸಾಳೆ ಕಲಾವಿದರು ಹಾಡಿ ಮೊಳಗಿಸಿದ ಜನಪದ ಗೀತೆ. ಜನಪದ ಕವಿಗಳಿಗೆ, ಶ್ರೀ ಸಾಮಾನ್ಯರಿಗೆ ಇಷ್ಟ ದೈವ. ಅವನು ನೆಲೆಮಾಗಿರುವ ಕ್ಷೇತ್ರವೇ ಇಂದು ಪವಿತ್ರ ಕ್ಷೇತ್ರವಾಗಿ ಮೆರೆಯುತ್ತಿರುವ ಮಾದೇಶ್ವರ. ಬೆಟ್ಟ.

ಮೈಸೂರು ಜಿಲ್ಲೆಯ ಕೊಳ್ಳೇಗಾಲದ ಪೂರ್ವದಿಕ್ಕಿಗೆ ಸುಮಾರು ಎಂಬತ್ತು ಕಿಲೋಮೀಟರ್ ದೂರಕ್ಕೆ ಮಾದೇಶ್ವರ ಬೆಟ್ಟವಿದೆ. ಇದು ಮೊದಲಿಗೆ ತಮಿಳುನಾಡಿಗೆ ಸೇರಿದ್ದು ೧೯೫೬ರಲ್ಲಿ ಅಂದರೆ ರಾಜ್ಯಗಳ ಪುನರ್ವಿಂಗಡನೆಯ ಸಂದರ್ಭದಲ್ಲಿ ಕರ್ನಾಟಕಕ್ಕೆ ಸೇರಿತು.

ಮಾದೇಶ್ವರನ ಬೆಟ್ಟಕ್ಕೆ ಕೊಳ್ಳೇಗಾಲದಿಂದ ಸಿದ್ದಯ್ಯನ ಪುರ, ಮಧುವನ ಹಳ್ಳಿ, ಸಿಂಗಾನಲ್ಲೂರು. ಕಾಮಗೆರೆ. ಹನೂರು. ರಾಮಾಪುರ, ಕೌದಳ್ಳಿ ಮಾರ್ಗವಾಗಿ ಹೋಗಬೇಕಾಗುತ್ತದೆ. ಕೌದಳ್ಳಿ ಗ್ರಾಮದಿಂದ ಸುಮಾರು ಹದಿಮೂರು ಕಿಲೋಮೀಟರ್ ದೂರಕ್ಕೆ "ತಾಳುಬೆಟ್ಟ" ಸಿಗುತ್ತದೆ. ಮಾದೇಶ್ವರರು ನಡುಮಲೆಯಲ್ಲಿ ನೆಲೆಗೊಳ್ಳಲು ಬಂದಾಗ ತನ್ನ ಶಿಶು ಮಕ್ಕಳಲ್ಲದೆ ದುಷ್ಟರು ಯಾರೂ ತನ್ನ ಬೆಟ್ಟಕ್ಕೆ ಬರದಿರಲೆಂದು "ತಾಳ" (ಚಿಲುಕ) ಹಾಕಿಬಿಟ್ಟ. ಅದಕ್ಕೆ "ತಾಳು ಬೆಟ್ಟ"ಎಂದು ಹೆಸರಾಯಿತು. ಈ ಬೆಟ್ಟದಲ್ಲಿ ಮಕ್ಕಳ ಫಲಕ್ಕಾಗಿ ಹರಕೆ ಕಟ್ಟಿಕೊಂಡಿದ್ದವರು. ತೊಟ್ಟಿಲುಗಳನ್ನು ಮಾಡಿ ಇಲ್ಲವೇ ಬಟ್ಟೆಯಲ್ಲಿ "ನ್ಯಾನೆ"ಯನ್ನು ಮಾಡಿ ಅದರೊಳಗೆ ಕಲ್ಲಿಟ್ಟು ಮರಗಳಲ್ಲಿ ತೂಗಿ ಬಿಡುತ್ತಾರೆ. ಕರ್ನಾಟಕದವರೂ ಸಹ ಇದೇ ರೀತಿ ಮಾಡುವ ವಾಡಿಕೆ ಇದೆ.

ಎಪ್ಪತ್ತೇಳು ಮಲೆಗಳ ಮಧ್ಯೆ ಈಗ ಮಾದೇಶ್ವರ ದೇವಾಲಯ. ಇರುವ ಮಲೆ 'ನಡು ಮಲೆ'ಅಥವಾ 'ವಜ್ರಮಲೆ'. ಮಾದೇಶ್ವರರು ಕುಂತೂರಿನಿಂದ ಈ ಮಲೆಗೆ ಬಂದಾಗ ಅಲ್ಲಿಗೂ ಕುಂತೂರು ಬೆಟ್ಟ ಕಾಣುತ್ತಿತ್ತಂತೆ. ತನ್ನ ಬೆಟ್ಟ ಅವರ ಬೆಟ್ಟಕ್ಕಿಂತ ಕೆಳಗಿರಬೇಕೆಂದು ಮಾದೇಶ್ವರರು ಕಾಲಿನಿಂದ ತುಳಿದಾಗ ಅದು ನಡು ಮಲೆಯಾಯಿತು ಎಂಬುದು ಒಂದು

ಪ್ರತೀತಿ. ಆದರೆ ತಾನಿರುವ ಮಲೆಗೆ ಚಾಮುಂಡಿಬೆಟ್ಟ ಕಾಣುತ್ತದೆಂದು ತುಳಿದಾಗ ಆಯಿತು ಎಂಬುದು ಮತ್ತೊಂದು. ನಡುಮಲೆಯನ್ನು ತಲುಪಲು ಬಸವನ ಹಾದಿ, ಸರ್ಪನ ಹಾದಿ ಎಂದು ಎರಡು ದಾರಿಗಳಿವೆ. ಬಸವನ ಹಾದಿ ಮಾದೇಶ್ವರ ದೇವಾಲಯಕ್ಕೆ ಸ್ವಲ್ಪ ನೇರವಾಗಿ ಹೋಗುತ್ತದೆ. ಇದು ತಾಳುಬೆಟ್ಟದಿಂದಲೇ ಆರಂಭವಾಗುತ್ತದೆ. ಕುಂತೂರಿನಲ್ಲಿದ್ದ ಬಸವ ಮಾದೇಶ್ವರರನ್ನು ಹುಡುಕಿಕೊಂಡು ಬಂದ ದಾರಿಯೇ'ಬಸವನದಾರಿ'ಎಂದು ಹೇಳುವರು. ಕುಂತೂರು ಮಠದಲ್ಲಿ ಸರ್ಪವೊಂದು ಪೂಜೆಯಾದ ಮೇಲೆ ಹಾಲನ್ನು ಕುಡಿದು ಹೋಗುತ್ತಿತ್ತು. ಮಾದೇಶ್ವರರು ಕುಂತೂರು ಮಠವನ್ನು ಬಿಟ್ಟು ಹೊರಟ ಮೇಲೆ ಆ ಸರ್ಪ ಮಾದೇಶ್ವರರನ್ನು ಹುಡುಕಿಕೊಂಡು ಹೋಯಿತು. ಮಲೆಯ ಮತ್ತೊಂದೆಡೆ ಹಾವು ಹರಿದುಕೊಂಡು ಹೋದ ದಾರಿಯೇ "ಸರ್ಪನದಾರಿ" ಈ ರಸ್ತೆ ಡೊಂಕು ಡೊಂಕಾಗಿದೆ. ಇದೂ ಕೂಡ ಮಾದೇಶ್ವರ ದೇವಾಲಯಕ್ಕೆ ಸೇರುತ್ತದೆ. ಇದಕ್ಕೆ ಇನ್ನೊಂದು ಕಥೆಯೂ ರೂಢಿಯಲ್ಲಿದೆ. ಕಾಮತಟಕಾಪುರಿಯ ಹತ್ತಿರ ಗಂಗಾಧರನೆಂಬ ಮುನಿಯು ಅಷ್ಟಸಿದ್ಧಿಗಳನ್ನು ಪಡೆದುಕೊಂಡಿದ್ದ ಈತ ತನ್ನ ಊರಲ್ಲಿ ಯಾರೂ ವಾಹನಾರೂಢರಾಗಿ ಹೋಗಬಾರದೆಂಬ ಕಟ್ಟಪ್ಪಣೆಯನ್ನು ಮಾಡಿದ್ದ. ಒಮ್ಮೆ ಮಾದೇಶ್ವರರು ಎಷ್ಟು ಬುದ್ಧಿ ಹೇಳಿದರೂ ಆತ ಕೇಳಲಿಲ್ಲ. ಕೊನೆಗೆ ಮಾದೇಶ್ವರರು ಅವನಿಗೆ ಘಟ ಸರ್ಪ ಆಗುವಂತೆ ಶಾಪವನ್ನಿತ್ತರು. ಆ ಸರ್ಪ ಹರಿದುಕೊಂಡು ಮಾದೇಶ್ವರರ ಹತ್ತಿರ ಹೋಯಿತು. ಅದೇ "ಸರ್ಪನ ಹಾದಿ" ಎಂದು ಹೇಳುವವರೂ ಉಂಟು.

ತಮಿಳುನಾಡಿನಿಂದ ಮಾದೇಶ್ವರ ಕ್ಷೇತ್ರಕ್ಕೆ ಬರಬೇಕಾದರೆ ಸೇಲಂ, ಅವನಾಸಿ, ಮೇಚೇರಿ, ಕೊಂಜುಂಪಾಳ್ಯಂ, ಮೆಟ್ಟೂರು, ಕೊಳತ್ತೂರು, ಕಾವೇರಿಪುರ, ಚೆಟ್ಟಿಪಟ್ಟಿ, ಪಾಲಾರ್, ತಾಳ ಬೆಟ್ಟವನ್ನು ದಾಟಿ ಮಾದೇಶ್ವರ ಬೆಟ್ಟವನ್ನು ತಲಪಬಹುದು.

ಮಾದೇಶ್ವರನ ಬೆಟ್ಟವು ಮೊರಡಿಗಳು, ಹಳ್ಳಗಳು, ಕಮರಿಗಳು, ಕೋಡುಗಲ್ಲು, ಹಾಸರೆಗಲ್ಲುಗಳು ಹಾವಸಗಲ್ಲುಗಳನ್ನೊಳಗೊಂಡಿವೆ. ಬನ್ನಿ, ಬಕುಳ, ಹೊನ್ನೆ, ಆಲ, ಅರಳಿ, ಹಲಸು, ಬೇವು, ತೇಗ, ಅತ್ತಿ, ಮುತ್ತುಗ, ನೆಲ್ಲಿ, ಮಾವು, ಪಾದರಿ, ಸಂಪಿಗೆ, ಚಂದನ, ದೇವದಾರು, ಬೆಟ್ಟದಾವರೆ, ಬೀಟೆ, ಕರಿಮರ, ಲಿಂಬೆ, ಹೇರಳೆ, ಹುಣಸೆ, ಹಿಪ್ಪೆ, ಗೇರು, ಕರಿಬೇವು, ಮೊದಲಾದ ಮರಗಿಡಗಳು ಯಥೇಚ್ಛವಾಗಿವೆ. ಜಿಂಕೆ, ಕಡವೆ, ಕಾಡಮ್ಮೆ, ಆನೆ, ಹುಲಿ, ಜಿಂಕೆ, ನರಿ, ಪುನಗಿನಬೆಕ್ಕು ಮುಂತಾದ ಪ್ರಾಣಿಗಳು ಇವೆ. ಹಾಲುಹಕ್ಕಿ, ಗಿಡುಗ, ಕೆಂಬೂತ, ಪಾರಿವಾಳ, ಗರುಡ, ಗಿಳಿ, ನವಿಲು ಮುಂತಾದ ಪಕ್ಷಿಗಳು ಹೇರಳವಾಗಿ ವಿಹರಿಸುತ್ತವೆ.

ಮಾದೇಶ್ವರ ಬೆಟ್ಟವು ಆನೆಮಲೆ, ಜೇನುಮಲೆ, ಗುಂಜಿಮಲೆ, ಗುಲಗಂಜಿಮಲೆ, ಕಂಬತ್ತಿಮಲೆ, ಪಡುವಮಲೆ, ಪೂಜೆಮಲೆ, ಪಚ್ಚೆಮಲೆ, ಕೊಂಗುಮಲೆ, ಕೊನಾಚಿಮಲೆ, ಸಂಕುಮಲೆ, ರುದ್ರಾಕ್ಷಿಮಲೆ, ಭದ್ರಾಕ್ಷಿಮಲೆ, ನಡುಮಲೆ, ನಾಗಮಲೆ ಮುಂತಾದ ಎಪ್ಪತ್ತೇಳು ಮಲೆಗಳನ್ನು ಒಳಗೊಂಡಿವೆ. ಎಪ್ಪತ್ತೇಳು ಮಲೆಗಳ ಸಂಪೂರ್ಣ ಹೆಸರನ್ನಾಗಲೀ ಅಥವಾ ಮಲೆ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದಿಲ್ಲ. ಕೆಲವು ಮಲೆಗಳನ್ನು ಮಾತ್ರ



ಹೆಸರಿಸಿರುವುದನ್ನು ಕಾಣಬಹುದು. ಸಂಕಮಲೆ ಎಂಬುದು ಸಂಕಮ್ಮ ವಾಸವಾಗಿದ್ದ ಮಲೆ ಎಂದು ಹೇಳುವರು ನಮ್ಮ ಜನಪದರು. ಆನೆಗಳು ಹೆಚ್ಚು ವಾಸವಾಗಿರುವ ಮಲೆಗೆ 'ಆನೆಮಲೆ ಎಂದೂ, ಜೇನು ಹೆಚ್ಚಾದ ಮಲೆಗೆ 'ಜೇನುಮಲೆ' ಎಂದೂ ಕರೆದಿರಬೇಕು. ಗುಲಗಂಜಿ ಇರುವ ಮಲೆಗೆ ಗುಲಗಂಜಿಮಲೆ ಎಂದೂ, ರುದ್ರಾಕ್ಷಿ ಬೆಳೆವ ಮಲೆಗೆ ರುದ್ರಾಕ್ಷಿ ಮಲೆ ಎಂದೂ ಹೆಸರಿಟ್ಟಂತೆ ಕಾಣುತ್ತದೆ. ಮಾದೇಶ್ವರರು ಈ ಗಿರಿಗಳಿಲ್ಲೆಲ್ಲಾ ತಿರುಗಾಡಿ ತಪಸ್ಸು ಮಾಡಿದರೆಂದು ಹೇಳುತ್ತಾರೆ. ಈ ಎಲ್ಲಾ ಮಲೆಗಳಲ್ಲೂ ಒಂದೊಂದು ದೇವರು ಇದೆ ಎಂದು ಹೇಳುವರು. ಬೆಟ್ಟದ ಮಧ್ಯೆ ಕಾವೇರಿ ನದಿ ಹರಿಯುತ್ತದೆ.

ಮಾದೇಶ್ವರನ ಬೆಟ್ಟ ಸಮುದ್ರ ಮಟ್ಟಕ್ಕೆ ೯೩೫.೨೭ ಮೀಟರ್ ಎತ್ತರದಲ್ಲಿದೆ. ಮಾದೇಶ್ವರ ದೇವಾಲಯ ತಾಳುಬೆಟ್ಟದಿಂದ ಹನ್ನೆರಡು ಹದಿಮೂರು ಕಿಲೋಮೀಟರ್ ದೂರಕ್ಕೆ ಇದೆ. ದೇವಾಲಯಕ್ಕೆ ಸುಮಾರು ೪೮ ಕಿಲೋಮೀಟರ್ ದೂರದಲ್ಲಿ ತಮಿಳುನಾಡಿನ ಮೆಟ್ಟೂರು ಅಣೆಕಟ್ಟು ಇದೆ. ಮಾದೇಶ್ವರ ಕ್ಷೇತ್ರವು ಸುಮಾರು ೬೦ - ೭೦ ಕಿಲೋಮೀಟರ್ ವಿಸ್ತಾರವಾಗಿದೆ.

ಮಾದೇಶ್ವರ ದೇವಾಲಯವು ಸುತ್ತಲೂ ಸುಂದರವಾದ ಪಾಳಿ ಮತ್ತು ಮಂಟಪಗಳಿಂದ ಅಲಂಕೃತವಾಗಿದೆ. ಈ ಮಂಟಪಗಳು ಪೂರ್ವ ಪಶ್ಚಿಮ ಇಪ್ಪತ್ತನಾಲ್ಕು ಅಂಕಣಗಳು, ದಕ್ಷಿಣೋತ್ತರ ಹದಿನೆಂಟು ಅಂಕಣವುಳ್ಳವಾಗಿವೆ. ದೇವಾಲಯದ ಮುಖ ಪಶ್ಚಿಮ. ಗೋಪುರ ದಕ್ಷಿಣ ಉತ್ತರಕ್ಕೆ ಆಲಂಬಾಡಿ ಬಸವೇಶ್ವರ ದ್ವಾರ ಎಂಬ ಬಾಗಿಲುಂಟು. ದೇವಾಲಯದಲ್ಲಿ ಗರ್ಭಗುಡಿ ಒಂದು ಅಂಕಣ, ಸುಕನಾಸಿ ಒಂದು ಅಂಕಣ, ಮುಖ ಮಂಟಪ ಇಪ್ಪತ್ತೈದು ಅಂಕಣ ಇದೆ. ಮಾದೇಶ್ವರ ಲಿಂಗದೆದುರು ಒಂದು ಅಂಕಣ ಬಸವೇಶ್ವರ ಗುಡಿ ಇದೆ. ಇದನ್ನು ಬೆಳಕವಾಡಿಯ ಹೊನ್ನಲಗ ಶೆಟ್ಟರ ಮಕ್ಕಳು ಗುರುಬಸಪ್ಪ ಎಂಬಾತ ಯುವ ಸಂವತ್ಸರ ಪುಷ್ಯಮಾಸ ಬಹುಳ ಬಿದಿಗೆಯಲ್ಲಿ ಕಟ್ಟಿಸಿದಂತೆ ಶಾಸನವಿದೆ.

ಗೋಪುರದ ತಳಭಾಗದಲ್ಲಿ ವಿಘ್ನೇಶ್ವರ ದೇವಾಲಯವಿದೆ. ಭಕ್ತರು ಈತನ ದರ್ಶನವನ್ನು ಮೊದಲು ಮಾಡಿ ಆಮೇಲೆ ಮಾದೇಶ್ವರ ಲಿಂಗ ದರ್ಶನಕ್ಕೆ ಹೋಗುತ್ತಾರೆ. ಈ ದೇವಾಲಯದ ಮುಖ ಮಂಟಪದಲ್ಲಿ ವೀರಭದ್ರನ ವಿಗ್ರಹವಿದೆ. ದೇವಾಲಯದ ಬಲದ್ವಾರದಲ್ಲಿ ಬಸವನ ವಿಗ್ರಹವಿದೆ. ಇದುಆಲಂಬಾಡಿಗೆ ಮುಖಮಾಡಿದೆ. ಹಸುಗಳು ಈ ಬಸವನನ್ನು ದೃಷ್ಟಿಸಿದರೆ ಫಲವಾಗುತ್ತವೆಂಬ ನಂಬಿಕೆ ನಮ್ಮ ಜನಪದರಿಗೆ. ಮಾದೇಶ್ವರ ದೇವಾಲಯದ ಎಡಭಾಗದಲ್ಲಿ ಈರತ್ತ ಕಟ್ಟೆ (ವಿರಕ್ತ ಕಟ್ಟೆ) ಇದೆ. ಇಲ್ಲಿ ಸಾಲೂರು ಮಠದ ಜಂಗಮರು ಕುಳಿತು ಬರುವ ಪರಿಷೆಗೆ ಮೂರು ಹಿಡಿ ಕಡಲೆ ಹಾಕಿ ಮತ್ತೆ ಮತ್ತೆ ಪ್ರಸಾದವಾಗಿ ಅಲ್ಲೇ ಕಡಲೆ ಪಡೆಯುತ್ತಾರೆ. ಹಿಂದೆ ಮಾದೇಶ್ವರರು ಉಕ್ಕನಳ್ಳಿ ಬಸವನಿಗೆ ಉಕ್ಕಿನ ಕಡಲೆಯನ್ನು ತಿನ್ನಿಸುತ್ತಿದ್ದರು ಎಂಬುದು ಮಾದೇಶ್ವರ ಕಾವ್ಯದಲ್ಲಿ ಬರುತ್ತದೆ. ಅದಕ್ಕೆ ಈಗಲಾದರೂ ಜಂಗಮರಿಗೆ ಕಡಲೆ ತಿನ್ನಿಸೋಣ ಎಂದು ಈ ರೀತಿ ಮಾಡುವ ಸಂಪ್ರದಾಯ ಬೆಳೆದು ಬಂದಿದೆ. ದೇವಾಲಯದ ದ್ವಾರವನ್ನು ಪ್ರವೇಶಿಸಿದ ಕೂಡಲೇ 'ಧೂಪದ ಕುಂಡ'ಸಿಗುತ್ತದೆ. ಇಲ್ಲಿ ಭಕ್ತಾದಿಗಳು ಮಾದೇಶ್ವರನಿಗೆ ಧೂಪ ಹಾಕಿ ಕೈ ಮುಗಿದು ಆಮೇಲೆ

ಮುಂದಿನ ಕೆಲಸ ಮಾಡುವರು. ಇಲ್ಲಿ ದೆವ್ವ ಹಿಡಿದವರಿಗೆ ದೆವ್ವ ಬಿಟ್ಟು ಹೋಗುತ್ತದೆ ಎಂಬ ನಂಬಿಕೆ.

ಜನರಿಗೆ ಧೂಪದ ಕುಂಡದ ಪಕ್ಕದಲ್ಲಿ ಗಾಳಿ ಬಸವನ ಗುಡಿ ಇದೆ. ಇದರ ಹಿಂದೆ ಮೂರುವರೆ ಅಡಿಯ ಒಂದು ಗಂಟೆಯಾಕಾರದ ಕಲ್ಲಿದೆ. ಇಲ್ಲಿಂದ ಭಕ್ತರು ಎದುರಿನ ಗರ್ಭಗುಡಿಯಲ್ಲಿರುವ ಮಾದೇಶ್ವರ ಲಿಂಗವನ್ನು ನೋಡಲು ಒಂದು ಕಿಂಡಿ ಇದೆ. ಲಿಂಗವನ್ನು ನೋಡಿ ಕೈ ಮುಗಿದು ಗೊಂಬೆಯಾಕಾರದ ಕಲ್ಲಿನ ಮೇಲೆ ಹಸ್ತ ಊರುತ್ತಾರೆ. ಇಷ್ಟಾರ್ಥಗಳು ಫಲಿಸುವುದಾದರೆ ಅಂಗೈ ಜಾರಿ ಬೆರಳುಗಳು ಬಿಡಿಸುಕೊಳ್ಳುತ್ತದೆ ಎಂದು ಜನರು ನಂಬುತ್ತಾರೆ.

ಮಾದೇಶ್ವರ ಕ್ಷೇತ್ರ ಹಲವಾರು ಮಹತ್ವಪೂರ್ಣ ಸ್ಥಳಗಳ ಆಗರವಾಗಿದೆ. ದೇವಾಲಯದ ಪಕ್ಕದಲ್ಲಿ ಅಂತರಗಂಗೆ ಇದೆ ಇದರ ಉದ್ಭವದ ಬಗೆಗೆ ಹೀಗೆ ಹೇಳುವುದುಂಟು. ಆಲಂಬಾಡಿ ಜುಂಜೇಗೌಡ ತನ್ನ ಹಸುಗಳ ಖಾಯಿಲೆ ವಾಸಿಯಾದರೆ ಉರಿಗದ್ದುಗೆಯನ್ನು ಕಟ್ಟಿಸುತ್ತೇನೆ ಎಂದು ಮಾದೇಶ್ವರರಲ್ಲಿ ಹರಕೆ ಕಟ್ಟಿಕೊಂಡ. ಆತನ ಭಕ್ತಿಗೆ ಮೆಚ್ಚಿದ ಮಾದೇಶ್ವರರು ಅಲ್ಲೇ ಇದ್ದ ಬಂಡೆಯನ್ನು ಕಾಲಿನಿಂದ ಒದೆಯಲು ನೀರು ಬುಗ್ಗೆಯಾಗಿ ಅದರ ಅಂತರಂಗದಿಂದ ಚಿಮ್ಮಲಾರಂಭಿಸಿತು. ಅದಕ್ಕೆ ಅಂತರಗಂಗೆ ಎಂದು ಹೆಸರಾಯಿತು. ಮಾದೇಶ್ವರ ಜುಂಜೆಗೌಡನನ್ನುದ್ದೇಶಿಸಿ "ಈ ಅಂತರಗಂಗೆಯ ನೀರನ್ನು ಬಿದಿರಗೊಟ್ಟದಲ್ಲಿ ಹಾಕಿ ದನಗಳಿಗೆ ಕುಡಿಸು. ಅದರಿಂದ ಹಸುಗಳ ಖಾಯಿಲೆ ಕೂಡಲೇ ವಾಸಿಯಾಗುತ್ತದೆ ಎಂದರು. ಜುಂಜೇಗೌಡ ಹಾಗೆಯೇ ಮಾಡಲು ಹಸುಗಳು ಗುಣಮುಖವಾದುವು. ಇದೇ ಅಂತರಗಂಗೆ. ಶೇಷಣ್ಣೊಡೆಯರ ಮರ ಗದ್ದುಗೆಯು ಬಿಲ್ಲಯ್ಯನ ಮಗ ಶೇಷಣ್ಣ ಗದ್ದುಗೆಯಾಗಿರುವ ಸ್ಥಳ. ಇದು ಮಾದೇಶ್ವರ ದೇವಾಲಯದ ಉತ್ತರಕ್ಕೆ ಇದೆ ಈತ ಅನ್ನಸಾಲಮ್ಮ ಬಿಲ್ಲಯ್ಯರ ಮಗ. ಮಾದೇಶ್ವರರ ಶಿಷ್ಯ ಇಲ್ಲಿ ಹನ್ನೆರಡು ವರ್ಷಕ್ಕೊಮ್ಮೆ ಸಾಲೂರು ಮಠದವರು ಹಾಗೂ ಅರ್ಚಕರು ಸೇರಿ ಆರಾಧನೆಯನ್ನು ನಡೆಸುತ್ತಾರೆ.

ಮಾದೇಶ್ವರ ದೇವಾಲಯಕ್ಕೆ ಸ್ವಲ್ಪ ದೂರವಿರುವ ಅಂದರೆ ಈಗಿನ ಮಹಾರಾಜರ ಛತ್ರದ ಎದುರು ಜಡೆಯಕಲ್ಲು ಎಂಬುದಿದೆ. ಇದು ಮಾದೇಶ್ವರರು ಸ್ನಾನ ಮಾಡಿ ತಮ್ಮ ಜಡೆಯನ್ನು ಒದರಿಕೊಂಡು ಬಿಸಿಲು ಕಾಯಿಸುತ್ತಿದ್ದ ಸ್ಥಳ ಎಂದು ಹೇಳುವರು.

ತಮ್ಮಡಗೇರಿಯಲ್ಲಿ ದುಂಡಮ್ಮನ ಸಮಾಧಿ ಇದೆ. ದುಂಡಮ್ಮ ಭಕ್ತ ಬೇಡರ ಕನ್ನಯ್ಯನ ಹೆಂಡತಿ. ಮಾದೇಶ್ವರರು ಈಕೆಯ ಮನೆಯಲ್ಲಿ ಬಂದು ಸೀಗೆಸೊಪ್ಪಿನ ಸಾರು, ರಾಗಿ ಮುದ್ದೆಯನ್ನು ಊಟ ಮಾಡಿ ಹೋಗುತ್ತಿದ್ದರಂತೆ. ದುಂಡಮ್ಮ ಮಾದೇಶ್ವರನ ಪರಮ ಭಕ್ತೆಯಾಗಿದ್ದಳಂತೆ.'ಬಿಲ್ಲಯ್ಯನ ಹೊಂಡ' ಅಂತರಗಂಗೆಯು ಹರಿಯುವಲ್ಲಿ ಇದೆ. ಬಿಲ್ಲಯ್ಯ ಮಾದೇಶ್ವರರ ಪೂಜೆಗೆ ಹೂವನ್ನು ತರುತ್ತಿದ್ದು ಹದಿನಾರು ವರ್ಷಗಳು ಕಳೆದುವು. ಒಂದು ದಿನ ಮರವನ್ನು ಹತ್ತಿ ಹೂ ಬಿಡಿಸುವಾಗ ಮೇಲಿಂದ ಬಿದ್ದು ಇಹವನ್ನು ತ್ಯಜಿಸಿದ. ಅದೇ ಬಿಲ್ಲಯ್ಯನ ಹೊಂಡ. ಇದು ದೇವಾಲಯಕ್ಕೆ ಒಂದು ಕಿಲೋಮೀಟರ್ ದೂರದಲ್ಲಿದೆ.



ಮಾದೇಶ್ವರ ದೇವಾಲಯದೆದುರು ಇರುವ ಬೆಟ್ಟವೇ ಎದುರು ಬೋಳಿ (ಎದುರು ಬೆಟ್ಟ) ಇದಕ್ಕೆ'ಈಶ್ವರ ಗುಡ್ಡ' ಎಂದೂ ಕರೆಯುವರು. ಜಾತ್ರೆಯ ಸಮಯದಲ್ಲಿ ಮಾದೇಶ್ವರ ಈ ಗುಡ್ಡದ ಮೇಲೆ ನಿಂತು ಬರುವ ಪರಿಸೆಯನ್ನು ನೋಡುತ್ತಾನೆ ಎಂಬ ಪ್ರತೀತಿ. ಇಲ್ಲಿ ಕಾರಯ್ಯ ಬಿಲ್ಲಯ್ಯ ಇಬ್ಬರ ತೋರುಗದ್ದುಗೆಗಳಿವೆ.

ದೇವಾಲಯಕ್ಕೆ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿ ಸಾಲೂರು ಮಠವಿದೆ. ಇದು ವೀರಶೈವ ಮಠ. ರಾಮಣ್ಣನ ಮನೆತನದವರು ಬೇಡ ಗಂಪಣದವರು, ದುಂಡೇಗೌಡರ ಮನೆತನದವರು, ಕಾಡು ಸೋಲಿಗರು, ಕಾಡು ಕುರುಬರು, ದೇವರ ಗುಡ್ಡರೇ ಮೊದಲಾದವರು ಜಾತಿಮತ ಭೇದವಿಲ್ಲದೆ ಈ ಮಠಕ್ಕೆ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಅನೇಕರು ಈ ಮಠದ ಗುರುಗಳಿಂದ ದೀಕ್ಷೆಯನ್ನು ಪಡೆದಿದ್ದಾರೆ. ಮಠದ ಗುರುಗಳು ಹಾಗು ಅವರ ಶಿಷ್ಯರುಗಳಿಗೆ ಮಾದೇಶ್ವರರ ಪೂಜೆಯಲ್ಲಿ ಅಗ್ರ ತಾಂಬೂಲ. ಕಾಡು ಜನರ ಏಳಿಗೆಗೆ ಈ ಮಠವು ಸ್ಥಾಪಿತವಾಯಿತು. ಈ ಮಠವನ್ನು ಸ್ಥಾಪಿಸಲು ಮೂಲ ಕಾರಣ ಮಾದೇಶ್ವರರು. ಇವರು ಮೊದಲು ಸಂಸಾರಿ ಸಂಗಪ್ಪನ ಜೊತೆಯಲ್ಲಿ ಬಂದಾಗ ಇಲ್ಲೊಂದು ಮಠವನ್ನು ಸ್ಥಾಪಿಸು ಎಂದರು. ಕಂಬವನ್ನು ನೆಟ್ಟು ಮಹೂರ್ತ ಮಾಡಿದರು. ಆ ಕಂಬ ಈಗಲೂ ಮಠದಲ್ಲಿದೆ. ಕುಂತೂರು ಮಠದ ಶಾಸನದಲ್ಲಿ ಸಾಲೂರು ಮಠದ ಸಾಲುಗಳ ಬಗೆಗೆ ಗೌರವಪೂರ್ಣ ಭಾವನೆ ಇದೆ. ಈ ಮಠದಲ್ಲಿ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಕುಂತೂರಿನಿಂದ ಬಂದು ಕಾಡು ಜನರಿಗೆ ದೀಕ್ಷೆ ನೀಡಿ ಅಲ್ಲೇ ಐಕ್ಯವಾದರು. ಅದಕ್ಕೆ 'ಶಾಂತಮಲ್ಲಿಕಾರ್ಜುನ ಗದ್ದುಗೆ'ಎಂದು ಕರೆಯುತ್ತಾರೆ. ಇಲ್ಲಿ ಮಾದೇಶ್ವರರ ಜೋಳಿಗೆ, ಬೆತ್ತ, ಶಂಖ, ಜಾಗಟೆಗಳು ಇನ್ನೂ ಕುರುಹಾಗಿ ಇವೆ. ಇಲ್ಲಿ ಮಕ್ಕಳಿಲ್ಲದವರಿಗೆ ಪಿಂಡಪ್ರಸಾದವನ್ನು ನೀಡಲಾಗುವುದು. ಅನೇಕ ಗ್ರಹ ಪೀಡೆ, ವ್ಯಾಧಿಗಳ ವಿಮೋಚನೆಗೆ ಯಂತ್ರವನ್ನು ಕಟ್ಟಲಾಗುವುದು.

ಮೊಟ್ಟಮೊದಲು ಮುಪ್ಪಿನ ಸ್ವಾಮಿಗಳು ಇಲ್ಲಿ ಒಂದು ವರ್ಣಮಾಲೆಯನ್ನು ಮಾಡಿಕೊಂಡುವಾಸವಾಗಿದ್ದರು. ಅವರು ಒಂದು ಸ್ತಂಬವನ್ನು ಮುಹೂರ್ತ ಮಾಡಿದರು ಎಂದು ' ಶ್ರೀ ಸಾಲೂರುಮಠ'ಎಂಬ ಹೊತ್ತಗೆಯ ಶ್ರೀ ನಾಗರಾಜು ಅವರು ಹೇಳಿದ್ದಾರೆ. ಇದರ ಪ್ರಕಾರ ಶ್ರೀ ಸಾಲೂರು ಸ್ವಾಮಿಗಳು, ಕರಿಬಸವಸ್ವಾಮಿಗಳು, ಶಾಂತಲಿಂಗ ಸ್ವಾಮಿಗಳು, ಸಾಲೂರು ಸ್ವಾಮಿಗಳು, ಮುದ್ದುವೀರ ಸ್ವಾಮಿಗಳು ಕೆಂಪನಂಜಸ್ವಾಮಿಗಳು, ಶಾಂತಲಿಂಗಸ್ವಾಮಿಗಳು, ಸಿದ್ಧವೀರಸ್ವಾಮಿಗಳು, ಗುಂಡೇಗಾಲದ ಸ್ವಾಮಿಗಳು, ಚೆನ್ನೂರಿನ ಸ್ವಾಮಿಗಳು, ದೇರಳ್ಳಿಸ್ವಾಮಿಗಳು, ಸಿದ್ದವೀರಸ್ವಾಮಿಗಳು, ಕೆಂಪನಂಜಸ್ವಾಮಿಗಳು, ಶಾಂತಮಲ್ಲಿಕಾರ್ಜುನಸ್ವಾಮಿಗಳು, ಮುದ್ದುವೀರಸ್ವಾಮಿಗಳು, ಈಗಿನ ಮಹಾದೇವಸ್ವಾಮಿಗಳು. ಶಿಕಾರಿಪುರದ ಸಾಲೂರು ಎಂಬ ಗ್ರಾಮದಿಂದ ಬಂದ ಸಾಲೂರು ಸ್ವಾಮಿಗಳು ಈ ಮಠದ ಪಟ್ಟಾಧಿಕಾರಿಗಳಾದುದರಿಂದ ಈ ಮಠಕ್ಕೆ ಸಾಲೂರು ಮಠ ಎಂಬ ಹೆಸರಾಯಿತು ಎಂಬ ಪ್ರತೀತಿ ಎಂದಿದ್ದಾರೆ. ಮಠದ ಪಕ್ಕದಲ್ಲಿ ಹಿಂದಿನ ಗುರುಗಳ ಪರಂಪರೆಯ ಹದಿನೈದು ಗದ್ದುಗೆಗಳಿವೆ. ಆದರೆ ಇನ್ನಷ್ಟು ಗುಹೆಗಳ ಗದ್ದುಗೆಗಳು

ಅಜ್ಞಾತವಾಗಿವೆಯೇನೋ ತಿಳಿಯದಾಗಿದೆ. ಈ ಮಠಕ್ಕೆ ಪೊನ್ನಾಚಿ, ಬರಗೂರು, ಆಲಂಬಾಡಿ, ಪೂಗ್ಯ, ಹಳಿಯೂರುಗಳಲ್ಲಿ ಐದು ಶಾಖಾ ಮಠಗಳಿವೆ. ಇವುಗಳನ್ನು ಮಾದೇಶ್ವರರ ಶಿಷ್ಯರಾದ ನಿರಂಜನ ಸ್ವಾಮಿಗಳು ಸ್ಥಾಪಿಸಿದರೆಂದು ತಿಳಿದುಬರುತ್ತದೆ. ೧೯೫೦ ರವರೆಗೆ ಮಾದೇಶ್ವರ ದೇವಸ್ಥಾನವು ಈ ಮಠದ ಸ್ವಾಮಿಗಳ ಆಡಳಿತದಲ್ಲಿದ್ದು ಅನಂತರ ಸರಕಾರ ವಹಿಸಿಕೊಂಡಿತು.

ಶ್ರವಣನನ್ನು ಮಾದೇಶ್ವರರು ಸಂಹರಿಸಿದ ಬೆಟ್ಟವೇ ಶ್ರವಣನ ಚೋಳಿ. ಇದು ಕೊಯಮತ್ತೂರು ಜಿಲ್ಲೆಯ ಸತ್ಯಮಂಗಲ ರಸ್ತೆಯಲ್ಲಿ ಗೋಪಿ ತಾಲ್ಲೂಕಿನ ಗೇರುಮಾಳದ ಬಳಿ ಇದೆ. ಇಲ್ಲೇ ಶ್ರವಣ ಚಮ್ಮಾವುಗೆಯನ್ನು ಮೆಟ್ಟಲು ಹೋಗಿ ಕಾಲು ಜಾರಿದ ಹೆಜ್ಜೆಯ ಗುರುತುಗಳು ಬಂಡೆಯ ಮೇಲೆ ಇವೆ. ಅರಮನೆಯ ಇಟ್ಟಿಗೆಯ ಚೂರುಗಳು ಕುರುಹುಗಳಾಗಿವೆ ಎಂದು ಹೇಳುತ್ತಾರೆ.

ಶ್ರವಣನನ್ನು ಸಂಹಾರ ಮಾಡುವುದಕ್ಕೆ ಮುಂಚೆ ಮಾದೇಶ್ವರರು ತಪಸ್ಸು ಮಾಡಿದ ಸ್ಥಳವೇ ತಪಸರೆ. ಸಾಲೂರು ಮಠದಿಂದ ಮಾರ್ಗಶಿರದಲ್ಲಿ ಆರಾಧನೆ ನಡೆಸುತ್ತಾರೆ ವರ್ಷಕ್ಕೊಮ್ಮೆ ಜಾತ್ರೆ ನಡೆಯುವಾಗ ಸುಮಾರು ಮಧ್ಯರಾತ್ರಿಯ ಎರಡು ಘಂಟೆಗೆ ಒಂದು ಹಸು ಬರುತ್ತದೆ. ತಮ್ಮಡಪ್ಪ ಹಾಲು ಕರೆದ ಸ್ವಲ್ಪ ಹೊತ್ತಿಗೆ ಯಾರಿಗೂ ಕಾಣಿಸಿಕೊಳ್ಳದೆ ಹೊರಟು ಹೋಗುತ್ತದೆಯಂತೆ. ಬೆಳಗ್ಗೆ ತಮ್ಮಡಿ ಪೂಜೆ ಮಾಡಿ ಹಿಂತಿರುಗುತ್ತಾನೆ.

ಮಾದೇಶ್ವರರು ನಾಗಮಲೆಗೆ ಹೋಗಿ ನೆಲೆಗೊಳ್ಳುವಾಗ ತಮ್ಮ ವಾಹನವಾದ ಹುಲಿಯನ್ನು ಸಂಕುಮಲೆಯಲ್ಲಿ ಸಂಕೋಲೆ ಬಿಗಿದು ಗಾಳಿಯಲ್ಲಿಟ್ಟರು. ಅದು ಮಾದೇಶ್ವರರನ್ನು ಬಿಟ್ಟು ಇರಲಾರೆ ಎಂದು ಬರುತ್ತಿರಲು ಮಾದೇಶ್ವರರು ಅದನ್ನು ಕಟ್ಟಿಹೊದರು. ಅಲ್ಲಿ ಆ ಪಾದಗಳ ಹೆಜ್ಜೆ ಇರುವುದನ್ನು ಕಾಣಬಹುದು. ಇದು ಸಂಕುಮಲೆಗೆ ಸುಮಾರು ಎರಡು ಕಿಲೋಮೀಟರ್ ದೂರದಲ್ಲಿದೆ.

ತಪಸರೆ ಬೆಟ್ಟದ ಪಕ್ಕದಲ್ಲಿ 'ಕಂಬದ ಬೋಳಿ' ಇದೆ. ಮಾದೇಶ್ವರರು ನಡುಮಲೆಗೆ ಬರುವಾಗ ಇಲ್ಲಿ ತಪಸರ (ಜಾಲಿ) ಕಂಬವನ್ನು ನೆಟ್ಟರೆಂಬ ಪ್ರತೀತಿ. ಮಾದೇಶ್ವರರ ಬೆಟ್ಟಕ್ಕೆ ಬರುವ ಪರಿಸೆಗಳು ಇಲ್ಲಿ ಸಂಸರ್ಗ ಸೇರಿದರೆ ಅಂಥವರನ್ನು ಹೊತ್ತುಕೊಂಡು ಹೋಗಿ ಕುಕ್ಕಿ ತಿನ್ನಲು ಹುಲಿಯನ್ನು ಬಿಡಬೇಕೆಂದು ಮಾದೇಶ್ವರರು ತಮ್ಮ ತಮ್ಮನಾದ ಕೊಂಗಳ್ಳಿ ಮಲ್ಲಪ್ಪನನ್ನು ಈ ಕಂಬದ ಮೇಲೆ ಕೂರಿಸಿದನಂತೆ.

"ನಾಗಮಲೆ" ಮಾದೇಶ್ವರ ಬೆಟ್ಟದ ಪೂರ್ವದಿಕ್ಕಿಗೆ ಸುಮಾರು ಹದಿನೆಂಟು ಕಿಲೋಮೀಟರ್ ದೂರದಲ್ಲಿದೆ. ಇಲ್ಲಿ ಮಾದೇಶ್ವರರು ತಪಸ್ಸು ಮಾಡಿದರು ಎಂದು ಹೇಳುತ್ತಾರೆ. ಇಲ್ಲೇ ದೊಡ್ಡ ಬಂಡೆಯೊಂದು ಲಿಂಗಾಕಾರವಾಗಿದೆ. ಸರ್ಪಾಕಾರದ ಬಂಡೆ ಲಿಂಗಕ್ಕೆ ನೆರಳು ಮಾಡಿದಂತೆ ಇದೆ ಲಿಂಗ ಸುಮಾರು ಇಪ್ಪತ್ತೈದು ಮೂವತ್ತು ಅಡಿ ಎತ್ತರವಿದೆ. ಇದು ನೋಡಲು ನಾಗಲಿಂಗ ಪುಷ್ಪದಂತಿದೆ. ಈ ಲಿಂಗದ ಮೇಲೆ ಒಂದು ಸಣ್ಣ ಬಂಡೆ ಇದೆ. ಇದಕ್ಕೆ ಗೊಟ್ಟಿಕಾಯಿ ಎಂದು ಹೇಳುತ್ತಾರೆ. ಒಮ್ಮೆ ಒಬ್ಬ ಕುರುಬರ ಹುಡುಗ ಗೊಟ್ಟಿಕಾಯಿಯನ್ನು ಲಿಂಗದ ಮೇಲೆ ಇಟ್ಟು ಚಚ್ಚುತ್ತಿರಲು ಮಾದೇಶ್ವರರು



ಕೋಪಗೊಂಡು ಆ ಹುಡುಗನನ್ನು ಕಮರಿಗೆ ತಳ್ಳಿದರಂತೆ. ಈಗಲೂ ಆ ಕಾಯಿ ಕಲ್ಲಾಗಿ ಬೆಳೆಯುತ್ತದೆಂಬ ನಂಬಿಕೆ. ಲಿಂಗ, ಸರ್ಪ ಎರಡೂ ನಾ ಹೆಚ್ಚು ತಾ ಹೆಚ್ಚು ಎಂದು ಬೆಳೆಯುತ್ತಿರಲು ಮಾದೇಶ್ವರರು ಕೋಪದಿಂದ ಸರ್ಪವನ್ನು ಕೆಳಗೆ ತಳ್ಳಿದರಂತೆ. ಆದರೂ ಸರ್ಪ ಮಾದೇಶ್ವರರಿಗೆ ನೆರಳಾಗಬೇಕೆಂದು ಎತ್ತರಕ್ಕೆ ಬೆಳೆದು ನಿಂತಿದೆ. ಹೆಂಗಸರು ಈ ಮಲೆಗೆ ಹೋಗುವಂತಿಲ್ಲ. ಪ್ರತಿದಿನ ದೇವಸ್ಥಾನದಲ್ಲಿ ಪೂಜೆ ನಡೆಯುತ್ತದೆ. ಇದನ್ನು ನಾಗಮಲೆಯಲ್ಲಿರುವ ಪುಟ್ಟ ತಮ್ಮಡಿ ಸಂತತಿಯವರು ಪೂಜಿಸಿಕೊಂಡು ಬರುತ್ತಿದ್ದಾರೆ. ವಿಶೇಷ ಸಂದರ್ಭಗಳಲ್ಲಿ ಸಾಲೂರುಮಠದ ಸ್ವಾಮಿಗಳು ಬರುತ್ತಾರೆ. ಇಲ್ಲಿಗೆ ಕಾಲ್ನಡಿಗೆಯಲ್ಲೇ ಹೋಗಬೇಕು.

ಪಾದದರೆ, ಸಂಕುಮಲೆ ಸುತ್ತಿನ ಕಾಡಿಗೆ 'ಕೊಂಡದ ಗುಳಿಕಾನು' ಎಂದು ಕರೆಯುತ್ತಾರೆ. ಸೋಲಿಗರ ನೀಲಯ್ಯ ತನ್ನ ಹೆಂಡತಿಯಾದ ಸಂಕಮ್ಮನ ಶೀಲದ ಬಗ್ಗೆ ಶಂಕಿಸಿ ಅವಳು ಸತ್ಯವಂತೆಯಾದರೆ ಈ ಬೆಂಕಿಕೊಂಡದಿಂದ ಹೊರ ಬರಲಿ ಎಂದು ಹೇಳಿ ಆಕೆಯನ್ನು ಬೆಂಕಿಗೆ ತಳ್ಳಿದ ಸ್ಥಳವಂತೆ.

ತಾಳು ಬೆಟ್ಟದಿಂದ ಸ್ವಲ್ಪದೂರ ಹೋದರೆ "ಬೇವಿನ ಹಟ್ಟಿ" ಸಿಗುತ್ತದೆ. ಇಲ್ಲಿ ಬೇವಿನಕಾಳಿ ಸಕಲೈಶ್ವರ್ಯದಿಂದ ಮೆರೆದ ತಾಣ. ಮಾದೇಶ್ವರರು ಆಕೆಯನ್ನು ಪರೀಕ್ಷಿಸಿದ ಸ್ಥಳ. ಬೇವಿನ ಕಾಳಿ ಎಳ್ಳಿನ ಭಿಕ್ಷೆ ನೀಡದೆ ಇರಲು ಆಕೆಯ ಸರ್ವಸ್ವವನ್ನೂ ನಾಶಮಾಡಿದ ಸ್ಥಳ ಇದೇ. ಮಾದೇಶ್ವರನ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ಹೋಗುವ ಪರಿಷೆ 'ಬೇವಿನಹಟ್ಟಿ ಧೂಪ' ಎಂದು ಹಾಕಿ ಮುಂದೆ ಹೋಗುವರು. ಬೇವಿನಕಾಳಿ ವಾಸವಾಗಿದ್ದ ಈ ಸ್ಥಳವು 'ಇಡಕೆ ಹಳ್ಳ'ದ ಹತ್ತಿರವೇ ಇದೆ.

ಮಾದೇಶ್ವರರು ಶ್ರೀಕ್ಷೇತ್ರಕ್ಕೆ ಬಂದು ಬಿಸಿಲಿನ ತಾಪವನ್ನು ತಾಳಲಾರದೆ ವಿಶ್ರಮಿಸಿಕೊಳ್ಳಲು ಬಂದು ಮರದ ಕೆಳಗೆ ಕುಳಿತುಕೊಂಡರು. ಆಗ ಕೆಲವು ಆನೆಗಳು ಬಂದು ಮಾದೇಶ್ವರರಿಗೆ ನೆರಳು ಮಾಡಿದವು. ಮಾದೇಶ್ವರರು ಅವುಗಳಿಗೆ ಮೋಕ್ಷ ನೀಡಿದರು. ಈ ಸ್ಥಳಕ್ಕೆ "ಆನೆ ತಲೆದಿಂಬು" ಎಂದು ಹೆಸರಾಯಿತು.

ಕಾಳಿ ಕಂಕಾಳಿಯರು ಶ್ರವಣನಿಗೆ ಕಾಡಮ್ಮೆ ಹಾಲನ್ನು ಗಡಿಗೆಯಲ್ಲಿ ತೆಗೆದುಕೊಂಡು ಹೋಗುತ್ತಿರಲು ಮಾದೇಶ್ವರರು ಅದನ್ನು ಕೆಳಗುರುಳುವಂತೆ ಮಾಡಿದರು. ಹಾಲು ಹರಿಯುತು. ಅದಕ್ಕೆ'ಹಾಲುಹಳ್ಳ' ಎಂದು ಹೆಸರಾಯಿತು. ಮತ್ತೊಂದು ಕಥೆ ಹೀಗಿದೆ. ಶೇಷಣ್ಣೊಡೆಯ ಮಾದೇಶ್ವರ ಪೂಜೆಗೆ ಹಾಲರುವಿಯನ್ನು ತೆಗೆದುಕೊಂಡು ಹೋಗುತ್ತಿದ್ದ. ಆತನ ದೃಢವನ್ನು ಪರೀಕ್ಷಿಸಲು ಅದನ್ನು ಕಾಲಿನಿಂದ ಉರುಳಿಸಿದರು. ಆಗ ಶೇಷಣ್ಣ ಮಾದೇಶ್ವರರ ಅಭಿಷೇಕಕ್ಕೆ ಹಾಲಿಲ್ಲವಲ್ಲ ಎಂದು ಆತ್ಮಹತ್ಯೆ ಮಾಡಿಕೊಳ್ಳಲನುವಾದನು. ಕೂಡಲೇ ಮಾದೇಶ್ವರರು ಆತನ ಭಕ್ತಿಗೆ ಮೆಚ್ಚಿ "ಈ ಹಾಲರುವಿಯಿಂದ ಹರಿದ ಹಾಲೇ ಹಾಲುಹಳ್ಳವಾಗಲೀ, ದೀಪಾವಳಿಯಲ್ಲಿ ಇದರಿಂದ ನನಗೆ ಮಜ್ಜನವಾಗಲಿ" ಎಂದು ಆಶೀರ್ವದಿಸಿದರು. ಇನ್ನೊಂದು ಕಥೆ ಹೀಗಿದೆ. "ಉತ್ತರಾಜಮ್ಮ ಬೆನ್ನುಮಚ್ಚೆ ಸೀಳಿಕೊಂಡು

ಬಂದ ಮಾದೇಶ್ವರರನ್ನುದ್ದೇಶಿಸಿ, ನನ್ನ ಕಂದ ಮಾದೇವಾ ನನ್ನ ಎದೆ ಹಾಲು ಬಿಗಿತವೆ ಊಟ ಮಾಡುಬಾರಪ್ಪಾ ಅಂದಾಗ 'ನಿನ್ನ ಎದೆ ಹಾಲು ಊಟ ಮಾಡಿದ್ರೆ ನಿನ್ನ ಹೊಟ್ಟೆಯಲ್ಲಿ ಹುಟ್ಟಿದಂತಾಗುತ್ತೆ ಕಂಬದ ಬೋಳಿ ಮ್ಯಾಲೆ ನಿಂತು ಮೂರು ತೊಟ್ಟು ಹಾಲು ಕರೆದುಬಿಟ್ರೆ ಚಿಕ್ಕ ಆಲಹಳ್ಳ, ದೊಡ್ಡ ಆಲಹಳ್ಳ ಅಂತ ಮೂರು ಹಾಲು ಹಳ್ಳ ಮಾಡ್ತೀನಿ ತಾಯಿ, ನನಗೆ ದೀವಳಿಗೆ ಸ್ವಾತಿಗೆ ಹಾಲು ಹಳ್ಳದಿಂದ ನನಗೆ ಹಾಲರುವಿ ಬರಲಿ ಎಂದು ಹೇಳಲು ಆಕೆ ಹಾಗೆಯೇ ಮಾಡಲು ಹಾಲು ಹಳ್ಳವಾಯಿತು ಎಂಬುದು ಮತ್ತೊಂದು ಪ್ರತೀತಿ. ಈಗಲೂ ಈ ಹಾಲು ಹಳ್ಳದಲ್ಲಿ ಹರಿಯುವ ನೀರು ಹಾಲಿನಂತೆ ಬೆಳ್ಳಗಿರುವುದು ಒಂದು ವಿಶೇಷ.

ಶ್ರವಣನ ಮರ್ಧನವನ್ನು ಮಾಡಿದ ಮೇಲೆ ಮಾದೇಶ್ವರರು ಅಲ್ಲಿದ್ದ ದೇವಾದಿ ದೇವತೆಗಳು, ಜಂಗಮರೂ, ಎಲ್ಲರನ್ನೂ ಶ್ರವಣನ ಮೇಲೆ ಒಂದೊಂದು ಕಲ್ಲು ಹಾಕಿ ಎಂದು ಹೇಳಿದಾಗ ರಂಗನಾಥ ಅಲ್ಲಿಂದ ಓಡಿದ. ಆಗ ಮಾದೇಶ್ವರರು ಆತನನ್ನು ತಡೆದು ನಿಲ್ಲಿಸಿದ ಆ ಸ್ಥಳವನ್ನೇ "ರಂಗನಾಥ ಸ್ವಾಮಿಯ ಒಡ್ಡು"ಎಂದು ಕರೆಯುತ್ತಾರೆ.

ಸಾಲೂರು ಮಠದ ಉತ್ತರ ದಿಕ್ಕಿಗೆ ಬಸವನ ತಲೆ ಇದೆ. ಇದಕ್ಕೆ ಬಳೇಕಲ್ಲು ಬಸಪ್ಪ(ಬಳಪದಕಲ್ಲು ಬಸವೇಶ್ವರ) ಎಂದು ಕರೆಯುತ್ತಾರೆ. ಇದರ ಬಾಲದ ಭಾಗವನ್ನು ಹೂಗ್ಯ. ಗ್ರಾಮದವರು ಕಾವೇರಿ ನದಿಯ ಹತ್ತಿರ ಪೂಜಿಸುತ್ತಾರೆ. ತಲೆಯ ಭಾಗದ ಬಳೇಕಲ್ಲು ಬಸಪ್ಪವನ್ನು ತಿಂಗಳಿಗೊಮ್ಮೆ ಮಾದೇಶ್ವರ ಬೆಟ್ಟದ ದೇವಾಲಯದ ಆಡಳಿತ ವರ್ಗದವರ ಪೂಜೆಗೆ ವ್ಯವಸ್ಥೆ ಮಾಡಿದ್ದಾರೆ. ಇದಕ್ಕೆ ಮಾರ್ಗಶಿರ ಮಾಸದಲ್ಲಿ ವಿಶೇಷ ಪೂಜೆ ನಡೆಯುತ್ತದೆ.

ಮಾದೇಶ್ವರನ ದನಗಳನ್ನು ಶೇಷಣ್ಣೊಡೆಯ ಕಾಯುತ್ತಿದ್ದ. ಒಂದು ದಿನ ಬಸವಗಳು ಗೌಜಲು ಹಕ್ಕಿಗಳಂತೆ ಹೋರಾಡುತ್ತಿರಲು ಒಂದು ಬಸವ ಮಡಿಯಿತು. ಅದಕ್ಕೆ ಗೌಜಲಕ್ಕಿ ಬಸವೇಶ್ವರ ಎಂದು ಹೆಸರಾಯಿತು.

"ಗಾಣದ ಗುದ್ದ"ದ ಹತ್ತಿರ 'ಹಿಂಡಿ ಬಸವೇಶ್ವರ' ದೇವಾಲಯವಿದೆ. ಮಾದೇಶ್ವರರಿಗೆ ಎಳ್ಳೆಣ್ಣೆ ತೆಗೆದು ಇಟ್ಟ ಹಿಂಡಿಯೇ ಬಸವನ ರೂಪ ತಾಳಿತಂತೆ. ಅದೇ 'ಹಿಂಡಿ ಬಸವೇಶ್ವರ' ರಾತ್ರಿ ಹೊತ್ತು ನಗಾರಿ, ಜಾಗಟೆ ಶಬ್ದ ಆಗುತ್ತದೆಂದು ಪ್ರತೀತಿ. ಇದು ಮಾದೇಶ್ವರ ದೇವಸ್ಥಾನದಿಂದ ೭ - ೮ ಕಿಲೋಮೀಟರ್ ದೂರದಲ್ಲಿದೆ. ಇದಕ್ಕೂ ಸಹ ಮಾದೇಶ್ವರ ದೇವಾಲಯದ ಆಡಳಿತ ವರ್ಗ ತಿಂಗಳಿಗೊಮ್ಮೆ ಪೂಜೆಯ ವ್ಯವಸ್ಥೆ ಮಾಡಿದ್ದಾರೆ.

'ಕಣಿವೆ ಬಸವೇಶ್ವರ' ನನ್ನು 'ಬಂಡಳ್ಳಿ ಬಸವ' ಎಂದೂ ಕರೆಯುವುದುಂಟು. ಬಂಡಳ್ಳಿ ದುರ್ಗದಿಂದ ಬರುತ್ತಿದ್ದ ಬಸವ ದಾರಿಯಲ್ಲಿ ಅಸು ನೀಗಿತಂತೆ. ಇದೇ ಕಣಿವೆ ಬಸವೇಶ್ವರನ ಗದ್ದುಗೆ. ಇದು ಆನೆ ತಲೆದಿಂಬಿನ ರಸ್ತೆಯ ಪಕ್ಕದಲ್ಲಿದೆ.

ತಮಿಳುನಾಡಿನ ಬರಗೂರಿನಲ್ಲಿರುವ ವೀರಭದ್ರೇಶ್ವರ ದೇವಾಲಯದ ಆಡಳಿತವನ್ನು ಮಾದೇಶ್ವರದೇವಾಲಯದ ಆಡಳಿತ ವರ್ಗವೇ ನೋಡಿಕೊಂಡು ಪೂಜಾಕಾರ್ಯವನ್ನು ನಡೆಸಿಕೊಂಡು ಹೋಗುತ್ತದೆ.



ಗೋಪಿನಾಥ ಎಂಬ ಊರಿನ ಪಕ್ಕದಲ್ಲಿ 'ಆದಿಮಲೆ ಮಾದಪ್ಪ' ನ ಬೆಟ್ಟ ಇದೆ. ಆಲಂಬಾಡಿ ಕಡೆಯಿಂದ ಮಾದೇಶ್ವರರು ಸುತ್ತಾಡಿಕೊಂಡು ಬರುವಾಗ ವಿಶ್ರಾಂತಿ ಪಡೆದ ಸ್ಥಳ ಇದೆಂದು ಹೇಳುತ್ತಾರೆ. ಇದಕ್ಕೂ ಕೂಡ ಮಾದೇಶ್ವರ ದೇವಾಲಯದವತಿಯಿಂದ ತಿಂಗಳಿಗೊಮ್ಮೆ ಮಾರ್ಗಶಿರ ಮಾಸದಲ್ಲಿ ಪೂಜೆ ನಡೆಯುತ್ತದೆ.

ಬೇಡ ಗಂಪಣ ರಾಜ್ಯವಾಗಿದ್ದ ಆಲಂಬಾಡಿಯಲ್ಲಿ ರಂಗನಾಥಸ್ವಾಮಿ ದೇವಾಲಯ ಕೋಟೆ, ಮದ್ದಿನ ಮನೆಗಳಿವೆ. ಇಂದು ಇವು ಬಹಳ ಶಿಥಿಲವಾಗಿದೆ.

ಸಂಕಮ್ಮನ ಮಲೆಗೆ ಹೋಗುವಾಗ 'ಸಂತೇಕಾನಿ ಬೋಳಿ' ಸಿಗುತ್ತದೆ. ಒಂದು ಸಾರಿ ಕಾಡಿನ ಬೇಡರು, ಬೇಟೆ ಆಡುತ್ತಿದ್ದರು. ಅವರ ಕಣ್ಣಿಗೆ ಒಂದು ಚಿನ್ನದ ಉಡ, ಎರಡು ಬೆಳ್ಳಿಯ ಉಡಗಳು ಕಾಣಿಸಿಕೊಂಡುವು. ಬೇಡರು ಅವುಗಳನ್ನು ಹಿಡಿಯಬೇಕೆಂದು ಹಿಂಬಾಲಿಸಿದರು. ಗವಿಯೊಂದರಲ್ಲಿ ಮಾದೇಶ್ವರರು ತಪಸ್ಸು ಮಾಡುತ್ತಿದ್ದರು. ಆ ಬಂಡೆಯ ಮಧ್ಯೆ ಈ ಉಡಗಳು ಹೋದ ಕೂಡಲೇ ಬಂಡೆಗಳು ಮುಚ್ಚಿಕೊಂಡವು. ಬೇಡರು ನಿರಾಶರಾಗಿ ಹೊರಟು ಹೋದರು. ಈಗಲೂ ಆ ಬಂಡೆಗಳ ಮಧ್ಯೆ ಪ್ರಕಾಶಮಾನವಾದ ಜ್ಯೋತಿ ಕಾಣಿಸುತ್ತದಂತೆ. ಇದಕ್ಕೆ ಭಕ್ತರು, ಪೂಜೆ ಸಲ್ಲಿಸುತ್ತಾರೆ. ಇದೇ'ಸಂತೇಕಾನಿಬೋಳಿ'.

ಇವಲ್ಲದೆ ಪಾಲಮಲೆ ಸಿದ್ಧೇಶ್ವರ, ಪೊನ್ನಾಚಿ ಮಲೆ ಪರಮೇಶ್ವರ ಮುಂತಾದ ದೇವತೆಗಳು, ಸೋಲಿಗರ, ಕಾಡುಜನರ ದೇವರುಗಳಾಗಿ ಮೆರೆಯುತ್ತಿದ್ದಾರೆ. ಬರಗೂರಿನ ಪಂದೇಶ್ವರ, ಮಾರ್ಟಳ್ಳಿ ಬ್ರಹ್ಮೇಶ್ವರ ಇವೆಲ್ಲಾ ಮಾದೇಶ್ವರ ಕ್ಷೇತ್ರದ ಸುತ್ತಲೂ ಇವೆ.

ಎಲಚೀಕೆರೆ, ಬಿದರಳ್ಳಿ, ಕಡಬೂರು, ಮಾರ್ಟಳ್ಳಿ, ನುಳ್ಳವಾಡಿ, ನಾಲ್‌ಕೋಡು, ಮಿಣ್ಯ, ಕೋಣನ ಕೆರೆ, ಕೊಕ್ಕಗೇರೆ, ತೋಕೆರೆ, ದೊಡ್ಡಣೆ, ತೊಳಸೀಕೆರೆ, ಅಣೆಹೊಲ, ಕೆಂಬದಿಕ್ಕಿ, ತೇಕಣೆ, ಗದ್ದಾಗೀರಪ್ಪನ ದೊಡ್ಡಿ, ಇಂಡಿಗನತ್ತ, ಕೀರನಹೊಲ, ಗೊರಸಾಣೆ, ಕೊಂಗನೂರು, ಪಡಿಸಲನತ್ತ, ಗೋಪಿನಾಥ, ಜಂಜೋಟಿ, ಆಲಂಬಾಡಿ, ಹೂಜಮಲೆ, ತಚ್ಚಿಕೆರೆ, ಗರಕೇಕಂಡಿ ಮುಂತಾದ ಸ್ಥಳಗಳನ್ನು ಮಾದೇಶ್ವರ ಕ್ಷೇತ್ರ ಆವರಿಸಿದೆ.

ದೇವಾಲಯದ ಹತ್ತಿರವಿರುವ ಊರು ತಮ್ಮಡಳ್ಳಿ (ದೇವರಳ್ಳಿ) ಹಿಂದೆ ತಮ್ಮಡಿಗಳು ದೇವಾಲಯದ ಹತ್ತಿರ ಮನೆ ಮಾಡಿಕೊಂಡು ಇದ್ದರು. ಇವರಿಗೆ ಕಂಪಣದವರು ಎಂದು ಕರೆಯುವರು. ಇವರು ಬೇಡಗಂಪಣ ರಾಜ್ಯದಲ್ಲಿದ್ದ ಜನರು ಕಂಪಣದವರು (ಒಂದು ರೀತಿಯ ಆಯುಧವನ್ನು ಹೊಂದಿದವರು). ಇವರು ಮಾದೇಶ್ವರನ ಭಕ್ತರು ಇವರಲ್ಲಿ 'ಗೌಡರು' 'ತಮ್ಮಡಿಗಳು' ಎಂಬ ಎರಡು ವಿಧಗಳುಂಟು. ಒಬ್ಬರು ಮತ್ತೊಬ್ಬರಿಗೆ ಹೆಣ್ಣು ಕೊಡುವುದು ತರುವುದು ಮಾಡುತ್ತಾರೆ. ಆದರೆ ಒಂದೇ ಪಂಗಡದಲ್ಲಿ ಅಂದರೆ ಗೌಡರ ಗುಂಪಿನಲ್ಲಿ ಗೌಡರು ಮದುವೆ ಆಗುವುದಿಲ್ಲ ಏಕೆಂದರೆ ಅವರಿಬ್ಬರೂ ಅಣ್ಣ ತಮ್ಮಂದಿರಾಗುತ್ತಾರೆ ಎಂಬ ದೃಷ್ಟಿಯಿಂದ. ಗೌಡರಲ್ಲೂ ಅನೇಕ ಗುಂಪುಗಳಿವೆ. ಕೆಲವರು ಬಸವೇಶ್ವರನನ್ನು ಪೂಜಿಸುತ್ತಾರೆ. ತಮ್ಮಡಿತನವನ್ನು ಗಂಡು ಸಂತತಿಯವರು ಮಾತ್ರ

ವಹಿಸಿಕೊಳ್ಳುತ್ತಾಳೆ. ಗೌಡರ ಹೆಂಗಸರು ಮಾದೇಶ್ವರನ್ನು ಪೂಜಿಸುವುದಿಲ್ಲ ಅಂದರೆ ತಮ್ಮಡಿತನವನ್ನು ಮಾಡುವುದಿಲ್ಲ. ಅವರು ಭಕ್ತರಾಗಿ ಪೂಜೆಗೆ ಸಹಾಯಕರಾಗುತ್ತಾರೆ. ಇವರು ಲಿಂಗಧಾರಿಗಳಾದರೂ ಇವರ ಮದುವೆ ಮುಂತಾದ ಕಾರ್ಯಗಳು ಗಿರಿಜನರ ಸಂಪ್ರದಾಯವನ್ನು ಹೋಲುತ್ತವೆ. ಎಲ್ಲಾ ಶಾಸ್ತ್ರಗಳಾದ ಮೇಲೆ ಹೆಣ್ಣಿನ ಮನೆಯಲ್ಲಿ ತಾಳಿಕಟ್ಟಿಸುತ್ತಾರೆ. ಪೂಜಾರಿ ಕಾರ್ಯಗಳಲ್ಲಿ ಸಾಲೂರು ಮಠದ ಸ್ವಾಮಿಗಳು ಬರುತ್ತಾರೆ. ಕುಂತೂರು ಮಠದ ಜಂಗಮರಿಲ್ಲದೆ ಇವರು ಮದುವೆ ಮಾಡುವಂತಿಲ್ಲ. ಹಿಂದೆ ಮದುವೆ ಐದು ದಿನಗಳು ನಡೆಯುತ್ತಿದ್ದುವು. ಈಗ ಅದು ಕಾಲಕ್ಕೆ ತಕ್ಕಂತೆ ಮೂರೇ ದಿನಗಳಲ್ಲಿ ಮುಗಿಯುತ್ತದೆ. ತಮ್ಮಡಿಗಳು ಭಾವಮೈದುನ ಆದುದರಿಂದ ಅದೇ ಪಂಗಡದಿಂದ ಹೆಣ್ಣು ತರುವುದಿಲ್ಲ. ಗಂಡಿನ ಮನೆಯಲ್ಲಿ ಹುಡುಗನಿಗೆ, ವಧುವಿನ ಮನೆಯಲ್ಲಿ ಹೆಣ್ಣಿಗೆ ಕಂಕಣ ಕಟ್ಟಿಸುತ್ತಾರೆ. ಈ ಸಂಪ್ರದಾಯದವರು ತಮಿಳು ನಾಡಿನಲ್ಲೂ ಸಹ ಇದ್ದಾರೆ. ಇವರನ್ನು ಬೇಡರ ಕನ್ನಯ್ಯನ ಮೂಲ ಸಂತತಿಯವರು ಎಂದು ಹೇಳುತ್ತಾರೆ. ಇವರೆಲ್ಲರ ದೀಕ್ಷಾ ಗುರುಗಳು ಸಾಲೂರು ಮಠದ ಸ್ವಾಮಿಗಳು. ಮಾದೇಶ್ವರರನ್ನು ಪೂಜಿಸಲು ಕಾಳಮಾದ ಒಡೆಯ, ಚೋಳಮಾದಒಡೆಯ, ಕೆಂಪಮಾದಒಡೆಯರ ಸಂತಾನದ ಮೂರು ಒಕ್ಕಲುಗಳಿವೆ. ಇವರು ಗೇರು ಮಾಳ, ಹಾಸನೂರು, ತಟ್ಟೇ ಬಾಗಿಲುಗಳಲ್ಲಿದ್ದಾರೆ. ಇವರು ಕ್ರಮವಾಗಿ ನಾಲ್ಕು ನಾಲ್ಕು ತಿಂಗಳಿಗೊಮ್ಮೆ ಮಾದೇಶ್ವರರನ್ನು ಪೂಜಿಸುತ್ತಾರೆ. ತಮ್ಮ ಸರದಿ ಬಂದಾಗ ತಮ್ಮಡಗೇರಿಯಲ್ಲಿ ಬಂದಿದ್ದುಕೊಂಡು ಪೂಜೆ ಮಾಡಿ ಮತ್ತೆ ಹಿಂತಿರುಗಿ ಹೋಗುತ್ತಾರೆ.

ಹಿಂದೆ ಈ ಕ್ಷೇತ್ರದಲ್ಲಿ ಸೋಲಿಗರು, ಕುರುಬರು ವಾಸವಾಗಿದ್ದು, ಜೇನು ಕೀಳುವುದು, ಬೇಟೆ ಆಡುವುದನ್ನು ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದರು. ಬರಬರುತ್ತಾ ವ್ಯವಸಾಯ ಮಾಡಿ ರಾಗಿ, ಜೋಳ, ಅವರೆ ತೊಗರಿ, ಹುರುಳಿ, ಉಚ್ಚೆಳ್ಳು, ಎಳ್ಳು, ಮುಂತಾದವುಗಳನ್ನು ಬೆಳೆಯುತ್ತಿದ್ದಾರೆ. ಇಲ್ಲಿ ಎಲ್ಲಾ ರೀತಿಯ ಜನರೂ ವಾಸವಾಗಿದ್ದು ಶಾಲೆ, ಆಸ್ಪತ್ರೆ, ಮುಂತಾದ ಸೌಲಭ್ಯಗಳನ್ನು ಪಡೆದಿದ್ದಾರೆ. ಈಗ ಮಾದೇಶ್ವರ ಕ್ಷೇತ್ರ ಸುಸಂಸ್ಕೃತಿಯ ನೆಲೆಯಾಗಿದೆ.

* * * * *

## ಶಿಷ್ಟ ಜಾತ್ರೆ

ಕರ್ನಾಟಕದಲ್ಲಿ ಮಲೆಯ ಮಾದೇಶ್ವರನ ಜಾತ್ರೆ ಅತ್ಯಂತ ವೈಶಿಷ್ಟ್ಯಮಯವಾದುದು. ವೈಭವಪೂರ್ಣವಾದುದು. ಜನಪದ ಸಾಹಿತ್ಯದಲ್ಲಿ, ಶಿಷ್ಟ ಸಾಹಿತ್ಯದಲ್ಲಿ ಮಾದೇಶ್ವರ ಜಾತ್ರೆಯ ವರ್ಣನೆ ಇರುವುದು ಸಾಹಿತ್ಯಲೋಕದಲ್ಲೇ ಒಂದು ಅಪರೂಪ. ಒಂದೇ ದೇವರ ಜಾತ್ರೆ ಹಲವಾರು ಊರುಗಳಲ್ಲಿ ನಡೆಯುವುದು. ಮತ್ತೊಂದು ವಿಶೇಷ. ಅದೂ ಅಲ್ಲದೆ ಒಂದೇ ದೇವರಿಗೆ ಹಲವಾರು ಸಾರಿ ಜಾತ್ರೆಯಾಗುವುದೂ ಒಂದು ವಿಶೇಷ. ಜಾತ್ರೆಯಲ್ಲಿ ಹಲವಾರು ಸಂಪ್ರದಾಯಗಳು, ಕಲೆಗಳ ಪ್ರದರ್ಶನಗಳು, ದಾಸೋಹ ಮುಂತಾದುವುಗಳು ನಡೆಯುತ್ತವೆ. ಪ್ರಕೃತಿ ಸೌಂದರ್ಯದ ನಡುವೆ ನಡೆಯುವ ಮಾದೇಶ್ವರನ ಜಾತ್ರೆ ಕಣ್ಮನಗಳಿಗೆ ಆನಂದವನ್ನೀಯುವುದು, ಶಾಂತಿ, ನೆಮ್ಮದಿ, ಆನಂದ ತರುವುದಲ್ಲದೆ ಮನವು ಭಕ್ತಿಲೋಕದಲ್ಲಿ ವಿಹರಿಸುವುದು. ಜಾತ್ರೆಗೆ ಭಕ್ತರು, ಕವಿ, ಕಲಾವಿದರು, ಭಾವುಕರು, ಪರಿಷೆಗಳು, ವಿರಕ್ತರು, ಆಗಮಿಸುವರು. ಅಧ್ಯಯನದ ದೃಷ್ಟಿಯಿಂದ ಮಾದೇಶ್ವರ ಜಾತ್ರೆ ಮಹತ್ವಪೂರ್ಣವಾದುದು. ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಮಾದೇಶ್ವರನ ಬೆಟ್ಟದಲ್ಲಾಗುವ ಜಾತ್ರೆಗೆ ಜಾತಿಮತ ಭೇದವಿಲ್ಲ. ಎಲ್ಲಾ ಜಾತಿ ಕೋಮಿನವರ ಜನ ಸೇರುವ ಭಾವೈಕ್ಯದ ತಾಣ. ಕಿವಿಗಿಂಪು ನೀಡುವ ಜಾನಪದ ಸಂಗೀತ ಮೊಳಗುವ ಕ್ಷೇತ್ರ. ಭಕ್ತಿಯ ಮಹಾಪೂರದ ನೆಲೆ!

* * * * *

## ಜಾತ್ರೆ - ಒಂದು ವಿಶ್ಲೇಷಣ

ವ್ಯಾಪಾರ ವ್ಯವಹಾರಗಳೊಂದಿಗೆ ಜನಪದರ ಮನರಂಜನೆಯನ್ನು ವರ್ಷದ ಒಂದು ನಿರ್ದಿಷ್ಟಕಾಲದಲ್ಲಿ, ನಿರ್ದಿಷ್ಟ ಸ್ಥಳದಲ್ಲಿ ನಡೆಯುವ ಸಾಮಾಜಿಕ ಚಟುವಟಿಕೆಯೇ ಜಾತ್ರೆ, ಜನ ಸಂದಣಿಯೇ ಬಂಡವಾಳ. ವರ್ಷವಿಡೀ ರೈತ ಕೆಲಸ ಮಾಡಿ, ಸಾಕಾಗಿ, ಸುಗ್ಗಿಯಾದ ಮೇಲೆ ಮಿತ್ರ, ಬಂಧು ಬಾಂಧವರೊಡನೆ ಸೇರಿ ಸಂತೋಷದಿಂದ ದೇವರ ಪೂಜೆ ಮಾಡಿ ಜೀವನಕ್ಕೆ ನೆಮ್ಮದಿ ಪಡೆಯಲು ಒಂದು ಸದಾವಕಶ ಜಾತ್ರೆ. ಜಾತ್ರೆಗೆ ಬರುವ ಜನರಿಗೆ'ಪರಿಸೆ' ಎಂದು ಕರೆಯುವುದುಂಟು. ಜಾತ್ರೆ ಮುಗಿಸಿ ಬತಾಸು, ಕಲ್ಯಾಣ ಸೇವೆ, ಖಾರಸೇವೆ, ಲಾಡು ಮೊದಲಾದವುಗಳನ್ನು ತಿನ್ನುತ್ತಾ, ಪಾತ್ರೆ ಪಗಡಿ ಮುಂತಾದುವುಗಳನ್ನು ಕೊಂಡುಕೊಳ್ಳುತ್ತಾ ನೀರು ಮಜ್ಜಿಗೆ ಪಾನಕ, ಮುಂತಾದ ಪರವುಗಳಲ್ಲಿನ ದಾಸೋಹ ಸ್ವೀಕರಿಸುತ್ತಾ, ಒಂದೆರಡು ದಿನ ಶಾಂತಿ, ನೆಮ್ಮದಿ, ಮನೋರಂಜನೆ ಪಡೆಯುವರು.

ಸಂತೆ, ತೇರು, ಜಾತ್ರೆ, ಉತ್ಸವಗಳು ಜನಪದ ಸಮಾಜದ ಸಂಘಟಿತ ವ್ಯವಸ್ಥೆಗಳು. ಸಾಂಸ್ಕೃತಿಕ ಸಮಾವೇಶದ ಸಂದರ್ಭ. ಜಾತ್ರೆ ಎಂಬುದು ಸುಗ್ಗಿ ಮುಗಿದು ರೈತ ಹಿಗ್ಗಿನಿಂದ ಕಣಜ ತುಂಬಿ ದೇವರ ದರ್ಶನ, ಜಾತ್ರೆಗೆ ಹೋಗಲು ಒಂದು ಸುಸಂದರ್ಭ, ಊರೂರ ಜನರನ್ನು, ನೆಂಟರಿಷ್ಟರನ್ನು ಕೂಡಿ ಕೊಂಡು ಸಂತೋಷದಿಂದ ಕಾಲ ಕಳೆಯುವ ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸುವ ಸಮಯ. ಇಲ್ಲಿ ಹಣ-ಹಣ್ಣು ಕೊಳ್ಳುವ, ಕೊಡುವ ವ್ಯವಹಾರ ನಡೆಯುವುದು. ಭಕ್ತರು ಶ್ರದ್ಧೆ, ಭಕ್ತಿಗಳಿಂದ ಪೂಜೆಯನ್ನು ಸಲ್ಲಿಸುತ್ತಾರೆ. ವ್ಯಾಪಾರಿಗಳು ಅಂಗಡಿ ಮುಂಗಟ್ಟು ಇಟ್ಟು ಮಾರುವರು. ಹೊಟೇಲು, ಸಿನೆಮಾ, ಆಟಗಳು, ಕುಸ್ತಿ, ದೊಣ್ಣೆವರಸೆ, ಕೈಚಳಕದ ಪ್ರದರ್ಶನಗಳು, ಸರ್ಕಸ್ಸು, ನರ್ತನ ಕೂಟಗಳು, ವಾದ್ಯಗೋಷ್ಠಿಗಳು ನಡೆಯುವುವು. ಅನೇಕ ಜನಪದ ಕಲಾವಿದರು ಬಂದು ತಮ್ಮ ಕಲೆಯನ್ನು ಪ್ರದರ್ಶಿಸಿ, ಜನರನ್ನು ಮನೆರಂಜಿಸುತ್ತಾರೆ. ಬಡವ-ಬಲ್ಲಿದ, ಗಂಡು-ಹೆಣ್ಣು, ಮಕ್ಕಳು ದೊಡ್ಡವರು, ಜಾತಿ-ಮತ ಭೇದವಿಲ್ಲದೆ ಎಲ್ಲಾ ರೀತಿಯ ಜನರು ಸೇರುವುದನ್ನು ನೋಡಿದರೆ ಇದೊಂದು ಭಾವೈಕ್ಯದ ತಾಣವೆಂದೇ ಹೇಳಬಹುದು. ಜಾತ್ರೆಗಳಲ್ಲಿ ದನಗಳ ವ್ಯಾಪಾರವೂ ನಡೆಯುವುದು. ಎಲ್ಲಿ ದೇವಸ್ಥಾನಗಳಿವೆಯೋ ಅಲ್ಲೆಲ್ಲಾ ಜಾತ್ರೆಗಳು ಆಯಾ ಪ್ರಮಾಣದಲ್ಲಿ ನಡೆಯುತ್ತವೆ. ಮರದ ತೇರು, ಅವುಗಳಿಗೆ ಬಾವುಟಗಳ ಅಲಂಕಾರ, ಹೂವಿನ ಅಲಂಕಾರ ಮಾಡಿ ದೇವರ ಉತ್ಸವಮೂರ್ತಿ ಕುಳ್ಳರಿಸಿ ಎಳೆದಾಗ, ಜನರು ಬಾಳೆಹಣ್ಣು, ಜವನ, ಕಾಸನ್ನು ಎಸೆಯುವುದುಂಟು. ಆಗ ಬಿದ್ದ ಕಾಸನ್ನು ಕೊರಳಿಗೆ ಕಟ್ಟಿಕೊಂಡರೆ ಶುಭ ಎಂಬ ನಂಬಿಕೆ ನಮ್ಮ ಜನಪದರಿಗೆ. ಜಯಘೋಷ ಮಾಡುತ್ತಾ, ತೇರು ಎಳೆದ ಮೇಲೆ ಜಾತ್ರೆಯ ತೇರು ಮುಗಿದಂತೆ. ಜನರೆಲ್ಲಾ ತಮ್ಮ ಹರಕೆ ಸಲ್ಲಿಸುತ್ತಾರೆ ದೇವರಿಗೆ ಈ ಸಂದರ್ಭದಲ್ಲಿ.



ಹರಕೆ ಹೊತ್ತವರು ಮಂಡೆ ತೆಗೆಸುತ್ತಾರೆ. ಬಾಯಿಗೆ ಬೀಗ ಹಾಕುತ್ತಾರೆ, ಪಂಜಿನ ಸೇವೆ, ಉರುಳು ಸೇವೆ, ದಿಂಡುರುಳು ಸೇವೆ ಮುಂತಾದುವನ್ನು ಮಾಡುತ್ತಾರೆ. ಪ್ರಸಾದ ಹಂಚಿಕೆ, ದಾಸೋಹ, ಪಂಚಾಮೃತದ ವಿತರಣೆ, ನಾನಾ ರೀತಿಯ ಸೇವೆಗಳು, ಪರವನ್ನು ನಡೆಸುವರು. ಸಂಪ್ರದಾಯವಾಗಿ ನಡೆಸಿಕೊಂಡು ಬಂದ ಜಾತ್ರೆಯನ್ನು ಸಾಮಾನ್ಯವಾಗಿ ವರ್ಷಕ್ಕೊಮ್ಮೆ ನಡೆಸುವರು.

ಭಕ್ತರು ಹಿಂದೆ ನಡೆದು ಹೋಗುವಾಗ ಬುತ್ತಿ ಕಟ್ಟಿಕೊಂಡು ಹೋಗುತ್ತಿದ್ದುದುಂಟು. ಈಗ ಎಲ್ಲಾ ಸೌಲಭ್ಯಗಳಿರುವುದರಿಂದ ಹೊಟೇಲುಗಳಲ್ಲಾಗಲೀ, ದಾಸೋಹ ಮಠದಲ್ಲಾಗಲೀ ಊಟ ಮಾಡುತ್ತಾರೆ.

ಜಾತ್ರೆಗಳೆಂದರೆ ದೇವರಿಗೆ ವಿಶೇಷ ಪೂಜೆ, ಉತ್ಸವ, ಸಡಗರ, ಸಂಭ್ರಮ, ಸಂತೋಷದ ವಾತಾವರಣ. ವರ್ಷ, ಎರಡು ವರ್ಷಗಳಿಗೊಮ್ಮೆ, ಕುಂಭ ಮೇಳದಂಥ ಜಾತ್ರೆ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವುದು. ಜಾತ್ರೆಗೆ ಸುತ್ತಮುತ್ತಣ ಹಳ್ಳಿಯ ಭಕ್ತರಿಗೆ ಕಲಾವಿದರಿಗೆ ಹಬ್ಬ. ಹಗಲು- ರಾತ್ರಿ ಎನ್ನದೆ ಹರ-ಹರಿಕಥೆಗಳು ನಡೆಯುತ್ತವೆ. ಓಲಗ, ನಂದೀಧ್ವಜ ಕುಣಿತ. ಲಿಂಗಬೀರನ ಕುಣಿತ, ಡೊಳ್ಳು, ಕರಡಿ ಮಜಲ್, ತಮಟೆ ವಾದನ ಮುಂತಾದುವುಗಳ ಸಂಗಮವೇ ಇರುತ್ತದೆ. ರಾತ್ರಿ ಎಲ್ಲಾ ಜಾಗರಣೆ ಇರಲು ಕಾಲ ನೂಕಲು ಅವರಿಗೆ ಈ ಮನರಂಜನೆಗಳೆಲ್ಲಾ ಇರುವುದು ಸಹಜವೇ. ಕಲಾಸ್ಪರ್ದೆಗಳೂ ನಡೆಯುತ್ತವೆ. ಜಾತ್ರೆ ಸಾಂಸ್ಕೃತಿಕ ಕಾರ್ಯಕ್ರಮಗಳ ವಿನಿಮಯ ಕೇಂದ್ರ.

ಜಾತ್ರೆಗಳು ಇಂದಿಗೂ ಸಂಪ್ರದಾಯ ಬದ್ಧವಾಗಿ ನಡೆಯುತ್ತವೆ. ಆದರೆ ಕಾಲ ಬದಲಾದಂತೆ ಸ್ವಲ್ಪ ಬದಲಾವಣೆಗಳಾಗಬಹುದು. ಹಿಂದಿನ ಸಂಪ್ರದಾಯ, ವೈಭವ, ಸೊಗಡು ಮಾತ್ರ ಇದ್ದೇ ಇರುತ್ತದೆ. ಈಗಂತೂ ಜಾತ್ರೆಯೊಂದೇ ನಮ್ಮ ಜನಪದ ಕಲಾವಿದರಿಗೆ ದೈವದ ಆರಾಧನೆ ಮಾಡಲು ಸಮಯ ವೃತ್ತಿಗಾಯಕರಾದ ಇವರಿಗೆ ನಾಲ್ಕು ಕಾಸು ಸಂಪಾದಿಸಲು ಉಳಿದಿರುವ ದಾರಿ ಎಂದರೆ ತಪ್ಪಾಗಲಾರದು. ಚೌಡಿಕೆ, ಕರಪಾಲ, ಗೊಂದಲಿಗರ ಮೇಳ ಮೊದಲಾದ ಕಲೆಗಳು. ಸಮಾಜ ಶಿಕ್ಷಣ ಮತ್ತು ಸಂಸ್ಕೃತಿ ಪ್ರಸಾರದ ಸೇವೆಯನ್ನು ಮಾಡುತ್ತಾ ಬರುತ್ತಿವೆ.

ಜಾತ್ರೆಗಳಲ್ಲಿ ಪರಿಶುದ್ಧತೆಗೆ ಆದ್ಯತೆ ನೀಡಲಾಗುವುದು. ಕೆಲವು ಜಾತ್ರೆಗಳಲ್ಲಿ ಸೆರೆ ಸೇಂದಿ ಕುಡಿವರು, ಕುರಿ-ಕೋಳಿ ಬಲಿಕೊಡುವರು, ಮಾಂಸಹಾರ ತಿನ್ನುವುದುಂಟು. ಹೆಚ್ಚಿನ ಜಾತ್ರೆಗಳಲ್ಲಿ ಸಸ್ಯಾಹಾರವೇ ದಾಸೋಹ.

ಜಾತ್ರೆ ಒಂದು ದಿನದಿಂದ ನಾಲ್ಕಾರು ದಿನಗಳು ನಡೆಯುತ್ತವೆ. ತೇರು ಒಂದು ದಿನವಾದರೆ ತೆಪ್ಪೋತ್ಸವ, ಅಡ್ಡಪಲ್ಲಕ್ಕಿ ಉತ್ಸವ, ಕೊಂಡೋತ್ಸವ, ಹೀಗೆ ಹತ್ತು ಹಲವಾರು ಉತ್ಸವಗಳನ್ನು ವಿಜೃಂಭಣೆಯಿಂದ ಹಗಲಿರುಳೆನ್ನದೆ ಸತತವಾಗಿ ನಡೆಸುವರು. ಬಾಣ ಬಿರುಸುಗಳು, ಪಟಾಕಿ ಶಬ್ಧಗಳೊಂದಿಗೆ, ಜನರು ದೇವರ ಜಯಕಾರದೊಂದಿಗೆ, ಹಾಡು ಕುಣಿತಗಳೊಂದಿಗೆ, ನಲಿದು ನರ್ತಿಸಿ ಆನಂದ ಲೋಕದಲ್ಲಿ ವಿಹರಿಸುವ ನಮ್ಮ ಹಳ್ಳಿಗರಿಗೆ ಇದೊಂದು ಸದಾವಕಾಶ. ಸಾಲವಾದರೂ ಮಾಡಿ ಮನೆಯಲ್ಲಿ ಹಬ್ಬ ಮಾಡಿ, ಹೊಸಬಟ್ಟೆ

ಉಟ್ಟು, ಹಣ್ಣು ಕಾಯಿ ಪೂಜೆ ಮಾಡಿಸಿ. ದೇವರನ್ನು ಗೊರವರು, ಕಂಸಾಳೆಯವರು, ಜೋಗಿಗಳು, ತಂಬೂರಿಯವರು ಹರಿ-ಹರಕಥೆಯ ಹತ್ತು ಹಲವಾರು ಜನಪದ ಕಲಾವಿದರು ತಮ್ಮ ಭಕ್ತಿಯನ್ನು ಪ್ರಚುರಪಡಿಸಿ, ಆತನ ಅಥವಾ ಆಕೆಯ ಕಥೆಯನ್ನು ಪ್ರಚಾರ ಮಾಡುವ ಕೆಲಸವನ್ನು ನಿರ್ವಹಿಸುತ್ತಾರೆ. ಜಾತ್ರೆಯ ತಾಣ, ವಾದ್ಯ, ಕುಣಿತ., ಹಾಡುಗಳ ಸಂಗಮವೇ ಆಗಿರುತ್ತದೆ.ಇವನ್ನೆಲ್ಲಾ ನೋಡಿದಾಗ ಜಾತ್ರೆಯು ವೈಭವವಾಗಿ ಕಣ್ಮನಗಳಿಗೆ ಆನಂದ ನೀಡುವುದು. ಒಂದೊಂದು ಜಾತ್ರೆಯೂ ಒಂದೊಂದು ರೀತಿಯ ವೈಶಿಷ್ಟ್ಯ-ವೈವಿಧ್ಯತೆಯಿಂದ ಕೂಡಿರುತ್ತದೆ. ಜಾತ್ರೆಗಳು ಆ ಪ್ರದೇಶದ ಜನರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಭಾವೈಕ್ಯ ಸೂಚಿಸುವುದು. ಮನರಂಜನೆಯ ಪ್ರತೀಕವಾಗಿರುತ್ತ.ದೆ. ಆಯಾ ಪ್ರದೇಶದ ,ಕಲೆ, ಸಾಹಿತ್ಯ, ಸಂಗೀತ, ವೇಷಭೂಷಣಗಳ ದರ್ಶನವಾಗತ್ತದೆ.

ಜಾತ್ರೆಯ ಬಗೆಗೆ ಅನೇಕ ಮಾತುಗಳನ್ನು ಕೇಳುತ್ತೇವೆ. " ಒಳ್ಳೇ ಜಾತ್ರೆಗೆ ಸೇರಿದ ಹಾಗೆ ಸೇರಿದ್ರು" 'ಜನ ಮರುಳೊ ಜಾತ್ರೆ ಮರುಳೋ" ಮುಂತಾದುವು. ಜಾತ್ರೆ ಶೈವ, ವೈಷ್ಣವ ದೇವರು, ಶರಣರು, ಮಾರಿ-ಮಸಣಿಯರು, ಯಾರದೇ ಆಗಬಹುದು. ಎಲ್ಲವೂ ಜನರಿಗೆ ಸಂತೋಷ, ನೆಮ್ಮದಿ, ಶಾಂತಿ, ಮನರಂಜನೆ ಒದಗಿಸುವುದಲ್ಲದೆ ಧಾರ್ಮಿಕ ಮನೋಭಾವನೆಯನ್ನು ಬೆಳೆಸುತ್ತದೆ. ಭಕ್ತಿಒಡಮೂಡಿಸುತ್ತದೆ.

ಮನುಷ್ಯ ವರ್ಷದಲ್ಲಿ ಹಲವಾರು ದಿನಗಳು ನಿರಂತರವಾಗಿ ಕೆಲಸ ಮಾಡಿ ಸುಧಾರಿಸಿಕೊಂಡು ನಾಲ್ಕಾರು ದಿನ ಆರಾಮವಾಗಿ ಕಾಲಕಳೆಯಲು ತೇರು, ಜಾತ್ರೆ, ಉತ್ಸವ, ಮುಂತಾದ ಧಾರ್ಮಿಕ ಆಚರಣೆಗಳಲ್ಲಿ ತೊಡಗುತ್ತಾನೆ. ಈ ಆಚರಣೆಗಳು ಜೀವನದಲ್ಲಿ ಸಂತೋಷ ತಂದೊದಗಿಸುವುವು. ಸಮಾಜದ ಹಿತರಕ್ಷಣೆ ಇವರ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಅಭಿವ್ಯಕ್ತಿಸುವ ಹಲವು ಆಚರಣೆಗಳಲ್ಲಿ ಜಾತ್ರೆ ಒಂದು ಪ್ರಮುಖವಾದುದು. ಜಾತ್ರೆಗಳು ಸ್ಥಳ ಅಥವಾ ದೇವರ ಹೆಸರಿನಲ್ಲಿ ಜನಪ್ರಿಯವಾಗಿವೆ.

ಜಾತ್ರೆ ಸಮಸ್ತ ಸಾಮಾಜಿಕ ಪರಂಪರೆಯ ಅಭಿವ್ಯಕ್ತಿಯಾಗಿರುವ ಜಾನಪದದ ಅನೇಕ ಅಂಶಗಳನ್ನೊಳಗೊಂಡಿದೆ. ಯಾವುದೋ ಒಂದು ನಿಗಧಿಯಾದ ವೇಳೆಯಲ್ಲಿ ಜನರೆಲ್ಲಾ ಸೇರಿ ದೇವರನ್ನು ಆರಾಧಿಸುವುದಕ್ಕೆ'ಜಾತ್ರೆ' ಎಂದು ಕರೆವರು. ಜನರೆಲ್ಲಾ ಈ ಸಂದರ್ಭದಲ್ಲಿ ಒಂದೆಡೆ ಸೇರುವರು. ಇದರ ಜೊತೆಗೆ ವ್ಯಾಪಾರ, ವ್ಯವಹಾರ, ಮದುವೆ, ಕುಟುಂಬದ ಮಾತುಕತೆ ಆಡಲು ಸಹಾಯವಾಗುವುದು.

ಕರ್ನಾಟಕದ ಜಾತ್ರೆಗಳ ಸ್ವರೂಪ, ಉದ್ದೇಶ ಒಂದೇ ರೀತಿಯಾಗಿದ್ದರೂ ಶಿಷ್ಟ ದೇವರುಗಳ ಸಮ್ಮುಖದಲ್ಲಿ ಜರಗುವ ಜಾತ್ರೆಗಿಂತ ಗ್ರಾಮೀಣ ಜಾತ್ರೆಗಳು ಭಿನ್ನವಾಗಿರುತ್ತದೆ. ಶಿಷ್ಟ ದೇವರ ಜಾತ್ರೆ ಪುರಾಣದ ಹಿನ್ನಲೆ ಇದ್ದು ಪೂಜೆ ಶಾಸ್ತ್ರೋಕ್ತವಾಗಿರುತ್ತದೆ. ತಿಥಿ, ನಕ್ಷತ್ರ, ವಾರಗಳನ್ನು ಅವಲಂಬಿಸಿರುತ್ತದೆ. ಮೇಲು ವರ್ಗದ ದೈವಗಳ ಜಾತ್ರೆಗಳು ಸರ್ಕಾರದ ಅಧೀನದಲ್ಲಿ ಅಂದರೆ ದತ್ತಿ ಆಯುಕ್ತರ



ಮೇಲ್ವಿಚಾರಣೆಯಲ್ಲಿ ನಡೆಯುವುದು. ಉದಾಹರಣೆಗೆ ತಲಕಾಡು ಪಂಚಲಿಂಗದರ್ಶನ, ಗೊಮ್ಮಟನ ಮಹಾಮಸ್ತಕಾಭಿಷೇಕ ಮುಂತಾದುವು.

ಗ್ರಾಮೀಣ ಜಾತ್ರೆಗಳು ಜನಪದ ಸಂಸ್ಕೃತಿಯನ್ನು ಬೀರುತ್ತವೆ. ಜಾತ್ರೆಯ ದಿನವನ್ನು ಜನರೇ ನಿರ್ಧರಿಸುವರು. ಇವುಗಳ ವಿಧಿ, ಆಚರಣೆ ಮೇಲು ವರ್ಗದವರ ಆಚರಣೆಗಿಂತ ಭಿನ್ನ, ಬಿಗಿ, ಕೆಲವೊಮ್ಮೆ ಅಮಾನುಷವೂ ಆಗಿರುತ್ತದೆ.

ಒಂದು ಜಾತಿಗೆ ಸಂಬಂಧಿಸಿದ ಜಾತೆ ನಡೆದರೂ ಗ್ರಾಮದ ಎಲ್ಲಾ ಜಾತಿಯವರೂ ಭಾಗವಹಿಸುತ್ತಾರೆ. ಮಂಟೇಸ್ವಾಮಿ, ಮಾದೇಶ್ವರರ ಜಾತ್ರೆಗಳಲ್ಲಿ ಈ ರೀತಿಯಾಗಿ ಭಾಗವಹಿಸುವುದಿಲ್ಲ ಎನ್ನುತ್ತಾರೆ.

ನಿಘಂಟಿನಲ್ಲಿ ' ಜಾತ್ರೆ ' ಎಂದರೆ ಪುಣ್ಯಕ್ಷೇತ್ರ ದರ್ಶನ, ಧಾರ್ಮಿಕ ಉದ್ದೇಶದಿಂದ ಮಾಡುವ ಪ್ರಯಾಣ, ಯಾತ್ರೆ, ರಥೋತ್ಸವ ಎಂದಿದೆ. ಈ ಸಂದರ್ಭದಲ್ಲಿ ಸೇರುವ ಜನರ ಗುಂಪಿಗೆ 'ಪರಿಸೆ' ಎಂದೂ ಕರೆದರು. ಕನ್ನಡ ಕಾವ್ಯಗಳಲ್ಲಿ ಜಾತ್ರೆಯ ವರ್ಣನೆಗಳನ್ನು ಮಾಡಿದ್ದಾರೆ. ಬ್ರಹ್ಮ ಶಿವನ ಸಮಯ ಪರೀಕ್ಷೆ, ಯಶೋಧರ ಚರಿತೆಯಲ್ಲಿ ಮಾರಿಯ ಜಾತ್ರೆ, ನಾಗರಾಜಕವಿಯ ಪುಣ್ಯಾಸ್ರವ ಕಾವ್ಯದಲ್ಲಿ ಜಾತ್ರೆಯ ಬಗೆಗೆ ಉಲ್ಲೇಖಗಳಿವೆ. ಈ ಜಾತ್ರೆಗಳ ಬಗೆಗೆ ಗಾದೆಗಳೂ ಬಂದಿವೆ. 'ವರುಷ ಹೆಚ್ಚಾದರೆ ಪರಿಸೆ ಸಂಗಡ ಹೋಗಲಿಕ್ಕೇನು?" 'ಜಾತ್ರೆಗೆ ಹೋದರೂ ಪಾತ್ರೆ ಬಿಡಲಿಲ್ಲ' , 'ಜಾತ್ರೆಗೆ ಹೋದವರು ಪಾತ್ರೆ ತರದೆ ಬರಬಾರದು','ಜಾತ್ರೆಯೂ ಮುಗೀತು ಧೋತ್ರವೂ ಹರೀತು' , 'ಜಾತ್ರೆಗಿಂತ ಗಂಟುಕಳ್ಳರು ಸೇರಿದರು', 'ಮೊಣೆ ಓಣೆ ದೋಣೆ ಮೂರೂ ಇಲ್ಲದಿದ್ದರೆ ಕಾಶಿಯಾತ್ರೆಗೆ ಹೋಗಿ ಬಂದೇನು', 'ಕುಲಕ್ಕೊಂದು ಜಾತ್ರೆ ಜನಕ್ಕೊಂದು ಬುದ್ಧಿ, 'ಕೇರಿಗೊಬ್ಬ ಹನುಮಪ್ಪ ಊರಿಗೊಂದು ಜಾತ್ರೆ', 'ಜನಿದ್ದರೆ ಜಾತ್ರೆ', ' ಜನ ಮರುಳೋ ಜಾತ್ರೆ ಮರುಳೋ' ಮುಂತಾದುವು.

ಜಾತ್ರೆಗೆ ಸಂಬಂಧವಾದ ಹಾಡುಗಳೂ ಹುಟ್ಟಿ, ಜಾತ್ರೆಯ ಜೊತೆಯಲ್ಲೇ ಬೆಳೆದಿದೆ.

ತುಂಬೆ ವೂನಂಗೆ ತುಂಬಿತಲ್ಲೆ ನಿನ್ನ ಪರಿಸೆ
ಕಡಲೆಕಾಯಿನಂಗೆ ಕಡಿತಲ್ಲೆ ನಿನ್ನ ಪರಿಸೆ
ವರುಸಕ್ಕೊಂದುಸತಿ ತುಂಬೀತು||
ಚಿಕ್ಕರೆ ಸುತ್ತ ಕಲ್ಲಿಲ್ಲ ಮುಳ್ಳಿಲ್ಲ
ಸೋಸಿ ಬತ್ತವಳೆ ಎಸೆ ಜವನ | ಚೌಡಮ್ಮ
ಜಾತರಿಗೆ ಬಂದೋರು ಕೊಂಡೋಗಿ |
..........................."

ಕತೆ, ಲಾವಣಿ, ಒಡಪು, ಬಯಲಾಟ, ಹಾಡುಗಳಲ್ಲಿ, ಜಾತ್ರೆಯ ಉಲ್ಲೇಖಗಳಿವೆ. ಜಾತ್ರೆಗೆ ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ, ಐತಿಹಾಸಿಕ, ಸಾಮಾಜಿಕವೆಂಬ ಹಲವು ಮುಖಗಳಿವೆ. ದೇವರ ಮಹಿಮೆ, ಪವಾಡ, ಐತಿಹ್ಯ, ಚರಿತೆಯನ್ನು ಆಚರಿಸುತ್ತಾರೆ. ತಮ್ಮ ಭಯ ಭಕ್ತಿಗಳನ್ನು, ಹರಕೆಯನ್ನು ಸಲ್ಲಿಸುತ್ತಾರೆ. ಭಕ್ತಿ ಪರಂಪರೆಯನ್ನು

ಮುಂದುವರಿಸುತ್ತಾರೆ. ವರ್ಷ ವರ್ಷ ದೇವರ ಅನುಗ್ರಹಕ್ಕೆ ಪಾತ್ರರಾಗುತ್ತೇವೆಂಬ ದೃಢ ನಂಬಿಕೆ ಅವರದು. ಪ್ರತಿ ಜಾತ್ರೆಗೂ ಒಂದು ಆರಂಭ ಒಂದು ಮುಕ್ತಾಯವಿರುತ್ತದೆ. ಆವಾಹನೆ -ವಿಸರ್ಜನೆ ಇರುತ್ತದೆ. ಆವಾಹನೆ ವಿಸರ್ಜನೆಯ ನಡುವೆ ಜಾತ್ರೆ.

ಆಯಾ ಊರಿನ ಹೆಸರೊಡನೆ ದೇವತೆಗಳ ಹೆಸರನ್ನು ಹೇಳುವರು. ಮದ್ದೂರಮ್ಮ ಹೊಸೂರಮ್ಮ, ಮುಂತಾದುವು. ಗ್ರಾಮದೇವತೆಗಳು. ಸಾಮಾನ್ಯವಾಗಿ ಹೆಣ್ಣು ದೇವತೆಗಳ ಅಬ್ಬಿಲಕ್ಕಮ್ಮ, ಗುತ್ತಮ್ಮ, ಸತ್ಯಮ್ಮ, ಮಾರಮ್ಮ ಇತ್ಯಾದಿ ಎಲ್ಲಮ್ಮನ ಜಾತ್ರೆ ಬಹಳ ಪ್ರಮುಖವಾದುದು. ಮಾರಮ್ಮನ ಕತೆಯ ಚೌಕಟ್ಟನ್ನು ಮೊದಲು ನೀಡಿದವ ಪೊನ್ನ ಕವಿ. ಇದು ಶಾಂತಿನಾಥ ಪುರಾಣದಲ್ಲಿ ಸಂಕ್ಷಿಪ್ತವಾಗಿ ಬಂದಿದೆ.

ಜಾತ್ರೆ ವರ್ಷಕ್ಕೊಮ್ಮೆ ನಿಗದಿಯಾದ ಇನ್ನಿತರ ಅವಧಿಗೂ ಗೊತ್ತಾದ ಸ್ಥಳದಲ್ಲಿ ಒಂದು ದಿನವೋ, ಇನ್ನೂ ಹೆಚ್ಚಿನ ದಿನವೋ ನಡೆಯುವಲ್ಲಿ ಜನರು ಸೇರಿ ನಡೆಸುವ ಉತ್ಸವ. ಹತ್ತು ಹದಿನೈದು ದಿನಗಳೂ ನಡೆಯುವುದುಂಟು. ಈ ಮಹೋತ್ಸವದಲ್ಲಿ ತೇರು ಎಳೆಯುವುದೂ ಉಂಟು. ಪುಣ್ಯನದಿಯಲ್ಲಿ ಮೀಯುವುದಕ್ಕೂ ಗೊತ್ತಾದ ದಿನದಂದು ಸೇರುವ ಮೇಳಗಳೂ ಜಾತ್ರೆಗಳು. ಕೆಲವು ಜಾತ್ರೆಗಳು ರಾಷ್ಟ್ರೀಯ ಹಬ್ಬಗಳಂತಾಗಿದೆ. ಆಟಪಾಟ ವಿನೋದಗಳಿದ್ದು ಮನರಂಜನೆ ಒದಗಿಸುತ್ತವೆ. ಕೋತಿ ಕುಣಿಸುವುದು, ಕರಡಿ ಆಡಿಸುವುದು, ಗಿರಗಿಟ್ಟಲೆ, ದೊಡ್ಡರಾಟೆ ತಿರುಗಿಸುದು, ಕೆಂಡ ಹಾಯಿಸುವುದು, ಸಿಡಿ. ಚಾವಟಿಯಿಂದ ಹೊಡೆದುಕೊಳ್ಳುವುದು. ನಾಲಿಗೆ ಗಲ್ಲಗಳಿಗೆ ತಾಮ್ರದ ಮುಳ್ಳು, ಇಲ್ಲವೆ ಸರಿಗೆ ಹಾಕಿಕೊಳ್ಳುವುದು, ಎದೆ ಅಥವಾ ಹಣೆಗೆ ಖಡ್ಗದಿಂದ ರಕ್ತ ಚಿಮ್ಮುವಂತೆ ಹೊಡೆದು ಕೊಳ್ಳುವುದು, ಈಟಿಯಿಂದ ಹೊಟ್ಟೆಗೆ ಚುಚ್ಚಿಕೊಳ್ಳುವುದು, ತಲೆಯ ಮೇಲೆ ಉರಿವ ಬೆಂಕಿಯ ಗಡಿಗೆಯ ಕರಗ ಹೊರುವುದು. ಮುಳ್ಳು ಹಾವುಗೆ ಮೇಲೆ ನಿಲ್ಲುವುದು, ಗಾವು ಸಿಗಿಯುವುದು, ಕೋಳಿ ಪಂದ್ಯ ಮುಂತಾದುವುಗಳು ನಡೆವುವು. " ಹಬ್ಬ ಊಟಕ್ಕೆ ಚೆಂದ, ಜಾತ್ರೆ ನೋಟಕ್ಕೆ ಚೆಂದ'. ಜಾತ್ರೆಯ ಸಂದರ್ಭದಲ್ಲಿ ಹಬ್ಬವನ್ನು ಆಚರಿಸುತ್ತಾರೆ. ಜಾತ್ರೆ ನಿರ್ದಿಷ್ಟ ಸ್ಥಳದಲ್ಲಿ ನಡೆವುದು. ಇದು ಜನಸಾಮಾನ್ಯ ಹಬ್ಬ, ಸಡಗರ, ಸಂಭ್ರಮ, ಅವರ ಸಂಪ್ರದಾಯಿಕ ಆಚಾರ ವಿಚಾರಗಳು, ಆಶೆ, ಆಶೋತ್ತರಗಳು ಜಾತ್ರೆಯಲಿ ಅಭಿವ್ಯಕ್ತವಾಗಿವೆ.

ಹರಕೆಯಿಂದ ಬಂದ ದವಸಧಾನ್ಯಗಳಿಂದ ದಾಸೋಹ ನಡೆಯುತ್ತದೆ. ಇದಕ್ಕೆ 'ಅರವಟ್ಟಿಗೆ' ಗಳೆಂದು ಹೆಸರು. ತೇರಿಗೆ ಬಂಡಿ, ರಥ, ಕುರ್ಜು, ವಾನ್ಯಾವು ಎಂದು ಕರೆವರು. ತೇರಿರುವ ಜಾಗಕ್ಕೆ ತೇರಿನ ಬೀದಿ ಎಂದೇ ಕರೆಯುವರು. ದೇವತಾವಿಗ್ರಹವನ್ನು ಇಟ್ಟು ಎಳೆಯುವ ಅಲಂಕಾರದ ಬಂಡಿಯೇ ತೇರು. ಇದಕ್ಕೆ ನಾಲ್ಕು ಗಾಲಿಗಳಿರುತ್ತವೆ. ಕಬ್ಬಿಣ, ಬೆಳ್ಳಿಯಲ್ಲಿ, ತೇರು ಇದ್ದರೂ ಮರದ್ದೇ ಹೆಚ್ಚು ಪ್ರಾಮುಖ್ಯ. ವಿಜಯನಗರದ ಕಲ್ಲಿನ ತೇರು ಪ್ರಸಿದ್ಧಿಯಾಗಿದೆ.

ತೇರುಗಳನ್ನು ಹಳೇ ಮೈಸೂರು, ದಕ್ಷಿಣ ಕನ್ನಡ, ಉತ್ತರ ಕರ್ನಾಟಕದ ತೇರುಗಳೆಂದು ವಿಂಗಡಿಸಬಹುದು. ತೇರುಗಳನ್ನು ಮೇಲ್ಭಾಗ, ಮಧ್ಯಭಾಗ, ಕೆಳಭಾಗ ಎಂದು



ವಿಂಗಡಿಸಬುದು. ಕೆಳಗಿನ ಭಾಗದಲ್ಲಿ ಚಕ್ರಗಳು ರಥದ ಪೀಠ ಇರುವುದು. ದೇವರು ಪ್ರಾಣಿಪಕ್ಷಿಗಳ ಚಿತ್ರಗಳನ್ನು ತೇರಿನ ಹೊರ ಮೈಯಲ್ಲಿ ಕೆತ್ತಿರುತ್ತಾರೆ.. ಎರಡನೆ ಭಾಗವನ್ನು ಅಂದ ಚೆಂದದ, ಅಂತಸ್ತುಗಳಿಂದ, ಬಿದಿರು ಬೊಂಬುಗಳಿಂದ ಮಾಡಿ ಗೋಪುರಾಕಾರದಲ್ಲಿ ಕಟ್ಟುವರು. ಪುಟ್ಟ ಕೊಠಡಿಗಳಿರುವಂಥ ಜಾಗದಲ್ಲಿ ಜನರು ನಿಲ್ಲುವಂತೆ ಕೂರುವಂತೆ ಮಾಡಿರುತ್ತಾರೆ. ಅದರ ಸುತ್ತಾ ಬಣ್ಣಬಣ್ಣದ ಬಾವುಟಗಳನ್ನು ಕಟಿರುತ್ತಾರೆ. ದಕ್ಷಿಣ ಕನ್ನಡದಲ್ಲಿ ತೇರು ಗುಂಡಗಿರುತ್ತದೆ. ಗವೆಯಂತೆ ಚಕ್ರದಂತೆ ದೂರಕ್ಕೆ ಕಾಣುತ್ತದೆ.

ತೇರಿನ ಮೂರನೆಯ ಭಾಗ ತೇರಿನ ತುದಿಯನ್ನು ಬಿದಿರ ದಬ್ಬೆಯು ಚೂಪಾಗಿ ಕಳಶದಂತೆ ಕಟ್ಟಿರುತ್ತಾರೆ. ಇದರ ಮೇಲೆ ಕಾಸು, ಬಾಳೆಹಣ್ಣು, ಜವನ ಎಸೆಯುವರು. ಈ ಭಾಗವನ್ನು ಹೂವಿನಿಂದ ಅಲಂಕರಿಸಿರುತ್ತಾರೆ. ಬಾಳೆದಿಂಡು (ಬಾಳೆಕಂದು) ಕಟ್ಟಿ ಅದಕ್ಕೆ ಹೂವಿನ ಅಲಂಕಾರ ಮಾಡುವರು. ಮದುವೆಯಾದವರು ತೇರು ಎಳೆದರೆ ಮಕ್ಕಳಾಗುವುದೆಂದು ನಂಬಿಕೆ. ಕುರುಜು ಎಂದರೆ ವಿಗ್ರಹಗಳನ್ನಿಡುವುದಕ್ಕೋಸ್ಕರ ರಾಜರು, ವಧುವರರನ್ನು ಕೂರಿಸುವುದಕ್ಕೋಸ್ಕರ ಅಲಂಕರಿಸುದ ಮಂಟಪ ಇದರ ಅರ್ಥ. ಈ 'ಕುರ್ಜು' ಎಂಬ ಪದ ಜನಪದ ಹಾಡುಗಳಲ್ಲಿ ಸಿಗುತ್ತದೆ.

ಕರಿಯ ಕಬ್ಬಿನ ಜೊಲ್ಲೆ ಗರಿಗರಿಗೆ ಸುಂಗಾರ
ಕುರ್ಜ ಗಾಡೀಲಿ ಬರವೋಳೆ | ಚೌಡಮ್ಮ
ನಿನ್ನ ಮಾಯಾ ಒಬ್ಬರಿಗೆ ತಿಳಿಯಾವು |

ಡಾ. ದೇವೇಂದ್ರ ಕುಮಾರ ಹಕಾರಿಯವರು ಹೇಳುವಂತೆ " ಜಾತ್ರೆ ನಮ್ಮ ಸಮಷ್ಟಿ ಬದುಕಿನ ಒಂದು ಸಂಕೀರ್ಣ, ಸಾಮಾಜಿಕ, ಧಾರ್ಮಿಕ ಸಂಗತಿಗಳಿಂದ ಸಮನ್ವಿತವಾದ ಸಾಂಸ್ಕೃತಿಕ ಸತ್ಯ".

ಹಳ್ಳಿಗಳಲ್ಲಿ ಜಾತ್ರೆಯಾದಾಗ ಸಾರಿಸುತ್ತಾರೆ. ಆ ಸಮಯದಲ್ಲಿ ಬೇರೆ ಊರಿನಿಂದ ಬಂದ ಜನರಿದ್ದರೂ ಅವರು ಆ ಮಾರಿ ಜಾತ್ರೆ ತೀರಿಸಿಕೊಂಡೇ ಹೋಗಬೇಕು, ಎಂಬ ಕಟ್ಟಪ್ಪಣೆ. ಇಲ್ಲದಿದ್ದರೆ ಏನಾದರೂ ಅನಾಹುತಗಳಾಗುತ್ತವೆ ಎಂಬ ನಂಬಿಕೆ ನಮ್ಮ ಜನಪದರಿಗೆ.

ಮಾದೇಶ್ವರನ ಜಾತ್ರೆಯನ್ನು ಜನಪದ ಹಾಗೂ ಶಿಷ್ಟ ಸಾಹಿತ್ಯ ಎರಡರಲ್ಲೂ ಚಿತ್ರಿಸಿದೆ. ಶಿಷ್ಟ ಸಾಹಿತ್ಯದಲ್ಲಿ ನಮಗೆ ದೊರೆಯುವುದು ಒಂದೇ ಒಂದು ಕೃತಿ. ಅದು ಮಿಣ್ಯದ ಗುರುಸಿದ್ಧಕವಿಯು ಬರೆದ 'ಮಾದೇಶ್ವರ ಸಾಂಗತ್ಯ'. ಆದರೆ ಇನ್ನಷ್ಟು ಕಾವ್ಯ ಕಾಲನ ದವಡೆಯಲಿ ಸಿಕ್ಕಿರುವುದೋ ತಿಳಿಯದು. ಹಾಗೆಯೇ ಜನಪದ ಸಾಹಿತ್ಯದಲ್ಲಿ ಮಾದೇಶ್ವರನ ಜಾತ್ರೆಯ ಬಗೆಗೆ ಹಲವಾರು ಜನಪದ ಕವಿಗಳು ಬಣ್ಣಿಸಿ ಹೋಗಿದ್ದಾರೆ. ಸಿಕ್ಕಿರುವ ಕೆಲವು ಪದ್ಯಗಳ ಸಂಗ್ರಹವನ್ನು ಮುಂದೆ ಕೊಡಲಾಗಿದೆ. ಜನಪದ ಹಾಗೂ ಶಿಷ್ಟ ಕಾವ್ಯ ಎರಡರಲ್ಲೂ ಮಾದೇಶ್ವರ ಜಾತ್ರೆಯ ವರ್ಣನೆಯನ್ನು ಹೇಗೆ ಮಾಡಿದೆ ಎಂಬುದನ್ನು ನೋಡೋಣ.

# ಸಾಹಿತ್ಯದಲ್ಲಿ ಜಾತ್ರೆ

"ಮಾದೇಶ್ವರ ಸಾಂಗತ್ಯ" ಕೃತಿಯನ್ನು ಮಾದೇಶ್ವರ ಬೆಟ್ಟದ ಹತ್ತಿರವಿರುವ ಮಿಣ್ಯದ ಗುರುಸಿದ್ಧಕವಿ ರಚಿಸಿದ್ದಾರೆ. ಈತ ೧೭೫೦ರಲ್ಲಿದ್ದವ. ಈತ ಮಾದೇಶ್ವರನ ಜಾತ್ರೆಯನ್ನು ಕಣ್ಣಾರೆ ನೋಡಿದ್ದ ಕವಿ. "ಮಾದೇಶ್ವರ ಸಾಂಗತ್ಯ" ಕೃತಿ ಜಾತ್ರೆಯ ವರ್ಣನೆಯಿಂದ ಮುಕ್ತಾಯವಾಗುತ್ತದೆ. ಇದರಲ್ಲಿ ೧೦೫ ಪದ್ಯಗಳಿವೆ. ಒಂದು ಸಂಧಿಯನ್ನೇ ಜಾತ್ರೆಯ ವರ್ಣನೆಗೆ ಮೀಸಲಾಗಿಟ್ಟಿದ್ದಾನೆ ಕವಿ. ಕೃತಿಯ ಆರಂಭದಲ್ಲಿ ಮಲ್ಲಿಕಾರ್ಜುನ, ಗಣಪತಿ, ವಿಘ್ನೇಶ್ವರ, ಶಿವ, ಮುಂತಾದವರ ನೆನೆದು ಮಾಘ ಬಹುಳ ಚತುರ್ದಶಿಯ ಅಂದರೆ ಶಿವರಾತ್ರಿಗೆ ಮಾದೇಶ್ವರನ ಗಿರಿಗೆ ಬರುವ ಪರಿಷೆಯ ವರ್ಣನೆಯನ್ನು ಮಾಡಿದ್ದಾನೆ.

ಕೊಂಬು, ತಮ್ಮಟೆ, ಕಂಸಾಳೆ, ಡಮರುಗ, ಭೇರಿ ಮೊದಲಾದ ವಾದ್ಯ ಮೇಳದೊಂದಿಗೆ ಪರಿಷೆ ಸಂಭ್ರಮದಿಂದ ಬರುತ್ತಿದ್ದರು. ಗುರುಗಳು, ಸಿರಿವಂತರು, ಗುರು ಹಿರಿಯರನ್ನು ಭಕ್ತಿಯಿಂದ ನಮಿಸುವ ಭಕ್ತರು "ಹರಿಹರ ಮಹಾದೇವ" ಎಂದು ಸ್ತುತಿಸುತ್ತಾ ಸಾಲಾಗಿ ಬರುತ್ತಿದ್ದರು.

ಮಾದೇಶ್ವರನಿಗೆ ಕಾಣಿಕೆಯನ್ನು ಕಟ್ಟಿಕೊಂಡು ಬರುವ ಭಕ್ತರಿಗೆ ನಡುಮಲೆಯಲ್ಲಿ ಕಾಣುತ್ತಾನೆ. ಬೆಲ್ಲ, ಬೇಳೆ, ಹಣ್ಣು, ಕಾಯಿ, ಕಡಲೆ, ಕಬ್ಬು, ಎಳನೀರು, ಕಾಯಿ, ಅಕ್ಕಿ ಹೊತ್ತು ತರುವ ಕಪ್ಪು, ಬಿಳುಪು, ಚುಂಚು, ಕೂಡುಗೊಂಬು, ಸೇರಿಗೊಂಬು, ಮಂಡೆಗೊಂಬು, ನಗಾರಿಕೊಂಬು ಎತ್ತುಗಳು ವರ್ಣನೆಗೆ ನಿಲುಕದು. ಲೆಕ್ಕವಿಲ್ಲದಷ್ಟು ಹೇರುಗಳು ಸಾಗಿ ಬರುತ್ತವೆ. ಎತ್ತುಗಳ ಕೊಂಬಿನ ತುದಿಯ ಗೊಣಸು, ಸರಪಳಿ, ಗೆಜ್ಜೆ, ಗಂಟೆ, ಕೊರಳಗಗ್ಗರಗಳ ಶಬ್ಧಮಾಡುತ್ತಾ ಸಂಭ್ರಮದಿಂದ ಮೆರೆಯುತ್ತಾ ಸಾಗುತ್ತಿದ್ದವು. ಅಲಂಕಾರ ಕಣ್ಣಿಗೆ ಹಿತವಾಗಿದ್ದು, ನಾಲ್ಕು ದಿಕ್ಕುಗಳಿಂದಲೂ ಜನರು ಏರು ತಗ್ಗುಗಳನ್ನು ಹತ್ತಿ ಇಳಿಯುತ್ತಾ ಮಾದೇಶ್ವರನ ಬೆಟ್ಟಕ್ಕೆ ಬರುತ್ತಿದರು. ಮಕ್ಕಳು ಸ್ತ್ರೀ ಪುರುಷರು ಶೃಂಗಾರ ಮಾಡಿಕೊಂಡು ಬರುತ್ತಿದ್ದರು. ಪಟ್ಟೆಯ ಸೀರೆ, ಚಿನ್ನದ ಆಭರಣ, ತುರುಬಿನ ಅಲಂಕಾರ, ಕಣ್ಣಿಗೆ ಕಾಡಿಗೆ, ಹಣೆಯ ತಿಲಕಗಳಿಂದ ಶೋಭಿಸುತ್ತಿದ್ದರು. ಹಳದಿ, ಹಸಿರು, ತಿಳಿಗಾವಿ ಸೀರೆಯನ್ನುಟ್ಟು, ಬೆಳಕು ಕಣ್ಣುಳ್ಳ ಸುಂದರಿಯರು ಮಂದಹಾಸ ಬೀರುತ್ತಾ, ಹಂಸ ನಡಿಗೆಯಲ್ಲಿ ಬರುತ್ತಿದ್ದರು. ಉಬ್ಬಿದೆದೆ, ಬಟ್ಟಕುಚಗಳಿಗೆ ದೃಷ್ಟಿ ತಾಗಬಹುದೆಂದು ರವಿಕೆತೊಟ್ಟು, ಸೀರೆಯ ಸೆರಗಿನ ಮುಸುಕು ಹಾಕಿ ಮರಗಜದಂತೆ ನಡೆದು ಬರುತ್ತಿದ್ದರು.

ಜಿಂಕೆಯ ಕಣ್ಣುಗಳು, ದುಂಬಿಯ ಸಾಲಿನಂಥ ಮುಂಗುರುಳು, ಮುತ್ತಿನ ಹಾರದಿಂದ ಶೋಭಿಸುವ ಕತ್ತುಳ್ಳ ಹೆಂಗೆಳೆಯರು ತಮ್ಮ ಸ್ತನ ಭಾರದಿಂದ ನಡು ಬಳುಕಿಸುತ್ತಾ ಬರುತ್ತಿದ್ದರು. ಮುಂಗಾರು ಮಿಂಚಿನಂತೆ ಹೊಳೆಯುವ ಕಣ್ಣುಳ್ಳ ಮದಗಜಗಮನೆಯರಾದ ಸ್ತ್ರೀಯರು ತಮ್ಮ ಸೀರೆಯ ಸೆರಗಿನಿಂದ ತಲೆಯ ಮುಸುಕು ಹಾಕಿಕೊಂಡು ಗುಂಪಾಗಿ



ಬರುತ್ತಿದ್ದರು. ಚಿಗುರಿನಂಥ ಕೋಮಲವಾದ ಪಾದ, ನುಣ್ದೊಡೆ, ಸಣ್ಣನಡು, ಕೋಮಲವಾದ ಬಾಹು, ಕಳಸ ಕುಚಗಳ ಬಾಲಕಿಯರು, ಬಟ್ಟಮುಖದ, ತೆಳುಗಲ್ಲದ ತಾವರೆ ಎಸಳಂತೆ ಕಣ್ಣುಳ್ಳವರು ಬರುತ್ತಿದ್ದರು.

ಹೂವಿನ ಹಾರದಿಂದ ಕುಚವನ್ನು ಶೃಂಗರಿಸಿಕೊಂಡು ಪರಪುರುಷರ ಕಡೆ ಕಣ್ಣು ಹಾಯಿಸುವ ವೇಶ್ಯೆಯರು, ತನ್ನ ಗಂಡನನ್ನು ಬಿಟ್ಟು ಇತರರನ್ನು ಸೋದರರಂತೆ ಕಾಣುವ ಪತಿ ಭಕ್ತಿಯುಳ್ಳ ಹೆಂಗಳೆಯರು ಬರುತ್ತಿದ್ದರು. ಬಾಲಕಿಯರು, ಯುವತಿಯರು, ಲಲನೆಯರು, ಮಕ್ಕಳುಳ್ಳವರು ಎತ್ತಿಕೊಂಡು ತ್ರಿಶೂಲಧರ ಮಾದೇಶ್ವರನ ಬೆಟ್ಟಕ್ಕೆ ಭಜನೆ ಮಾಡುತ್ತಾ ವಿನೋದದಿಂದ ಬರುತ್ತಿದರು.

ಮಕ್ಕಳನ್ನು ಬೇಡುವವರು, ಒಂದು ಲಕ್ಷಜನ, ಮುಕ್ತಿಯನ್ನು ಬೇಡುವವರು ಕೆಲವರು, ಪತಿವ್ರತೆಯರು ಮುತ್ತೈದೆತನವ ಬೇಡುವವರು ಅತಿಶಯದಿಂದ ನಡೆಯುತ್ತಿದ್ದರು.

ದಾರಿಯುದ್ದಕ್ಕೂ, ಅನ್ನ ಅರವಟ್ಟಿಗೆಗಳು, ಬೆಲ್ಲದ ಪಾನಕದ ಪರಗಳು ಇವೆಲವನ್ನೂ ಸ್ವೀಕರಿಸಿ ಪರಿಷೆ ಮಾದೇಶ್ವರನ ಬೆಟ್ಟದ ಜಾತ್ರೆಗೆ ಸಾಗುತ್ತಿದ್ದವು. ಅವರೆಲ್ಲರೂ ಶಿವ ಸ್ವರೂಪವಾಗಿಯೇ ತೋರುತ್ತಿದ್ದರು. ಕ್ಷತ್ರಿಯ, ಬ್ರಾಹ್ಮಣ, ವೈಶ್ಯ, ಶೂದ್ರ ಮೊದಲಾದ ನಾಲ್ಕು ವರ್ಣದವರು, ಗುರುವಿಂದ ಲಿಂಗ ಪಡೆದ ಮಹಾತ್ಮರು ಬರುತ್ತಿದ್ದರು.

ಅಷ್ಟಮದ ತ್ಯಜಿಸಿದ ಯೋಗಿಗಳಾದ ಸಪ್ಪೆಯ ಲಿಂಗ ಉಪ್ಪಿನಳ್ಳಿ ಸ್ವಾಮಿ, ಕಪ್ಪುಗೊರಳ ತೋಂಟದಯ್ಯ, ಕೊಟ್ಟೂರಬಸವಲಿಂಗ, ಮುಪ್ಪುರ ವೈರಿ, ಬೋಳಬಸವೇಶ, ಕಟ್ಟಿಗಯ್ಯ ಪಶುಪತಿ ಸ್ವಾಮಿ, ಭಿಕ್ಷದ ಮಹಾಂತಯ್ಯ, ನಿರ್ವಾಣ ಬಸವಲಿಂಗೇಶ, ಭೂಮಿಯಲ್ಲಿ ಅಚ್ಚರಿ ಉಂಟುಮಾಡುವ ಮಹಾತ್ಮರೆಲ್ಲಾ ಮಾದೇಶ್ವರನ ನೋಡಲು ಬರುತ್ತಿದ್ದರು.

ಜನರನ್ನು ಭಕ್ತರಾಗಿ ಮಾಡಿಕೊಂಡು ಅವರಿಗೆ ಕೃಪೆಯಿಂದ ಮುಕ್ತಿಯನ್ನು ಅನುಗ್ರಹಿಸಲು ಮಾದೇಶ್ವರ ಅಷ್ಟಮದಗಳ ಮೆಟ್ಟಿ ಕರಗೇಂದ್ರಿಯಗಳ ಸುಟ್ಟರುಹಿದ ಯೋಗಿಗಳಿಗೆ ಕೈಲಾಸದಿಂದ ಬಂದ ಈಶ್ವರ.

ಮಾದೇಶ್ವರನ ನೋಡಲು ಶಂಖ, ಓಂಕಾರ ಗಂಟೆ ಜಾಗಟೆಗಳಿಂದ ಕೂಡಿ ಬಿಂಕದಿಂದ ಬರುತ್ತಿದ್ದರು. ಚರಲಿಂಗ ಮೂರ್ತಿಗಳು ಕಂತೆ, ಖಟ್ವಾಂಗ, ಕಮಂಡಲ, ದಂಡ, ಕಪ್ಪರ, ಜೋಳಿಗೆ ಹಿಡಿದ ಶಿವರೂಪಿಗಳು, ಭಸ್ಮ, ರುದ್ರಾಕ್ಷಿ ಕೆಂಜೆಡೆ, ಹೊಳೆವ ಹಲ್ಲುಗಳು, ಚಿನ್ನದ ಕರ್ಣಾಭರಣಗಳಿಂದ ಕೂಡಿದ ಗಣಾಧೀಶ್ವರರೂ, ವೀರಗಾಸೆ ಧರಿಸಿ, ಮರದ ಕತ್ತಿಯನ್ನು ಕೈಯ್ಯಲ್ಲಿ ಹಿಡಿದು, ಖಡ್ಗ ಹೇಳುವವರೂ, ಆಸೆಯನ್ನು ತೊರೆದ ಮತ್ತು ಪುನರ್ಜನ್ಮವಿಲ್ಲದ ವಿರಕ್ತರೂ, ಆ ಗುಂಪಿನಲ್ಲಿದ್ದರು. ಜಂಗಮ ಲಿಂಗರೂ, ಮಂಗಳ ಹೃದಯರೂ ಶಿವಸ್ವರೂಪಗಳೂ, ಮರ್ತ್ಯಕ್ಕೆ ಅವತಾರವೆತ್ತಿ ಬಂದ ಮಹಿಮರೂ ಆದ ನಂಜನಗೂಡು, ಎರಗಂಬಳ್ಳಿ, ಸುತ್ತೂರು, ಹೊಂಡರಬಾಳು, ಕುಂತೂರು ಈ ಪಂಚಮಠಗಳ ಅಧಿಪತಿಗಳೂ ಬರುತ್ತಿದ್ದರು.

ಋಷಿ, ಮುನಿ, ಗಂಧರ್ವ, ಪ್ರಮಥಗಣಂಗಳು, ವೀರಶೈವರು, ವ್ರತಶೀಲರು, ಆಚಾರ್ಯರು, ಶಿವಶರಣರು, ಹರನ ಪೂಜುವವರೆಲ್ಲಾ ಬರುತ್ತಿದ್ದರು. ಸುರರ: ಗಂಧರ್ವರೂ ಈ ಗಿರಿಗೆ ಬರುತ್ತಿದ್ದರು.

ಮಾದೇಶ್ವರನ ಓಲಗಕ್ಕೆ ನಂದಿ ಮಹಾಕಾಳರು, ಎಡಬಲಗಳಲ್ಲಿ ನಿಂದು ಅವನ ದರ್ಶನ ಪಡೆಯುತ್ತಿದ್ದರು. ಬಂಡಳ್ಳಿಯ ಶಿವನಂಕಾರೇಶ್ವರ, ಕಂಬಾಳದ ಸಿದ್ಧೇಶ್ವರ, ಶಾಲ್ಯದ ನೀಲಕಂಠೇಶ್ವರ, ಶಿವನಂಕಾರೇಶ, ಅಲಗು ಮೂಲೆಯ ಮಲ್ಲಿಕಾರ್ಜುನ, ಕಣ್ಣೂರಿನ ಶಿವನಂಕಾರೇಶ್ವರ, ರಾಜನಾದ ಬಲ್ಲಾಳನ ಸತಿಯನ್ನು ಪಡೆದು ರಂಭೆಗೆ ಶಿಶುವಾಗಿದ್ದ. ತಮ್ಮ ನಾಚಿಯ ತ್ರ್ಯಂಬಕ ದೇವ, ಗಾಜನೂರಿನ ಸೋಮೇಶ್ವರ, ಮಾರ್ಟಳ್ಳಿಯ ಬ್ರಹ್ಮೇಶ್ವರ, ಪಂಡೇಶ್ವರ, ಸಿದ್ಧೇಶ್ವರ, ಪೊನ್ನಾಂಬಲೇಶ, ವಿಷ್ಣು, ಬ್ರಹ್ಮ, ಇಂದ್ರಾದಿ ದಿಕ್ಪಾಲಕರು ಬರುತ್ತಿದ್ದರು. ನಾರಾಯಣ, ಬ್ರಹ್ಮ, ಅಗ್ನಿ, ಸೂರ್ಯ, ಯಮ, ವರುಣ, ವಾಯು, ಈಶಾನ, ಅಷ್ಟದಿಕ್ಪಾಲಕರು ಬರುತ್ತಿದ್ದರು. ಮಾದೇಶ್ವರನ ಒಂದು ಕಡೆ ರಂಭೆ, ಊರ್ವಶಿ, ತಿಲೋತ್ತಮೆ, ಮೇನಕೆ, ಅಪ್ಸರೆಯರು, ಮತ್ತೊಂದೆಡೆ ತುಂಬುರ, ನಾರದ, ಗರುಡ, ಗಂಧರ್ವರು, ಇಂಪಾಗಿ ಹಾಡುತ್ತಿದ್ದರು. ಮದ್ದಳೆಯ ತಾಳಗತಿಗೆ ಮುದ್ದು ಮುಖದ ಹೆಂಗಳೆಯರು ನೃತ್ಯ ಮಾಡುತ್ತಿದ್ದರು. ಮುನ್ನೂರ ಮೂವತ್ತುಕೋಟಿ ಜನರಿಂದ ಓಲಗ ವಿಜೃಂಭಣೆಯಿಂದ ಕಾಡಿತ್ತು. ಈ ರೀತಿ ಶೋಭಿಸುವ ಓಲಗದಲ್ಲಿ ಮಾದೇಶ್ವರ ಕುಳಿತು ಭಕ್ತರಿಗೆ ಮುಕ್ತಿಯನ್ನು ಅನುಗ್ರಹಿಸುತ್ತಿದ್ದನು. ಅಲ್ಲಲ್ಲಿ ನಿಂಗಗಳು, ಜಂಗಮರು, ಮುನಿಗಳು, ತಪಸ್ವಿಗಳು, ಉತ್ಸವಗಳೂ, ಪರಿಷೆಗಳು, ಹಳ್ಳ, ಕೆರೆ, ತೋಪುಗಳಲ್ಲಿ ಪತ್ರೆ, ಪುಷ್ಪ, ಮೊದಲಾದುವುಗಳಿಂದ ಲಿಂಗಪೂಜೆ ಮಾಡುತ್ತಿದ್ದರು.

ನೀರು ತುಂಬಿದ ಬಿಂದಿಗೆ, ಕಳಶಗಳ ಪೂಜೆ ಮಾಡಿ ನೈವೇದ್ಯ ಮಾಡುತ್ತಿದ್ದರು. ಲಿಂಗವನ್ನಿಟ್ಟು ಜ್ಞಾನಿಗಳು, ಯತಿಗಳು, ಮೌನದಿಂದ ಜಪ ಮಂತ್ರಗಳನ್ನು ಮಾಡುತ್ತಾ, ಮಾದೇಶ್ವರನನ್ನು ಅರ್ಚಿಸುತ್ತಾ, ಜಾಗರಣೆ ಮಾಡುತ್ತಿದ್ದರು. ಮಹಾತ್ಮರು ಅಷ್ಟವಿಧ ಅರ್ಚನೆ, ಪೂಜೋಪಚಾರಗಳಿಂದ ಇಷ್ಟಲಿಂಗ ಪೂಜೆಮಾಡಿ ಶಿವಯೋಗ ನಿರತರಾರುತ್ತಿದ್ದರು. ಪರಿಷೆಗಳು, ಪರುವವನ್ನು ಮಾಡುತ್ತಿದ್ದರು. ಜಂಗಮರಿಗೆ ಪಂಚಾಮೃತ ಎಡೆ, ಹಪ್ಪಳ, ಉಪ್ಪಿನಕಾಯಿ, ಕಡುಬು, ಕಜ್ಜಾಯ, ತುಪ್ಪ, ಕುಂಬಳ, ಬದನೆ, ಬಾಳೆ, ಹಾಗಲ ಹೀರೆಗಳ ಸಾರು ಮಾಡಿ, ಎಲ್ಲರಿಗೂ ಬಡಿಸುತ್ತಿದ್ದರು. ಗುಳ್ಳದ ಹಣ್ಣು, ಮಾವಿನಕಾಯಿ, ನಿಂಬೆ, ಹೇರಳೆ, ಹೂರಿಗೆ, ಗಾರಿಗೆ, ಎಣ್ಣೆ ಹೂರಿಗೆ, ಉದ್ದಿನ ಕಡುಬು, ಸೂಸಲುಂಡೆ, ದೋಸೆ, ಕಜ್ಜಾಯಗಳನ್ನು ಜಂಗಮರಿಗೆ ಬಡಿಸುತ್ತಿದ್ದರು.

ಮಾಯ ಕೋಳಾಹಳ ವಿರಕ್ತ ಮೂರ್ತಿಗಳಿಗೆ ಪಾಯಸ, ತುಪ್ಪ, ತೋವೆ, ಶಲ್ಯಾನ್ನ, ಮೊದಲಾದ ಭಕ್ಷ್ಯಗಳನ್ನು ಎಡೆಮಾಡಿಸಿದ ಮಾದೇಶ್ವರ. ಭಕ್ತ ಮಾಹೇಶ, ಸತ್ಯಸದಾಚಾರಿ, ನಿತ್ಯ ಪ್ರಸಾದ ದೇಹಿಗಳು, ಮೊದಲಾದವರು ಮಾದೇಶ್ವರರ ಭಜನೆ ಮಾಡುತ್ತಿರಲು ಅವರೆಲ್ಲರಿಗೂ ತಪ್ಪದೆ ಮಾದೇಶ್ವರನು ಎಡೆ ಮಾಡಿಸಿದನು. ಜಂಗಮರಿಗೆ ಹಾಲು, ಸಕ್ಕರೆ, ಜೇನು, ಪಾನಕ, ಎಳನೀರು, ಬಾಳೆಹಣ್ಣು, ಇವುಗಳನ್ನು ಬೇಗನೆ ನೀಡಿಸಿದರು. ಹೀಗೆ



ಮಾದೇಶ್ವರ ಷಡ್ರಸ ಭೋಜನವನ್ನು ಮಹಂತರುಗಳಿಗೆ ಬೆಳಗಾಗುವವರೆಗೂ ನೀಡಿಸಿ ದೇವಸ್ಥಾನಕ್ಕೆ ಹಿಂತಿರುಗಿಸಿದನು.

ಬೆಳಗಾಗುತ್ತಲೇ ಮಾದೇಶ್ವರ ದೇವಾಲಯಕ್ಕೆ ಬಂದ. ಆಗ ತಮ್ಮಡಿಗಳು ಬಿಂದಿಗೆಯ ನೀರಿಂದ ತೊಳೆದು ಗಂಧ ಪುಷ್ಪಾಕ್ಷತೆಗಳಿಂದ ಸೊಗಸಾಗಿ ಪೂಜಿಸಿದರು. ಭಕ್ತರು ಕಾಣಿಕೆ ಹಿಡಿದು ಭಯ ಭಕ್ತಿಯಿಂದ ಮಾದೇಶ್ವರನ ಸ್ತುತಿ ಮಾಡುತ್ತಿದ್ದರು. ಮಕ್ಕಳನ್ನು ಬೇಡಿಕೊಂಡ ಭಕ್ತರು ಹೊನ್ನು, ಹಣ, ಬಂಗಾರ, ಮೊದಲಾದುವನ್ನು ಮಾದೇಶ್ವರನ ಪಾದಕ್ಕರ್ಪಿಸುತ್ತಿದ್ದರು. ಚಿನ್ನ ಬೆಳ್ಳಿಯ ಪುಷ್ಪಗಳನ್ನು ಅರ್ಪಿಸಿ ಮಕ್ಕಳನ್ನು ಕೊಡು ಎಂದು ಬೇಡಿಕೊಳ್ಳುತ್ತಿದ್ದರು. ಭೂತ ಹಿಡಿದವರು, ಸೂತಕದಿಂದ ಬರಲು ತಪ್ಪಿದವರು. ಭೀತಿ ಪಟ್ಟಿದವರು, ತಮ್ಮ ಕಷ್ಟ ಸಂಕಟಗಳನ್ನು ತೋಡಿಕೊಂಡರು. ದೇವರ ಗುಡ್ಡರು ಕಂಸಾಳೆ ನುಡಿಸಿಕೊಂಡು ಆತನನ್ನು ಕೊಂಡಾಡುತ್ತಿದ್ದರು.

ಮಾದೇಶ್ವರ ಪಾಪಕ್ಕೆ ತಕ್ಕ ಶಿಕ್ಷೆಕೊಡುವಂತೆ ವೀರೇಶನಿಗೆ ಆಜ್ಞಾಪಿಸಿ, ಭೂತೋಚ್ಚಾಟನೆಯಲ್ಲಿ ನೆರವಾಗಲು ಕೇಶಣ್ಣನನ್ನು ನೇಮಿಸಿದ. ಭೂತ ಪೀಡಿತರಾದ ಹೆಂಗಸರು ತಲೆದೂಗಿ ತಿರುಗುತ್ತಾ ತಾವಿನ್ನು ಇರುವುದಿಲ್ಲ ಎಂದು ಬೆರಳು ಕಚ್ಚಿ, ಹಲ್ಕಿರಿದು ಬೇಡಿಕೊಳ್ಳುತ್ತಿದ್ದರು. ವೀರೇಶನು ಬಿಟ್ಟು ಹೋಗುತ್ತಿದ್ದ ಭೂತಗಳನ್ನು ಎಳತರಿಸಿ ಕಟ್ಟುಮಾಡಲು ಅವು ನಿಮ್ಮ ಪಾದದಾಣೆಗೂ ಇವರನ್ನು ಮುಟ್ಟುವುದಿಲ್ಲ ಎಂದು ಎಂಟು ದಿಕ್ಕಿಗೂ ಓಡಿದುವು. ಭೂತ ಕಳೆದವರು ನಮ್ಮನ್ನು ಮುಂದೆಯೂ ಕಾಪಾಡು ಎಂದು ಬೇಡಿದರು. ಮಾದೇಶ್ವರ ಲೋಕದ ಜನರಿಗೆ ಬೇಡಿದ ವರಗಳನ್ನು ಅನುಗ್ರಹಿಸಿ ಲೀಲೆಯಿಂದ ನಡುಮಲೆಯಲ್ಲಿ ನೆಲೆಸಿದನು. ಜಾತ್ರೆಯ ಪರಿಷೆ ತಮ್ಮ ತಮ್ಮ ಊರಿಗೆ ಹಿಂದಿರುಗಿತು.

ಮಾದೇಶ್ವರ ಜಾತ್ರೆಗೆ ಬಂದಿದ್ದ ಬ್ರಹ್ಮ, ವಿಷ್ಣು, ದೇವೇಂದ್ರ, ಅಷ್ಟದಿಕ್ಪಾಲಕರನ್ನು ಬೀಳ್ಕೊಂಟ್ಟು ಎಂದಿನಂತೆ ನಡುಮಲೆಯಲ್ಲಿದ್ದನು. ಭಕ್ತರ ಇಷ್ಟಾರ್ಥಗಳನ್ನು ಬೇಗನೆ ಅನುಗ್ರಹಿಸಿದನು.

ಕೆಲವೆಡೆ ವರ್ಣನೆಗಳಲ್ಲಿ ಉತ್ಪ್ರೇಕ್ಷೆ ಕಂಡರೂ ಮಿಕ್ಕಭಾಗ ಸಹಜವಾಗಿ ಮೂಡಿ ಬಂದಿದೆ. ತ್ರಿಮೂರ್ತಿಗಳು, ಅಷ್ಟದಿಕ್ಪಾಲಕರು, ಕಿನ್ನರ ಕಿಂಪುರುಷ, ಊರ್ವಶಿ, ರಂಭೆ, ತಿಲೋತ್ತಮೆ ಬಂದಿದ್ದರೆಂಬುದು ಅತಿಶಯೋಕ್ತಿಯಾದರೂ ರಾಜಾಧಿರಾಜರುಗಳು ವಿದ್ವಾಂಸರು, ಮಠಾಧಪತಿಗಳು, ಅಸಂಖ್ಯಾತ ವಿರಕ್ತರೂ, ಭಕ್ತಾದಿಗಳು ಬಂದಿದ್ದುದಂತೂ ನಿಜ. ಕವಿ ಒಂದು ದೇವತೆಯ ಜಾತ್ರೆಯ ಬಗೆಗೆ ಕಾವ್ಯದಲ್ಲಿ ಒಂದು ಅಧ್ಯಾಯವನ್ನೇ ಮೀಸಲಾಗಿಟ್ಟಿರಬೇಕಾದರೆ ಮಾದೇಶ್ವರನ ಜಾತ್ರೆಯ ವೈಭವ ನಿಜಕ್ಕೂ ಅದ್ಭುತವಾದುದು. ಹೃದಯಂಗಮವಾದುದು. ಶಿಷ್ಟಸಾಹಿತ್ಯದಲ್ಲಿ ಒಂದು ಜಾತ್ರೆಯ ಬಗೆಗೆ ಇಷ್ಟೊಂದು ಸುದೀರ್ಘವಾದುದು ಮತ್ತಾವ ಕಾವ್ಯದಲ್ಲೂ ಸಿಗಲಾರದೆಂದು ಹೇಳಬಹುದು.

* * * * *

# ಜನಪದ ಸಾಹಿತ್ಯದಲ್ಲಿ ಜಾತ್ರೆ

ಹೂವು ಕಾಯಿ, ಗಜನಿಂಬೆಯಿಂದ ಸುಂದರವಾಗಿ ಅಲಂಕಾರ ಮಾಡಿದ ಮಾದೇಶ್ವರನ ಗೊಂಬೆಯ ತೇರನ್ನು ಅಕ್ಕ ತಂಗಿಗೆ ತೆರುತ್ತಾಳೆ.

ಮಾದಯ್ಯ ಬರಲಿ ಎಂದು ನಾಳೆ ತೇರು ಎಂದು ಗೊಲ್ಲರು ಸಣ್ಣದನಿಯಲ್ಲಿ ಸಾರಿದರು. ಆರು-ಗಳುಗೆ ಆಯಿತು, ಹತ್ತುಗಳಿಗೆ ಆಯಿತು. ತೇರಿಗೆ ಏರು, ಕಳಸ ಇಡು, ಹಣ್ಣು ಜವನವನ್ನು ಇಡು ಎಂದು ಒಬ್ಬ ನಿರ್ದೇಶಿಸುತ್ತಾನೆ. ಮಾದಯ್ಯನ ಎಡಬಲಕ್ಕೆ ಪರಿಸೆ ಎಸೆಯುತ್ತಾರೆ. ನಾಗಮಂಗಲದ ಓಜ, ಮೈಸೂರಿಂದಾಚೆಯ ಮಲಸೀಮೆ ಹುಡುಗರು ಸಿದ್ಧಮಾಡಿದ ಹೊಸತೇರನ್ನು ಬೆಟ್ಟದಲ್ಲಿ ಇಟ್ಟಿದ್ದಾರೆ. ಸಾಲೂರು ಮಠದ ಸ್ವಾಮಿಗಳು ಬಂದ ಕೂಡಲೇ ಭೂಮಿಯನ್ನೇ ತಲ್ಲಣಿಸುವಂತೆ ತೇರು ಹರಿಯುತ್ತದೆ. ತಂಬಡಗೇರಿಯ ಹೆಂಗಳೆಯರು ತೇರು ಬರುವಾಗ ನೂರು ಆರತಿ ಎತ್ತುತ್ತಾರೆ. ಎತ್ತರವಾದ ತೇರು ಮಧ್ಯಾಹ್ನಕ್ಕೂ ಮುಂಚೆ ಹರಿಯುವುದು. ಅಗಲವಾದ, ಮುಗಿಲ ಮುಟ್ಟುವಷ್ಟು ಎತ್ತರದ ಬಣ್ಣದ ಗೊಂಬೆಯ ತೇರು ಹರಿದಾಗ ಬೆಟ್ಟದಲ್ಲೆಲ್ಲಾ ಬೆಳಗು. ಮಾದಯ್ಯನ ತೇರಿನ ಮೇಲೆ ಗುಡುಗು, ಮಿಂಚಿನ ಮಧ್ಯೆ ಮಳೆ. ಮಾದೇಶ್ವರನ ಎಡಬಲಕೆ ಹಣ್ಣು ಜವನ ಎಸೆತ ! ಎಪ್ಪತ್ತೇಳು ಕೋಟಿ ನವಿಲ್ಹಿಂಡು ಕೂತು ತುಪ್ಪದ ಗುಟುಕ ಕೊಡುತ್ತವೆ. ಎಪ್ಪತ್ತೇಳು ಹೆಡೆಯ ಮ್ಯಾಲೆ ಮಾದಯ್ಯ ಒರಗಿದ್ದಾನೆ. ಮಾದಯ್ಯನ ಪೂಜೆ ಆಗುವಾಗ ಬೆಳ್ಳಿಯ ಗಂಟೆ ಧಣಿರೆಂದು ದನಿಗೂಡಿಸಿತು.

ಮಾದಯ್ಯನ ಬೇಡಲು ಭಕ್ತಾದಿಗಳು ಉಘೇಯೆಂದು ಬರುತ್ತಾರೆ. ಮಾದೇವನೊಪ್ಪಿದ ತೇರಲ್ಲಿ ಕಾರಯ್ಯ ಬಿಲ್ಲಯ್ಯ ಎಡಬಲದಲ್ಲಿ ಮೆರೆಯುತ್ತಿದ್ದಾರೆ. ಮಾದಯ್ಯನ ಗಿರಿಗೆ ಚಿನ್ನದ ಗಾರೆ, ಸುತ್ತ ಹಬ್ಬಿತು ಬೆಳ್ಳಿ ರಥ. ತಾಣವೆಲ್ಲಾ ಸಿರಿಗಂಧ ಹಬ್ಬಿತು. ತಮಟೆ, ಕಂಸಾಳೆ, ಸೂಳೀರ, ಮೇಳ ನಡೆವಾಗ ಗಿರಿಯಲ್ಲಿ ಹಗಲು ಹಬ್ಬಿತು. ನೂಲಿನಹಗ್ಗದಲ್ಲಿ ಬಿಗಿದ ತೇರು ಮಾದಯ್ಯನ ಗಿರಿಯಲ್ಲಿ ಸಾಗಿತು.

ಮಾದಪ್ಪ ಕರದ್ರೆ ಬರುವವನಲ್ಲ, ಕೈ ಮುಗಿದ್ರೆ, ಬಿದ್ದು ಬೇಡಿದ್ರೆ ಬರುವವನಲ್ಲ. ಜೋಡಿ ಕಟ್ಟೇಲಿ ನೆಲಗೊಂಡ ಆತನ ಮಹಿಮೆ ಒಬ್ಬರಿಗೂ ತಿಳಿಯದು. ಕೊಂಡಕ್ಕೆ ಕೆಂಡಗಣ್ಣ ಮಾದಪ್ಪ ಮುಂದೆ ಬಂದು ಕೆಂಡದೋಕುಳಿ ನನಗೆಂದ. ಒಂದು ಬಂಡಿ ಸಾಲದು ಇನ್ನೊಂದು ಬಂಡಿ ಸೌದೆ ತರಿಸು ಎಂದು ಸೌದೆ ತರಿಸಿ ಹಾಕಿ, ಇಡುಗಾಯಿ ಹೊಡೆದು, ಕೈ ಪಂಜು ಹಚ್ಚಿ, ಕೊಂಡ ಹಾಯುತ್ತಾ, ಕೊಂಡ ದೋಕುಳಿ ಆಡುತ್ತಾ ಕೆಂಡಗಣ್ಣಸ್ವಾಮಿ ಮಾದಪ್ಪ ಬರುವಾಗ ಮಂಡೆಯಲ್ಲಿನ ಮಲ್ಲಿಗೆ ಹೂವು ಬಿರಿಯಿತು.

ಕಲ್ಲನ್ನು ಕರಡಿ ಮಾಡಿ, ಹುಲ್ಲೆಯನ್ನು ಹುಲಿ ಮಾಡಿ, ಮಾದೇವ ಆನೆದಿಂಬಲ್ಲಿ ಮನೆ ಮಾಡಿ, ಹುಲಿಯ ಹುತ್ತ ಮಾಡಿ, ಮಾಯದಲ್ಲಿ ಪರುಸೆ ಕಳುಹಿಸಿದ್ದಾನೆ. ಮಾದಪ್ಪನ ಗಿರಿಯ



ಬಾಗಿಲ ಮುಂದೆ ಹುಲಿ ಹಾಲು ಕರೆದುವು ಕೆಂಚ ಹುಲಿಗೆ ಕವಿವಾಣ ಹಾಕಿ, ಹಿಂಡುಗಲಿ ಹೊಡಕೊಂಡು, ಗಂಡುಗಲಿ ಬಿಟ್ಟುಕೊಂಡು, ದಂಡು ದಾಳಿಲ್ಲಾ ಕೂಡಿಕೊಂಡು, ಮಾದೇವ ಏಳು ಮಲೆಯಲ್ಲಿ ನೆಲೆಗೊಂಡಿದ್ದಾನೆ. ನೀಲಿ ಮುತ್ತಿನ ನವಿಲುಗಳು ಸಾರಿ ಕೂಗಿವೆ ಮಾದೇವನ. ಹುಲಿ ಹಿಂಡನ್ನು ಮಾದೇಶ್ವರ ಬೆಳ್ಳಿ, ಹೂವಿನ ಕೋಲು ಹಿಡಿದು ಮೇಯಿಸುತ್ತಿದ್ದಾನೆ. ಮಾದಯ್ಯನ ತೆಪ್ಪ, ತೇರಿನ ಮೇಲೆ ಎಪ್ಪತ್ತೇಳು ಹುಲಿಗಳು ಒಪ್ಪೊತ್ತಿನ ಮೇವ ಮರೆತು ಕೂತಿವೆ. ಎಂಟು ಹುಲಿ ಕಟ್ಟಿಕೊಂಡು ಕುಂಟುಲಿಮ್ಯಾಲ್ಯಾತ್ಕೊಂಡು ಗಂಟೆ ಸದ್ದಿಗೆ ನಲಿಯುತ್ತಾ, ನಾಟ್ಯವಾಡುತ್ತಾ, ಮಾದೇವ ಬರುತ್ತಿದ್ದಾನೆ. ಹುಲಿಕರಡಿ ಮಾದೇವನ ಗುಡಿಯ ಬಾಗಿಲ ಮುಂದೆ ಕುಣಿದಾಡುತ್ತಿವೆ.

ಸಾವಿರ ಹುಲಿಯ ಸರದಾರ ನೂರುಲಿಗೆ ಮಾಯಕ್ಕಾರ, ಸರ್ಪನ ಮೇಲೆ ಒರಗಿರುವ ಮಾದಯ್ಯನ ದೀಪಾವಳಿ ಸೇವೆ ಒಂದು ಘನವಾದ ಸೇವೆ. ಬಣ್ಣದೆಬ್ಬುಲಿ ಏರಿಕೊಂಡು ಮಜ್ಜನ ಕೊಳಕ್ಕೆ ಹೊರಟಿತು. ಮಾದೇಶ್ವರ ಕಾರಯ್ಯನ ಕಟ್ಟೆ, ಬಳಸಿ ಬರುವವರೆಗೆ ಬೆಳಕು ಹರಿದಿದೆ. ಗರುಡನ ಮೇಲೆ ಮೆರೆದಿದ್ದಾನೆ. ಮಾದೇವ ಹೆಬ್ಬುಲಿ ಬೇಟೆಗೆ ಹೊರಟರು. ಭಾರಿ ಬರಗನ ಏರಿಕೊಂಡು ಮಾದೇಶ್ವರ ನೂರೇಳು ಲೋಕ ತಿರುಗ್ಯಾರು.

ಮಾದಯ್ಯನ ಗಿರಿಗೆ ಪರುಸೆ ಬಂದವು. ಅಂತರ ಗಂಗೆಯಲ್ಲಿ ಅಂತು ನೋಡಿದ್ದಾರೆ, ಕಂಬದ ಬೋಳೀಲಿ ನಿಂತು ನೋಡಿದ್ದಾರೆ. ಮಾದೇಶ್ವರರು ಕಾರಯ್ಯನ ಕುರಿತು "ಎಳಂದೂರು ಪರ್ಸೆ ಬರನಿಲ್ಲ ದೂರದ ಪರಿಸೆ ಕಮ್ಮಿ, ಹದಿನಾಡ ಪರುಸೆ ಬರಲಿಲ್ಲ, ಪತ್ರ ಬರೆ" ಎಂದು ಆಜ್ಞಾಪಿಸಿದರು.

ತನ್ನ ತೇರು ಶೃಂಗರಿಸಲು ತೆಂಕಲು ಮೂಡಲ ಪರುಸೆ ಬರಲಿಲ್ಲ ಎಂದು ಯೋಚಿಸುತ್ತಿರಲು ಧೂಳು ತುಳಿದುಕೊಂಡು ಪರುಸೆ ಬರಲಾರಂಭಿಸಿದರು. ಮಲ್ಲಿಗೆ ಹೂವಿನಂತೆ ಪರುಸೆ ಚೆಲ್ಲೀತು, ಸಂಪಿಗೆ ಹೂವಿನಂತೆ ಗುಂಪಾದುವು. ಕಾದಳ್ಳಿ ಕಣಿವೆಯಲ್ಲಿ ಉಚ್ಚಳ್ಳಿ ಹೂವಿನಂತೆ ಹೆಚ್ಚಿತು, ತುಂಬಿಯ ಹೊನ್ನಂತೆ ತುಂಬಿತು ಹದ್ದಿನ ಗರಿಯಂತೆ ಎದ್ದುವು. ನುಚ್ಚಕ್ಕಿಯಂತೆ ಹೆಚ್ಚಿದುವು. ಮತ್ತು ಚೆಲ್ಲದಂತೆ ಬರಿತು ಪರಿಸೆ, ಕಿತ್ತಳೆಹಣ್ಣು, ಬಾಳೆಹಣ್ಣು, ಹಾಲನ್ನು ಪರುಸೆಗೆ ಬಾಯಾರಿಕೆ ನಿಲ್ಲಿಸಲು ನೀಡುತ್ತಿದ್ದರು. ಕಾದಳ್ಳಿ ತಿಟ್ಟಿನಲ್ಲಿ ನಿಂತು ಪರುಸೆ ನೋಡವ್ನೆ ಮಾದೇವ. ಏಳು ಬಾಯಲ್ಲಿ ನಿಂತು ಹದಿನಾಡು ಸೀಮೆ ಪರುಸೆ ನೋಡವ್ನೆ. ಬೆಟ್ಟಕ್ಕೆ ಬರುವ ಭಕ್ತರು ಮಾದಯ್ಯನೇ ಗತಿ ಎಂದು ಬಂದಾಗ ಅವರಿಗೆ ವರವ ಕುರುಣಿಸಿದ್ದಾನೆ. ಸಿಂಗಾನಲ್ಲೂರಲ್ಲಿ ತಂಗಿದ ಪರಿಸೆ ನಡೆದಾವು ತಾಳಬೆಟ್ಟದ ಪರುಸೆ ತಂಪು ಹೊತ್ತಲ್ಲಿ ಎಡಗಡೆ ಕಾರಯ್ಯ, ಬಲಗಡೆ ಬಿಲ್ಲಯ್ಯ, ಬೆನ್ನಲ್ಲಿ ಬ್ಯಾಡರ ಕನ್ನಯ್ಯನನ್ನು ನಿಲ್ಲಿಸಿಕೊಂಡು ಬರುವಂಥ ಪರಿಸೆ ನೋಡ್ತಾ ಇದ್ದಾನೆ. ಸಂತೆಕಾನೆಯಿಂದ ಪರುಸೆ ಬಾಲೆಯೊಡನೆ ಒಡನಾಡಿ ಬರುವಂಥವರ ಹೆಬ್ಬುಲಿಯ ಬಾಯಿಗೆ ಸಿಕ್ಕಿಸುವೆ ಪರಿಸೆ ತುಂಬಿತು ಏಳುಮಲೆಗೆ, ಸರಗೂರವರು ಬರಲಿಲ್ಲವೆಂದು ಓಲೆ ಬರೆದವನೆ. ತಾಳುಗೊಳದಲ್ಲಿ ತಂಗಿದ ಪರಿಸೇಗೆ ಕಲ್ಲುಸಕ್ಕರೆ ಏಳನೀರು ಕೊಡುತ್ತಿದ್ದಾರೆ. ಹೊತ್ತು

ಮುಳುಗಿ ಕತ್ತಲಾದರೂ ಮುತ್ತಿನ ಬಾಗಿಲ ತೆರೆದು, ಮಾದೇವನಿಗೆ ತುಪ್ಪದಾರತಿ ಬೆಳಗುತ್ತಿದ್ದಾರೆ.

ಶಿವರಾತ್ರಿ ಜಾತ್ರೆಗೆ ಮಾದೇಶ್ವರನ ತೇರಿಗೆ ಬರುವ ಪರಿಸೆ ಮಾದೇಶ್ವರ ವರವ ಕೊಡುವನೆಂದು ಬರುತ್ತಿದ್ದಾರೆ. "ಆನೆದಿಂಬಲಿ ನಾಕೂಗಿವ್ನಿ ಓ ಎನ್ನಬಾರದೆ" ಅದಕ್ಕೆ ಉತ್ತರವಾಗಿ ಮಾದೇಶ್ವರ

"ಹೆದರಬೇಡ ಮಗಳೆ ನಿನ್ನ ಶಬ್ದ ಕೇಳಿ ಬಂದಿವ್ನಿ"
"ನನ್ನ ಹರಕೆ ಒಪ್ಪಿಸಿಕೋ ಮಾದೇವ"
"ಏಳು ಮಲೆಗೆ ಬಾರವ್ವ ಹರಕೆ ಸಲ್ಲಿಸು"
"ನಿನ್ನ ಮಲೆಗೆ ಬರಲಾರೆ, ಇಲ್ಲೇ ನನ್ನ ಹರಕೆ ಸಲ್ಲಿಸಿಕೋ"
"ಬರದಿದ್ದರೆ ಅಲ್ಲೊಂದು ಹುಲಿ ಇಡುವೆ"
"ಕಾರೆಂಬ ಕತ್ತಲು ಜೋರೆಂಬ ಮಳೆ ಹೇಗೆ ಬರಲಿ ನಿನ್ನ ದೀವಳಿಗೆ ಸೇವೆಗೆ"
"ಒಕ್ಕಳ್ಳಕ್ಕಿ, ಬಕ್ಕಳಣ್ಣೆ, ತಕ್ಕಂಡು, ಕಂಡುಗ ದೂಪ ಮಡಿಲಲ್ಲಿ ಕಟ್ಟಿಕೊಂಡು ಉಕ್ಕಿದ ಹೊಳೆದಾಟಿ ಬರಲಾರೆ ಒಪ್ಪಿಸಿಕೋ ಹರಕೆ"
"ಒಪ್ಪಿಕೊಳ್ಳಲು ಚಿಕ್ಕಪ್ಪನ ಮಗಳಾ ಗುಡಿ ಮುಂದೆ ಬಾರವ್ವಾ"
"ಗುಡಿ ಬಾಗಿಲ ಬೆಜ್ಜಲಕೆಂಡ ದಾಟೋಗು, ನಿನ್ನ ಹರಕೆ ಒಪ್ಪುವೆ"
"ಬಿಸಿಲಲ್ಲಿ ಹ್ಯಾಗಪ್ಪಾ ನಿನ್ನ ಸೇವೆ ಮಾಡೋದು? ಶಿವರಾತ್ರಿ ಸರಿಕಣಯ್ಯ. ನಿನ್ನ ಗಿರಿ ದೂರ ಎಪ್ಪತ್ತೇಳು ಮಲೆಗೆ ಬರುವಾಗ ದಾರಿ ತಪ್ಪುವುದು"
"ತುಪ್ಪ ತರುವುದನ್ನು ಮರೆತೆ. ತುಪ್ಪ ಕಾಣಿಕೆ ಕೊಡುವೆ ಮುದ್ದು ಮಕ್ಕಳ ವರ ಕೊಡು. ಮುಂಬಾಗಿಲ ರಜವ ಬೆಳಗಿವ್ನಿ. ನಿಮ್ಮ ಹರಕೆ ಒಪ್ಪಿಸಿಕೊಳ್ಳಿ. ನಮ್ಮ ತಪ್ಪಿದ್ರೆ ಹೇಳಪ್ಪ ಜಗದೊಡೆಯ" ಆಕೆ ಕೊನೆಗೆ ಒಪ್ಪಿ, ಹರಕೆ ಸಲ್ಲಿಸಲು ಮಾದೇವನ ಗುಡಿಗೆ ಬರಲು ಒಪ್ಪುತ್ತಾಳೆ.

ಹೀಗೆ ಜನಪದ ಸಾಹಿತ್ಯದಲ್ಲಿ ಮಾದೇಶ್ವರನ ಜಾತ್ರೆಯ ಬಗೆಗೆ ವರ್ಣನೆಗಳಿವೆ. ಹಲವಾರು ವ್ಯಕ್ತಿಗಳಿಂದಸಂಗ್ರಹಿಸಿದಾಗ ಇನ್ನೂ ಹಲವು ಬಿಡಿ ಹಾಡುಗಳು ದೊರೆಯಬಹುದು. ಇಲ್ಲಿನ ಪದ್ಯಗಳನ್ನು ಗಮನಿಸಿದಾಗ ಯಾವ ಶಿಷ್ಟ ಸಾಹಿತ್ಯಕ್ಕೂ ಕಡಿಮೆ ಇಲ್ಲದಂತೆ ತ್ರಿಪದಿಗಳಲ್ಲಿ ಕಣ್ಣಿಗೆ ಕಟ್ಟಿದಂತೆ ಜಾತ್ರೆಯ ವರ್ಣನೆಯನ್ನು ಜಾನಪದ ಕವಿ ವರ್ಣಿಸಿದ್ದಾನೆ.

* * * * *

## ಅಲ್ಲಲ್ಲಿ ಜಾತ್ರೆ

ಮಾದೇಶ್ವರರು ಕೊಳ್ಳೇಗಾಲ ತಾಲ್ಲೂಕಿನ ಪೊನ್ನಾಚಿ ಬೆಟ್ಟಗಳ ತಪ್ಪಲಿನಲ್ಲಿ ಐಕ್ಯವಾಗಿ ಅದು ಈಗ ಮಾದೇಶ್ವರನ ಬೆಟ್ಟವೆಂದು ಕರೆಸಿಕೊಂಡಿದೆ. ೧೯೫೬ ರವರೆಗೆ ತಮಿಳು ನಾಡಿಗೆ ಸೇರಿದ್ದ ಇದು ಆಮೇಲೆ ಮೈಸೂರು ರಾಜ್ಯಕ್ಕೆ ಸೇರಿಕೊಂಡಿದೆ. ಇದು ಮೈಸೂರಿಗೆ ೧೦೦ ಕಿಲೋ ಮೀಟರ್ ದೂರವಿದೆ. ಇಲ್ಲಿ ಮಾದೇಶ್ವರರ ಪ್ರಮುಖ ಜಾತ್ರೆಗಳಾದರೂ ಮಾದೇಶ್ವರರು ಸುತ್ತಾಡಿದ ಜಾಗಗಳಲ್ಲಿ ತೋರುಗದ್ದುಗೆಗಳನ್ನು ಮಾಡಿ ಅಲ್ಲೆಲ್ಲಾ ಪೂಜೆ ಉತ್ಸವ ಜಾತ್ರೆಗಳನ್ನು ಆಚರಿಸುವುದನ್ನು ಕಾಣಬಹುದು. ಅವುಗಳೆಂದರೆ ಹೊಳವನಹಳ್ಳಿ ಹತ್ತಿರ ಬಿಡಿಲೋಟಿ, ಮೈಸೂರು, ಬೆಂಗಳೂರು, ಸೋಮನಹಳ್ಳಿ, ಕನಕಗಿರಿ, ರಾಮಾಪುರ, ಚೆನ್ನಪಟ್ಟಣ, ನಾಗಮಂಗಲ, ಕೊಳ್ಳೇಗಾಲದ ಮರಡಿಗುಡ್ಡ, ಗೇರುಮಾಳ, ಬರಗೂರು, ಹಲಗಾಪುರ, ಮಂಡ್ಯ, ಮುಡುಕುತೊರೆ, ಭೀಮನಕೊಲ್ಲಿ,(ಹೆಗ್ಗಡದೇವನಕೋಟೆ ತಾಲ್ಲೂಕು) ಸುತ್ತೂರು, ಸರಗೂರು, ಕಲ್ಲೂರು, ಪಿರಿಯಾಪಟ್ಟಣ, ಕಾಮಗೆರೆ, ಮಳಗಾಳು (ಕನಕಪುರ ತಾಲ್ಲೂಕು) ಕುಂತೂರು, ಕಾದಳ್ಳಿ ಹತ್ತಿರದ ಗೊಳ್ಳ ಜೋಡಿಕಟ್ಟೆ (ತುರುವೇ ಕೆರೆ) ರೇವಣ ಸಿದ್ದೇಶ್ವರ ಬೆಟ್ಟ, ಮುಡುಕುತೊರೆ ಆದಿಚುಂಚನ ಗಿರಿ, ಹೊಳವನಹಳ್ಳಿ, (ಕೊರಟಗೆರೆ ತಾಲ್ಲೂಕು) ಕಾರವಾರ ಮುಂತಾದವು. ಸರಗೂರಿನಲ್ಲಿ ಪ್ರತಿವರ್ಷ ಜಾತ್ರೆ ತೇರು ನಡೆಸುತ್ತಾ ಅನೇಕ ಊರಿನ ಜನರೆಲ್ಲಾ ಕಾಣಿಕೆ ಕಪ್ಪ ಕೊಡಲಾರಂಭಿಸಿದರು ಎಂಬ ಪ್ರಸ್ತಾಪ ರಾಜಾವಳಿ ಕಥೆಯಲ್ಲಿ ಬರುತ್ತದೆ. ತಮಿಳುನಾಡಿನಲ್ಲಿ ನೀಲಗಿರಿ, ಕೊಯಮತ್ತೂರು, ಸೇಲಂ, ಪಂದೇಶ್ವರ, ಬರಗೂರುಗಳಲ್ಲೂ ಮಾದೇಶ್ವರರ ತೋರುಗದ್ದುಗೆಗಳಿವೆ.

ಸುತ್ತೂರು: ನಂಜನಗೂಡು ತಾಲ್ಲೂಕಿಗೆ ಸೇರಿದ ಸುತ್ತೂರಿನಲ್ಲಿ ಮಾದೇಶ್ವರರು ರಾಗಿ ಬೀಸುವ ಪವಾಡವೆಸಗಿದರು. ದನಕರುಗಳನ್ನು ಆರೋಗ್ಯವಂತವಾಗಿ ಮಾಡಿದರು. ಸೂತ್ತೂರಿಂದ ಹೋಗುವಾಗ ಬೆತ್ತ, ತ್ರಿಶೂಲ, ಜೋಳಿಗೆ, ಜಂಗು ಇಟ್ಟು ಹೋದರು. ಅವರು ಪೂಜಿಸುತ್ತಿದ್ದ ಕೋಣೆಯನ್ನೇ ಮಾದೇಶ್ವರರ ಗದ್ದುಗೆಯೆಂದು ಮಾಡಿ ಅದರ ಮೇಲಿಟ್ಟು ಪೂಜುವರು. ಜಾತ್ರೆ, ಉತ್ಸವಗಳು, ಉಗಾದಿ, ಶಿವರಾತ್ರಿ ಹಾಗೂ ಪ್ರತಿ ತಿಂಗಳೂ ಇಲ್ಲಿ ವಿಶೇಷ ಪೂಜೆ ನಡೆಯುವುದು.

ಗುಂಡ್ಲುಪೇಟೆ ತಾಲ್ಲೂಕಿನ ಇಂಗಳವಾಡಿಯ ಮಾದೇಶ್ವರ ದೇವಾಲಯ ೫೦೦ ವರ್ಷಗಳಷ್ಟು ಪ್ರಾಚೀನವಾದುದು. ಇಲ್ಲಿ ಉಪ್ಪಲಿಗರು ಕಂಸಾಳೆಯಲ್ಲಿ ಮಾದೇಶ್ವರನ ಸ್ತುತಿ ಮಾಡುವುದಲ್ಲದೆ ಅಮಾವಾಸ್ಯೆಯ ದಿನ ದರ್ಶನ ಪಡೆಯುವರು.

ಇಲ್ಲಿ ಪ್ರತಿವರ್ಷ ಜಾತ್ರೆ ನಡೆಯುವುದು. ಇಲ್ಲಿಗೆ ಮಾಡ್ರಳ್ಳಿ, ಮಳವಳ್ಳಿ, ನೇನೆಕಟ್ಟೆ, ಬನ್ನಿತಾಳಾಪುರ, ನಳೂರು, ಬೆಂಡಗಳ್ಳಿ, ವೀರನಪುರ ಮುಂತಾದ ಹಳ್ಳಿಗಳ ಜನರು ಸೇರುವರು ಹಿಂದೆ ಜಾತ್ರೆಯನ್ನು ಬನ್ನಿತಾಳಾಪುರದಲ್ಲಿ ಮಾಡುತ್ತಿದ್ದರು. ೧೯೨೧ ರಲ್ಲಿ ಇಂಗಳವಾಡಿಯವರು ತಮ್ಮೂರಲ್ಲೇ ಜಾತ್ರೆ ಮಾಡಬೇಕೆಂದು ಎರಡು ಊರವರಿಗೂ ಭಿನ್ನಾಭಿಪ್ರಾಯ ಉಂಟಾಗಿ ೧೯೩೨ ರವರೆಗೆ ಸ್ಥಗಿತವಾಗಿತ್ತು. ನ್ಯಾಯಲಯವು ಒಂದು ವರ್ಷ ಇಂಗಳವಾಡಿ ಒಂದು ವರ್ಷ ಬನ್ನಿತಾಳಾಪುರದಲ್ಲಿ ಮಾಡುವಂತೆ ತೀರ್ಪು ನೀಡಿತು.

ಇಲ್ಲಿ ಮಾದೇಶ್ವರ ಜಾತ್ರೆ ಮೂರು ದಿನ ನಡೆಯುತ್ತದೆ. ಕೊಂಡ, ಹಾಲರವಿ ಮತ್ತು ತೇರು ಜಾತ್ರೆಯ ಮುಖ್ಯ ಅಂಗಗಳು. ಶಿವರಾತ್ರಿಯಾದ ಮೇಲೆ ಜಾತ್ರೆ ದಿನ ನಿಗದಿಪಡಿಸುವರು. ಪರಿವಾರದ 'ಎಳುವಗಾರ' (ಹೇಳುವವ) ಊರವರಿಗೆಲ್ಲಾ ತಿಳಿಸುತ್ತಾನೆ. ಮನೆ ಮನೆಯವರೆಲ್ಲಾ ಸುಣ್ಣ ಬಳಿದು ಮನೆಯ ಎಲ್ಲಾ ವಸ್ತುಗಳನ್ನು ತೊಳೆದು ಬೆಳಗಿ ಶುದ್ಧವಾಗಿಡುತ್ತಾರೆ. ಇಂಗಳವಾಡಿಯ ಜಾತ್ರೆಯಲ್ಲಿ ಮುಖ್ಯವಾದುದು ಕೊಂಡ ಹಾಯುವುದು. ತಮ್ಮಡಿಗಳಲ್ಲಿ ಒಬ್ಬ ಕೊಂಡ ಹಾಯುತ್ತಾನೆ. ಈತ ಮೂರು ದಿನವಿರುವಾಗಲೇ ಒಪ್ಪತ್ತು ಮಾಡುತ್ತಾನೆ. ಸೋಮವಾರದಿಂದ ಕೊಂಡ ಮುಕ್ತಾಯವಾಗುವವರೆಗೆ ಉಪವಾಸ. ಊರ ಎಲ್ಲರೂ ಒಂದೊಂದು ಕೆಲಸ ನಿರ್ವಹಿಸುವರು. ಕಗ್ಗಲಿ ಮರ ಕಡಿದು ಇದರಿಂದಲೇ ಕೊಂಡ ಮಾಡುವರು. ಇದಕ್ಕೆ ಕಗ್ಗಲಿ ಕೊಂಡ ಎಂದೇ ಹೆಸರು.

ಕೊಂಡದ ಹಿಂದಿನ ದಿನ ಸೋಮವಾರ ಹೆಂಗಸರು ಮಡಿಕೆ ತೆಗೆಯುವ ಕಾರ್ಯದಲ್ಲಿ ತೊಡಗುವರು. ಹೊಸ ಮಡಿಕೆಯಲ್ಲಿ ನೀರು ತಂದು ಅಡಿಗೆ ಮಾಡುವರು. ಕೊಂಡ ಮುಗಿಯುವವರೆಗೂ ಅಡಿಗೆ ಮನೆಯಲ್ಲಿ ಅಟ್ಟಬಾರದೆಂದು ಪದ್ಧತಿ. ಹೊರಗೆ ಒಲೆ ಹೂಡಿ ಅಡಿಗೆ ಮಾಡುವರು.

ತಮ್ಮಡಿಗೆ ಮಂಡೆಜಾಲ ಮಾಡಿಸಿ ತಲೆಯ ಮುಂಭಾಗದಲ್ಲಿ ಅರ್ಧಚಂದ್ರಾಕೃತಿಯವರೆಗೆ ಕೂದಲು ತೆಗೆಸುವರು. ಸ್ನಾನ ಮಾಡಿಸಿ, ಬಟ್ಟೆ ತೊಡಿಸಿ ವೀರಗಾಸೆ ಹಾಕಿ, ಕೈಗೆ ಧೂಪದ ಹಲಗೆ ಕೊಡುವರು. ಇದಕ್ಕೆ 'ಧೂಪದ ಸೇವೆ' ಎನ್ನುವರು. ದೇವಸ್ಥಾನದಲ್ಲಿ ಬಲಕ್ಕೆ ಪ್ರಸಾದ ತೆಗೆದುಕೊಂಡು ಬರುವಾಗ ತಮ್ಮಡಿಗೆ ಆವೇಶ ಬರುತ್ತದೆ. ಆತನನ್ನು ಸಿಂಗರಿಸಿ 'ಹೊನ್ನೆಸರು' ಕಟ್ಟುವರು. ನಿಂಬೆಹಣ್ಣು ಧರಿಸದೆ ಕೊಂಡ ಹಾಯಬಾರದು ಎಂಬ ನಿಯಮ. ಭಕ್ತರು ತಮ್ಮ ಇಷ್ಟಾರ್ಥ ನೆರವೇರಲೆಂದು ಬಾಯಿ ಬೀಗ, ಉತ್ಸವ, ಉರುಳು ಸೇರೆ ಮುಂತಾದುವನ್ನು ಮಾಡುವರು. 'ಹಾಲರುವಿ ಸೇವೆ' ಮಣ್ಣಿನ ಬಾನಿಯಲ್ಲಿ ಹಾಲು ಹೊಯ್ಯುತ್ತಿದ್ದುದರಿಂದ ಹಾಲರುವಿ ಎಂದಾಗಿದೆ. ಈಗ ತಾಮ್ರದ ಚೆಂಬಿನಲ್ಲಿ ಮಾಡುವರು. ಏಳು ಊರಿನವರು ಹಾಲು ಹರವಿ ಹೊತ್ತು ನೇನೆ ಕಟ್ಟೆಯಿಂದ ಹೊರಡುವರು. ಇವರನ್ನು ಮಳವಳ್ಳಿಯವರು ವಿಭೂತಿ ವೀಳ್ಯ ಕೊಟ್ಟು,



ಎದರುಗೊಳ್ಳುತ್ತಾರೆ. ಆಮೇಲೆ ಮಾಡ್ರಳ್ಳಿ ವೀರನಪುರ ದೇವಾಲಯ ತಲುಪುವರು. ಅಲ್ಲಿ ಬನ್ನಿತಾಳಪುರದವರು ವಿಭೂತಿ ವೀಳ್ಯ ನೀಡಿ ಬಿರುದಾವಳಿಯನ್ನು ಸ್ವಾಗತಿಸುವರು.

ಜನಪದ ಗಾಯಕರು "ಹಾಲರುವಿ ಬಂದೋ ನೂರೊಂದ್ಹಾಲರುವಿ ಬಂದೋ ಹಾಲರುವಿ ಬಂದೋ" ಎಂದು ಹಾಡುವರು.

ಮಾದೇಶ್ವರನ ಉತ್ಸವ ಮೂರ್ತಿಯನ್ನು ತಮ್ಮಡಪ್ಪನ ಮನೆಯಿಂದ ತರುವರು. ಬಾಯಿಬೀಗ ಹಾಕಿದವರು ಉತ್ಸವದ ಮುಂದೆ ಸಾಗಿ ದೇವಾಲಯ ಸೇರುವರು. ಮಂಗಳವಾರ ರಾತ್ರಿ ಹತ್ತು ಘಂಟೆಯ ಹೊತ್ತಿಗೆ ನೇನೇಕಟ್ಟೆಯ ದೊಡ್ಡ ಹಟ್ಟಿಯವರು ಹೂವು ಅರಿಶಿನವಿಟ್ಟು ಮುಂಗೊಂಡಕ್ಕೆ ಪ್ರಥಮ ಪೂಜೆ ಸಲ್ಲಿಸುವರು. ಕೊಂಡ ಹಾಯಲು ಮಳವಳ್ಳಿ ಅಯ್ಯನವರು ನೆರವೇರಿಸುತ್ತಾರೆ. ಆವೇಶ ಬಂದ ತಮ್ಮಡಿಯನ್ನು ಇಬ್ಬರು ಹಿಡಿದುಕೊಂಡು ವಾದ್ಯ ಸಮೇತ ದೇವಾಲಯಕ್ಕೆ ಕರೆತರುವರು. ಮುಂಗೊಂಡದ ಪೂಜೆ ಆದಮೇಲೆ ಐದು ಬಿಳಿಯ ಕಣಗಲೆ ಹೂವನ್ನು ಇಡುವರು. ಕೊಂಡ ಮುಗಿಯುವವರೆಗೂ ಈ ಹೂವುಗಳು ಬಾಡದಂತಿರುತ್ತದಂತೆ. ತಮ್ಮಡಿ ಹೊಂಬಾಳೆ ಹಿಡಿದು ದೇವಸ್ಥಾನ ಪ್ರವೇಶಿಸುವನು. ಈತನನ್ನು ಬಾಳೆ ಎಲೆಯ ಮೇಲೆ ಮಲಗಿಸಿ, ಶೈತ್ಯೋಪಚಾರ ಮಾಡುವರು. ಇದಾದ ಮೇಲೆ ಹುಲಿವಾಹನ ಸೇವೆ ಮಾಡುವರು. ಕೊಂಡವಾದ ಮೇಲ ಮೊದಲ ಪೂಜೆ ವೀರಾಪುರದವರದು. ಆ ಮೇಲೆ ನೇನೇಕಟ್ಟೆ, ಮಾಡ್ರಳ್ಳಿ, ಮಳವಳ್ಳಿಯವರು ಮಾಡುವರು.

ಬುಧವಾರ ತೇರನ್ನು ದೇವಾಲಯದ ಸುತ್ತಾ ಎಳೆಯುವರು. ಈ ಜಾತ್ರೆ ಖರ್ಚನ್ನು ಬನ್ನಿಪುರದವರು ವಹಿಸಿಕೊಳ್ಳುವರು. ಉಪ್ಪಲಿಗರು ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ ತಾಲ್ಲೂಕಿನ ಮೂವತ್ತಮೂರು ಹಳ್ಳಿಗರಿಗೆ ಆಹ್ವಾನ ನೀಡುತ್ತಾರೆ. ಗಾರುಡಿಗೊಂಬೆ, ವೇಷಗಾರಿಕೆ, ಕತ್ತಿವರಸೆ, ಮೊದಲಾದ ಜನಪದ ಕಲೆಗಳ ಪ್ರದರ್ಶನವಾಗುತ್ತದೆ. ತೇರಿನ ದಿನ ಮನೆಮನೆಯಲ್ಲೂ ಕಜ್ಜಾಯ ಪಾಯಸದ ಹಬ್ಬವಾಗುತ್ತದೆ. ಮೂರು ದಿನಗಳು ಸಂಭ್ರಮದಿಂದ ಜಾತ್ರೆ ನಡೆಯುವುದು. ಈ ಜಾತ್ರೆ ಭಕ್ತಿಯ ದ್ಯೋತಕವಾಗದೆ ಜನಾಂಗಗಳ ನಡುವಿನ ಐಕ್ಯತೆ ಬೆಸೆಯುವುದು.

ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರು ಹೋಬಳಿಯಲ್ಲಿ ಚೀಲದ ಕುಪ್ಪೆ ಮಾದೇಶ್ವರ ಕ್ಷೇತ್ರವಿದ್ದು ವರ್ಷಕ್ಕೊಂದು ಸಾರಿ ದೊಡ್ಡ ಜಾತ್ರೆಯಾಗಿ ಸಹಸ್ರಾರು ಭಕ್ತರು ಸೇರುತ್ತಾರೆ.

ಕಾರ್ತೀಕ ಮಾಸದಲ್ಲಿ ಉತ್ಸವ, ಕೆಂಡೋತ್ಸವವನ್ನು ವೈಭವದಿಂದ ನಡೆಸುತ್ತಾರೆ. ಭಕ್ತಾದಿಗಳು ಹರಕೆ ಹೊತ್ತು ತೀರಿಸುವರು. ದೀಪಾವಳಿ, ಯುಗಾದಿ ಸಮಯದಲ್ಲೂ ಜಾತ್ರೆ ನಡೆಯುತ್ತದೆ. ದೀಪಾವಳಿಯಲ್ಲಿ ಹಾಲರುವಿ ಉತ್ಸವ ನಡೆಯುವುದು. ನೂರಾರು ಜನರು, ದನಕರುಗಳು ಈ ಉತ್ಸವದಲ್ಲಿ ಪಾಲುಗೊಳ್ಳುವುವು.

ಮೈಸೂರು ನಗರದ ನರಸಿಂಹ ಕ್ಷೇತ್ರಕ್ಕೆ ಸೇರಿದ ವೀರನಗೆರೆಯಲ್ಲಿ ಕಾರ್ತೀಕ ಮಾಸದಲ್ಲಿ ವಿಶೇಷ ಪೂಜೆ ಉತ್ಸವ ನಡೆಸುವರು.

# ದೇವರ ಗುಡ್ಡರ ದೀಕ್ಷೆ

ಮಾದೇಶ್ವರ ಜಾತ್ರೆಯ ಸಂದರ್ಭದಲ್ಲಿ ಕಂಸಾಳೆಗುಡ್ಡರ ದೀಕ್ಷಾಕಾರ್ಯಕ್ರಮವು ನಡೆಯುತ್ತದೆ. ಇದು ಸಾಲೂರು ಮಠದಲ್ಲೂ ನಡೆಯುತ್ತದೆ. ಈ ದೀಕ್ಷಾ ಕಾರ್ಯವನ್ನು 'ಪುರಸೇಕಾರಿ' ನಡೆಸಿಕೊಡುತ್ತಾನೆ. ಆಯಾ ಜಾತಿಗೆ, ಆಯಾ ಪ್ರದೇಶಕ್ಕೊಬ್ಬ 'ಪುರಸೇಕಾರಿ' ಇರುತ್ತಾನೆ. ಈತ ದೀಕ್ಷಾಗುರು. ಪುರಸೇಕಾರಿ ಮದುವೆ ಆಗಬಹುದು ಮಾಂಸ, ಮದ್ಯ ತೆಗೆದುಕೊಳ್ಳುವಂತಿಲ್ಲ. ಪುರಸೇ ಕಾರಿ ಮನೆತನದಲ್ಲಿ ಎಲ್ಲರೂ ಗುಡ್ಡರಾಗಬೇಕು. ಶಿವರಾತ್ರಿಯಲ್ಲಿ ಜಾಗರಣೆ, ಉಪವಾಸ ಮಾಡುತ್ತಾನೆ. ಬಿಳಿ ಬಟ್ಟೆ, ಪಂಚೆಯ ಸಾಮಾನ್ಯ ಉಡುಗೆಯಲ್ಲಿ ಈತ ಇರುತ್ತಾನೆ. ಈತ ದೇವರ ಗುಡ್ಡನಿಂದ ಕಾಣಿಕೆಯನ್ನು ವಸೂಲು ಮಾಡಿ ಸಾಲೂರು ಮಠಕ್ಕೆ ತಂದೊಪ್ಪಿಸುತ್ತಾನೆ. ಈ ಕಾರ್ಯ ವಿಶೇಷವಾಗಿ ದೀಪಾವಳಿ, ಯುಗಾದಿ, ನವರಾತ್ರಿ ಹಬ್ಬಗಳಲ್ಲಿ ಜರಗುತ್ತದೆ. ಪುರಸೇಕಾರಿ "ಗುಡ್ಡರ ಬಿಡುವ" ಕಾರ್ಯವನ್ನು ನಿರ್ವಹಿಸುತ್ತಾನೆ. ಈ ಕಾರ್ಯ ಮಾದೇಶ್ವರ ಬೆಟ್ಟದಲ್ಲಿ ಯಾವಾಗಲಾದರೂ ಆಗಬಹುದು. ಕೆಲವರು ತಮ್ಮ ತಮ್ಮ ಊರುಗಳಲ್ಲೇ ನಿರ್ವಹಿಸುತ್ತಾರೆ. ಬೆಟ್ಟದಲ್ಲಿ ಒಂದು ದಿನಕ್ಕೆ ಮೂರು ನಾಲ್ಕು ಜನ ಗುಡ್ಡರನ್ನು ಬಿಡುತ್ತಾರೆ. ಅಷಾಢಮಾಸದಲ್ಲಿ ಬಿಟ್ಟು ಶಿವರಾತ್ರಿ, ದೀಪಾವಳಿ, ಯುಗಾದಿ, ಕಾರ್ತೀಕಮಾಸದಲ್ಲಿ ಜಾತ್ರೆಗಳಲ್ಲಿ ಗುಡ್ಡರ ಬಿಡುತ್ತಾರೆ. ಮಾದೇಶ್ವರನ ಒಕ್ಕಲಿನವರು ತಮ್ಮ ಹಿರಿಯ ಮಗನನ್ನು ಗುಡ್ಡನಾಗಿ ಮಾಡಲು ಸೋಮವಾರ, ಶುಕ್ರವಾರ ದಿನಗಳಲ್ಲಿ ಯಾವುದು ಮುಹೂರ್ತಕ್ಕೆ ಸರಿಯಾದ ದಿನವೆಂದು ಕೇಳಿ ನಿಶ್ಚಯಿಸಿಕೊಳ್ಳುತ್ತಾರೆ. ಮಂಟೇಸ್ವಾಮಿ, ಪಾರ್ವತಿ, ಮಾದೇಶ್ವರರ ಗುಡ್ಡರು, ಜೋಗಿಗಳು, ದಾಸರು ಈ ಐವರ ದರ್ಶನ ಮಾಡಿ ಸೇರಿಕೊಂಡು ಗುಡ್ಡನ ಮಾಡುವ ಹಿರಿಯರು ತಮ್ಮೂರ ಹತ್ತಿರದ ಬಾವಿ ಅಥವಾ ನದಿಯ ಹತ್ತಿರ ಮಾಡುತ್ತಾರೆ. ಹೆಚ್ಚಾಗಿ ಮಾದೇಶ್ವರನ ದೇವಸ್ಥಾನದಲ್ಲಿ ಮಾಡಿಸುತ್ತಾರೆ. ದೀಕ್ಷೆ ತೆಗೆದುಕೊಳ್ಳವವನಿಗೆ ಮೊದಲು ಮಂಡೆ ತೆಗೆಸಿ, ಉಗುರು ಕತ್ತರಿಸಿ, ಉಡುದಾರವನ್ನು ಕಿತ್ತೆಸೆದು ಅಂತರಗಂಗೆಗೆ ಕರೆತರುತ್ತಾರೆ. ಗುಡ್ಡರ ಕೈಯಲ್ಲಿ ನೀರು ಹಾಕಿಸಿ, ಹೊಸ ಉಡಿದಾರ, ಕಚ್ಚೆಪಾವುಡ ಕಟ್ಟಿಸಿ, ಭಸ್ಮವನ್ನು ಧರಿಸಿ ಗುಡ್ಡರು ಕಂಸಾಳೆ ನಾದವನ್ನು ಮಾಡಿಕೊಂಡು ಹಾಡುತ್ತಾ ಆತನನ್ನು ಕರೆದುಕೊಂಡು ಸಾಲೂರು ಮಠಕ್ಕೆ ಬರುತ್ತಾರೆ. ಅಲ್ಲಿ ಪುರಸೇಕಾರಿಗೆ ಹುಡುಗನನ್ನು ಒಪ್ಪಿಸಿ 'ಈತ ನಮ್ಮ ಮಗನಲ್ಲ, ಮಾದೇಶ್ವರನ ಮಗ' ಎನ್ನುತ್ತಾರೆ." ಮಾದೇವಾ ನಿನ್ನೊಕ್ಕಲಾಯ್ತಿರೋ ಕಂದನ, ಉದ್ಧಾರ ಮಾಡಪ್ಪ ಎಂದು ಕೈಮುಗಿದು ನಿಂತುಕೊಳ್ಳುತ್ತಾರೆ. ಪುರಸೇಕಾರ ಕಣ್ಣಿನ ರೆಪ್ಪೆ, ಕಿವಿ, ತಲೆ, ಹಣೆ, ತೋಳು, ಎದೆ, ಬೆನ್ನು ಕೈಕಾಲುಗಳಿಗೆ ಬ್ರಹ್ಮ, ವಿಷ್ಣು, ಮಹೇಶ್ವರ ಅಂತ ತ್ರಿಮೂರ್ತಿ ಹೆಸರನ್ನು ಹೇಳಿ ವಿಭೂತಿ, ಧರಿಸಿ, ಆತನನ್ನು ಕಂಬಳಿಯ ಗದ್ದುಗೆ ಮೇಲೆ ಕುಳ್ಳರಿಸುತ್ತಾನೆ. ಐದು ಕಳಸಗಳನ್ನು



ಗದ್ದುಗೆಯ ಮೇಲೆ ಇರಿಸುತ್ತಾನೆ. ಅವುಗಳಿಗೆ ದಾರವನ್ನು ಸುತ್ತಿ ಆತನ ಕತ್ತಿಗೂ ಒಂದೆಳೆ ತೆಗೆದು ರುದ್ರಾಕ್ಷಿ ಮಣಿವೊಂದನ್ನು ಹೊಸದಾರದಲ್ಲಿ ಜೋಡಿಸಿ ಅಡ್ಡವಾಗಿ ಕಟ್ಟುತ್ತಾರೆ. ಮಂಟೇಸ್ವಾಮಿ, ಸಿದ್ದಪ್ಪಾಜಿ ಗುಡ್ಡರಿಗೆ ಮೇಲ್ಮುಖವಾಗಿ ತೂತು ಬರುವಂತೆ ಕಟ್ಟಿದರೆ ಮಾದೇಶ್ವರರ ಗುಡ್ಡರಲ್ಲಿ ಅಡ್ಡವಾಗಿ ಬರುತ್ತದೆ. ಅರಿಸಿನದ ಬಟ್ಟೆಯಲ್ಲಿ ಅರಿಸಿನದ ಕೊನೆಯೊಂದನ್ನು ಹಾಕಿ ಕಬ್ಬಿಣದುಂಗುರವನ್ನಿಟ್ಟು ಅದನ್ನು ಕಪ್ಪು ಉಡಿದಾರದಲ್ಲಿ ಕಟ್ಟಿ ಕರ್ಪೂರ ಹಚ್ಚಿ ಪೂಜೆ ಮಾಡಿ, ರುದ್ರಾಕ್ಷಿ, ಕಂಕಣಧಾರಣೆ, ಪೂಜೆ ಮಾಡಿ ಎಲ್ಲರಿಂದಲೂ ಶರಣು ಮಾಡಿಸುವರು. ಕಳಸದ ಮುಂದೆ ಹಾಲನ್ನು ಮದುವೆಯ ಧಾರೆಯಲ್ಲಿ ಎರೆಯುವಂತೆ ಎರೆಯುತ್ತಾರೆ. ಗುಡ್ಡರ ಕೈಗೆ ಅಕ್ಕಿ, ಎಲೆ, ಅಡಿಕೆ, ಬೆಲ್ಲ, ಕಾಯಿ ಇಟ್ಟು ಪುರಸೇಕಾರಿ ಆತನಿಗೆ ಕಂಕಣವನ್ನು ಕಟ್ಟಿ, ಮೇಲೇಳಿಸಿ ನಮಸ್ಕಾರ ಮಾಡಿಸಿ "ಅಪ್ಪಾ ಮಗನೇ ಇಲ್ಲಿಯವರೆಗೆ ತಂದೆ ತಾಯಿಯರ ಮಗನಾಗಿದ್ದೆ ಇಲ್ಲಿಂದೀಚೆಗೆ ಮಾದಪ್ಪನ ಮಗನಾದೆ ಎಂದು ರುದ್ರಾಕ್ಷಿಧಾರಣೆ (ಲಿಂಗಧಾರಣೆ ಆಗಬಹುದಾ)"ಎಂದು ಕೇಳುತ್ತಾನೆ. ಆಗಲಿ ಎಂದು ಎಲ್ಲರೂ ಹೇಳುತ್ತಾರೆ. ಆಗ ಅದನ್ನು ಎಲ್ಲರ ಕೈಯಿಂದಲೂ ಮುಟ್ಟಿಸಿ ಅರಿಸಿನದ ದಾರದಲ್ಲಿ ಅದನ್ನು ಜೋಡಿಸಿ, ಆತನ ಕೊರಳಿಗೆ 'ಅಕ್ಷಯವಾಗಲಪ್ಪಾ' ಎಂದು ಹೇಳಿ ತಲೆಯ ಮೇಲೆ ಅಕ್ಷತೆ ಕಾಳುಗಳನ್ನು ಎರಚುತ್ತಾನೆ. ಪುರಸೇಕಾರಿಗೆ ಗುಡ್ಡರ ಮಾಡುವವರು ಐದು ಪಾವು ಅಕ್ಕಿ, ಎರಡು ಅಚ್ಚು ಬೆಲ್ಲ ಎಲೆ ಅಡಿಕೆ, ಎರಡು ತೆಂಗಿನಕಾಯಿ, ಆರು ಬಾಳೆಹಣ್ಣು, ಕಡ್ಡಿ ಕರ್ಪೂರ ಒಂದು ಕೊನೆ ಅರಿಸಿನ, ಕಂಕಣಕ್ಕೆ ಬಟ್ಟೆ, ಕಬ್ಬಿಣದ ಉಂಗುರ, ಗೋತೀರ್ಥ, ಗೋರಂಜನ, ಕಸ್ತೂರಿ, ಸಾಲೂರು ಮಠದ ಸ್ವಾಮಿಗಳಿಗೆ ೧೫/೧೨ ರೂಪಾಯಿಗಳ ಕಾಣಿಕೆ ಎಲ್ಲವನ್ನು ಇಟ್ಟುಕೊಡುತ್ತಾನೆ. ಹಿಂದೆ ಐದು ಪಾವಲಿಗಳನ್ನು ಇಡುತ್ತಿದ್ದರು. ಆದರೆ ಇಂದು ಇಪ್ಪತ್ತು ಮೂವತ್ತು ರೂಪಾಯಿಗಳನ್ನು ಕೊಡುತ್ತಾರೆ.ಪುರಸೇಕಾರಿ ಹುಡುಗನ ಕೊರಳಿಗೆ ರುದ್ರಾಕ್ಷಿಯನ್ನು ಕಟ್ಟುತ್ತಾರೆ. ಆಗ ಅಲ್ಲಿ ನೆರೆದ ಗುಡ್ಡರು'ಶರಣಾರ್ತಿ' ಎಂದು ಕಂಸಾಳೆ ನುಡಿಸಿಕೊಂಡು "ಲಿಂಗಧಾರಣೆಗೆ ಶರಣಾರ್ತಿ" ಎಂದು ಹೇಳುತ್ತಿರುತ್ತಾರೆ. ಎಲ್ಲರೂ ಆತನ ತಲೆಯ ಮೇಲೆ ಅಕ್ಷತೆ ಕಾಳುಗಳನ್ನು ಹಾಕುತ್ತಾರೆ. ಆ ಮೇಲೆ ಪುರಸೇಕಾರಿ ಶಿಷ್ಯನನ್ನುದ್ದೇಶಿಸಿ "ನೀವ್ಯಾರ ಮಗನಪ್ಪಾ" ಎಂದು ಕೇಳುತ್ತಾರೆ. ಆದಕ್ಕೆ ಆತ"ನಾನು ಮಾದೇವನ ಮಗಸ್ವಾಮಿ" ಎನ್ನುತ್ತಾನೆ. "ಅಂಗಂದ ಮ್ಯಾಲೆ ತಕ್ಕಳಪ್ಪಾ ಮಾದೇವನ ಜೋಳಿಗೇನಾ, ಮುಂಗೈಗೆ ಬೆತ್ತಾನ" ಎಂದು ಕೊಟ್ಟು ಮತ್ತೆ ಪ್ರಶ್ನಿಸುತ್ತಾನೆ.

"ಇದನ್ನು ಏನು ಮಾಡ್ತೀಯಾ?"

"ಏನು ಮಾಡ್ಲಿ ಗುರುಗಳೀ"

"ಈಗ ಮುಖ್ಯಸ್ಥರ ಮನೇಲಿ ಕ್ವಾರಣ್ಣ ಮಾಡ್ಕಂಡು ಬಾ ಆಮ್ಯಾಲೆ ಸೋಮವಾರ ಶುಕ್ರವಾರ ಮನೆ ಮನೆಗೆ ಹೋಗಿ ಕ್ವಾರಣ್ಣ ಸಾರ ಬೇಕಪ್ಪಾ ಸ್ವಾಮವಾರ, ಶುಕ್ರವಾರ ಇದಕ್ಕೆ ಪೂಜೆ ಮಾಡ್ತೀಯಾ ನಿಚ್ಚಯವಾಗಿ "

"ನಿಚ್ಚಯವಾಗಿ ಮಾಡ್ತೀನ"

ಆ ಮೇಲೆ ತಂದೆ ತಾಯಿಯರು ಗುಡ್ಡನ ಪಾದ ಪೂಜೆ ಮಾಡಿ, ಐದು ಸೇರು ಅಕ್ಕಿ, ಒಂದು ಅಚ್ಚು ಬೆಲ್ಲ, ಒಂದು ತೆಂಗಿನ ಕಾಯಿ, ಎಲೆ, ಅಡಿಕೆ, ಹಣ್ಣುಗಳನ್ನು ಜೋಳಿಗೆಗೆ ಹಾಕಿ ಭಿಕ್ಷೆಗೆ ಕಳುಹಿಸುತ್ತಾರೆ. ನಾಲ್ಕಾರು ಜನರಲ್ಲಿ (ಮನೆಗಳಲ್ಲಿ) ಭಿಕ್ಷೆ ತೆಗೆದುಕೊಂಡು ಬರುತ್ತಾನೆ. ಆಮೇಲೆ ಆತನಿಗೆ ರತನೀರು ತೆಗೆದು, ಕಾಲು ತೊಳೆದು ಮನೆಗೆ ಕರೆದುಕೊಳ್ಳುತ್ತಾರೆ. ಹೊಂಬಾಳೆ ಗೊನೆಯನ್ನು ಮಠದ ಅಥವಾ ಮನೆಯ ಸೂರಿಗೆ ಕಟ್ಟಿ ಧೂಪ ಹಾಕಿ ಕೈ ಮುಗಿಯುವರು ಮತ್ತು ಪುರಸೇಕಾರಿ

> ''ಹಾಗಂದ್ ಮ್ಯಾಕೆ ದರುಸ್ನಿಕರು ದೇವರ ದರ್ಶನಕ್ಕೆ ಬಂದಿರುವವರು, ಬಂದವ್ರಲ್ಲಾ ಅವ್ರೆಲ್ಲಾ ಹೇಳುವಂಗ ನಡೀತೀನಿ ಅಂತ ಅವರ ಪಾದಕ್ಕೆ ಬೀಳು'

ಎಂದಾಗ ಆತ ಪುರಸೇಕಾರಿಗೆ ನಮಸ್ಕರಿಸಿ ಅನಂತರ ಅಲ್ಲಿ ನೆರೆದ ಹಿರಿಯರಿಗೆ. ನಮಸ್ಕರಿಸುತ್ತಾನೆ.''ನಿಮ್ಮ ಪಾದ ಸಾಕ್ಷಿಯಾಗಿ ಹೇಳಿದಂಗೆ ನೋಡ್ಕೋಂತೀನಿ' ಅಂತ ಪ್ರತಿಜ್ಞೆ ಮಾಡುತ್ತಾನೆ.

> ''ಗುರುಗಳ ಕಂಡರೆ ಶರಣು ಅನ್ತೀಯಾ?''
>
> ''ಗುರುಗಳ ಕಂಡರೆ ಶರಣು ಅನ್ತೀನಿ''
>
> ''ಜೋಗಿ ಕಂಡ್ರೆ . ಆದೇಸಿ (ಶರಣು) ಅನ್ತೀಯಾ''
>
> ''ಜೋಗಿ ಕಂಡ್ರೆ ಆದೇಸಿ ಅನ್ತೀನಿ''
>
> ''ತಂದೆ ತಾಯಿಗೆ ಅನ್ನ ಹಾಕ್ತೀಯಾ''
>
> ''ತಂದೆ- ತಾಯಿಗೆ ಅನ್ನ ಹಾಕ್ತೀನಿ''
>
> ''ಅತಿಥಿಗಳು ಬಂದ್ರೆ ಸೋಮವಾರ ಶುಕ್ರವಾರ ಸ್ನಾನ ಮಾಡಿ ಪೂಜೆ ಮಾಡಿ ಬಿಕ್ಸೆನಾದ್ರೂ ತಂದು ಹಾಕ್ತೀಯಾ?''
>
> ''ವರ್ಷಕ್ಕೊಂದೊಂದು ಸಾರಿ ಒಂದೂ ಕಾಲು ರೂಪಾಯಿ ಕಾಣಿಕೆಯನ್ನು ಗುರುಮಠಕ್ಕೆ ತಂದುಕೊಡ್ತೀಯಾ?''
>
> ''ತಂದು ಕೊಡ್ತೀನಿ''

ಹೀಗೆ ಗುಡ್ಡನಿಗೆ ಹಲವಾರು ನಿಬಂಧನೆಗಳನ್ನು ಹಾಕುತ್ತಾನೆ. ಅದಕ್ಕೆಲ್ಲಾ ಶಿಷ್ಯ ಒಪ್ಪುತ್ತಾನೆ ಮುಂದೆ ಹಾಗೆ ಮಾಡ್ತೇನೆ ಎಂಬ ಸಂಕಲ್ಪ ಮಾಡುತ್ತಾನೆ. ಆಮೇಲೆ ಆತನ ಕಿವಿಯಲ್ಲಿ ಪಂಚಾಕ್ಷರಿ ಮಂತ್ರವನ್ನು ಉಪದೇಶಿಸುತ್ತಾನೆ ಪುರಸೇಕಾರಿ.

ಅಡಿಗೆ ಮಾಡಿ ಗುಡ್ಡನಿಗೆ ಇಂದು ತಟ್ಟೆ ಕೊಡುತ್ತಾರೆ. ಹಿಂದೆ ಮಣ್ಣಿನ ಬಟ್ಟಲಿನಲ್ಲಿ ಊಟ ಮಾಡುತ್ತಿದ್ದರು. ಕುಂಬಾರ ಒಂದೇ ಕೆರೆಯ ಮಣ್ಣನ್ನು ತಂದು ಎಂಜುಲು ಮೈಲಿಗೆ ಇಲ್ಲದೆ ಮಾಡುತ್ತಿದ್ದ. ಅದು ಬಿಸಿಲಿನಲ್ಲಿ ಒಣಗಬೇಕಾಗಿತ್ತು ಈಗ ಹಿತ್ತಾಳೆ, ಬೆಳ್ಳಿ, ಸ್ಟೀಲ್ ತಟ್ಟೆಗಳನ್ನು ಉಪಯೋಗಿಸುತ್ತಾರೆ. ಕಂಚಿನ ತಟ್ಟೆಯನ್ನು ಮಾತ್ರ ಉಪಯೋಗಿಸುವುದಿಲ್ಲ ಕಾರಣ ಅದು ಕಂಸಾಳೆ ಎಂಬ ಭಾವನೆಯಿಂದ ಗುಡ್ಡರಿಗೆ ತಾವು ಮಾಡಿದ ಕಡಬು, ಕಜ್ಜಾಯ ಅನ್ನ ಸಾರು ಎಲ್ಲವನ್ನು ಹಾಕಿ, ಗುಡ್ಡನ ಕೈಯಲ್ಲಿ ಒಂದು ಮುತ್ತುಗದ ಎಲೆಯಲ್ಲಿ



ಕೊಡುತ್ತಾರೆ. ಆತ ಅದನ್ನು ಹಿಡಿದುಕೊಂಡು''ಕಂತೆ ಭಿಕ್ಷೆ ನೀಡಿ ಸ್ವಾಮಿ'' ಅಂತ ಹೋಗುವನು. ಆಗ ಗುಡ್ಡರೆಲ್ಲಾ ಒಂದೊಂದು ಹಿಡಿ ಅನ್ನ ಹಾಕುತ್ತಾರೆ. ಅದನ್ನು ತೆಗೆದುಕೊಂಡು ಪಂತಿಯಲ್ಲಿ ಕುಳಿತು ಊಟ ಮಾಡುತ್ತಾನೆ. ಅಂದಿನಿಂದ ಆತ ಗುಡ್ಡರ ಗುಂಪಿಗೆ ಸೇರಿದವ ಎಂದಂತಾಗುತ್ತದೆ. ಇದಕ್ಕೆ ಗುಡ್ಡನ ಬಿಟ್ರು ಎಂದು ಹೇಳುತ್ತಾರೆ. ಅಂದಿನಿಂದ ಇವನು ಯಾವ ಎಂಜಲನ್ನೂ ತಿನ್ನುವಂತಿಲ್ಲ ಎಂಬ ನಿಯಮವಿದೆ. ಸೋಮವಾರ ಶುಕ್ರವಾರ ಸ್ನಾನ ಪೂಜೆ ಮಾಡಿಕೊಂಡು ಉಪಾದಾನ (ಭಿಕ್ಷೆ) ಮಾಡಬೇಕು. ತ್ರಿಕಾಲದಲ್ಲಿ ಮುಖತೊಳೆದು ಭಸ್ಮಧರಿಸಿಕೊಂಡು ಪೂಜೆ ಮಾಡಬೇಕು. ಆಗ ಪಂಚಾಕ್ಷರಿ ಮಂತ್ರವನ್ನು ಜಪಿಸಬೇಕು. ನೆರೆದ ಗುಡ್ಡರೆಲ್ಲಾ ಊಟ ಮಾಡಿದ ಮೇಲೆ ಅಕ್ಕಿ ಐದು ಪಾವಲಿಗಳನ್ನು ಕೊಡುತ್ತಾರೆ. ಅವರು ಅಕ್ಷಯವಾಗಲಿ ಎಂದು ಹರಸಿ ಹೊರಡುವರು. ಅಲ್ಲಿಂದ ಗುಡ್ಡನ ಜೀವನ ಆರಂಭವಾಗುತ್ತದೆ. ಹನ್ನೆರಡು ವರ್ಷಗಳವರೆಗೆ ತಂದೆ ತಾಯಿಯರ ಮಗನಾಗಿದ್ದವನು ಗುಡ್ಡನಾದ ಮೇಲೆ ಗುರುಗಳ ಮಗನಾಗುತ್ತಾನೆ. ಹಿಂದೆ ಗುಡ್ಡರಾದವರು ಕಾಲಿಗೆ ಪಾದರಕ್ಷೆಯನ್ನು ಹಾಕುವಂತಿರಲಿಲ್ಲ ಗುಡ್ಡನಾದವನು ಸೋಮವಾರ ಎಲ್ಲೇ ಇದ್ದರೂ ಸ್ನಾನ ಮಾಡಿಕೊಂಡು ಎಣ್ಣೆ ದೀಪ ಹಚ್ಚಿ, ಮಾದೇಶ್ವರನ ಹೆಸರು ಹೇಳಿ ಧೂಪ ಹಾಕಿ ಕೈ ಮುಗಿಯುವನು. ಹುಣ್ಣಿಮೆ, ಶಿವರಾತ್ರಿ, ದೀಪಾವಳಿ, ಯುಗಾದಿ, ಗೌರಿ, ಪೌರ್ಣಮಿ, ಹಬ್ಬಗಳಲ್ಲಿ ಗುಡ್ಡ ಕಂಕುಳಲ್ಲಿ ಜೋಳಿಗೆ ಹಾಕಿಕೊಂಡು ಬೆತ್ತ ಹಿಡಿದು, ಕಂಸಾಳೆ ನುಡಿಸಿಕೊಂಡು ನಾಲ್ಕಾರು ಮನೆಗೆ ಹೋಗಿ ಭಿಕ್ಷೆಯನ್ನು ತರುತ್ತಾರೆ. ಅದನ್ನು ಮನೆಯವರೆಲ್ಲಾ ಹಂಚಿಕೊಂಡು ಊಟ ಮಾಡುತ್ತಾರೆ. ದೀಕ್ಷೆಯಾದ ಮೇಲೆ ಬೇರೆಯವರ ಜೊತೆಯಲ್ಲಿ ಒಂದೇ ತಟ್ಟೆಯಲ್ಲಿ ಊಟ ಮಾಡಬಾರದು. ಕೆಲವು ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಬಿಟ್ಟರೆ ಮಂಟೇಸ್ವಾಮಿಯ ನೀಲಗಾರರು, ಗೊರವರು, ಎಲ್ಲಮ್ಮನ ಗುಡ್ಡರನ್ನು ಮಾಡುವಲ್ಲಿ ಮಾದೇಶ್ವರ ಗುಡ್ಡರನ್ನು ಬಿಡುವಂತೆಯೇ ದೀಕ್ಷಾಕ್ರಮ ನಡೆಯುವುದನ್ನು ನಾವು ಗುರುತಿಸಬಹುದು.

ಗುಡ್ಡನಾದ ಮೇಲೆ ಮಾದೇಶ್ವರನ ಬಗೆಗೆ ಕಥೆಯನ್ನು ಕಲಿತು ಹಾಡುವುದು ಮುಂದಿನ ಕೆಲಸ ಗುರುಗಳು ಸೋಮವಾರ ಗುಡ್ಡನಿಗೆ ಕಥೆ ಹೇಳಿಕೊಡಲು ಆರಂಭಿಸುತ್ತಾರೆ. ಆಗ ಅವನ ಬಾಯಿಯಿಂದ ಒಂದೇ ಸಮನೆ ''ತಿಮ್‌ಗಡದುಂಡಿ ಬಡ ಬ್ರಾಹ್ಮಣಯ್ಯ'' ಎಂದು ಹೇಳು ಎನ್ನುತ್ತಾರೆ. ಅವನು ಸರಾಗವಾಗಿ ತಪ್ಪದೆ ಹೇಳಿದರೆ ಅವನ ನಾಲಿಗೆ ಚೆನ್ನಾಗಿ ಓಡುತ್ತದೆ ಎಂದು ನಿರ್ಧರಿಸುತ್ತಾನೆ. ಆಗ ಅವನ ಧ್ವನಿ ಹದಕ್ಕೆ ಬರಲು ಅವನ ತಲೆ ತೂರುವಷ್ಟು ಅಗಲ ಬಾಯಿರುವ ಹೊಸ ಮಡಿಕೆಯನ್ನು ತರಿಸಿ ಅವನು ಆ ಮಡಿಕೆಯೊಳಗೆ ತನ್ನ ತಲೆಯನ್ನಿಟ್ಟುಕೊಂಡು ಬಾಯಿಗೆ ಬರುವ ಹಾಡನ್ನು ಹೇಳಿಸುತ್ತಾರೆ. ಹೀಗೆ ಒಂದು ತಿಂಗಳು ಮಾಡಿದ ಮೇಲೆ ರಾಗ ಚೆನ್ನಾಗಿದೆ ಎಂದು ತಿಳಿದರೆ ಕಥೆಯನ್ನು ಕಲಿಸುತ್ತಾರೆ. ಇಲ್ಲದಿದ್ದರೆ ಸೊಲ್ಲುಕೊಡಲೋ ದಮ್ಮಡಿ ಹೊಡೆಯಲೋ ನೇಮಿಸಿಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಆದರೆ ನಾನು ಸಂದರ್ಶಿಸಿದ ಬೆಂಗಳೂರಿನ ಕಂಸಾಳೆ ಗುಡ್ಡರಾದ ಕಂಸಾಳೆ ಮಾದಪ್ಪ ಅವರನ್ನು ಕೇಳಲಾಗಿ ಆ ನಿಯಮಗಳೇನೂ ಇಲ್ಲ, ಹಾಡಲು ಶಕ್ತಿ ಇದ್ದರೆ ಆತನಿಗೆ

ಪೂರ್ತಿ ಕಲಿಸುತ್ತೇವೆ. ಇಲ್ಲದಿದ್ದರೆ ಕಂಸಾಳೆ ನುಡಿಸಿಕೊಂಡು ಕೆಲವು ಬಿಡಿ ಹಾಡುಗಳನ್ನಾದರೂ ಹಾಡುವಂತೆ ಹೇಳಿಕೊಡುತ್ತೇವೆ ಇಲ್ಲವಾದರೆ ಹಿಮ್ಮೇಳಕ್ಕೆ ದನಿಗೂಡಿಸಲು, ದಮ್ಮಾಡಿ ಹೊಡೆಯಲೋ, ಕಂಸಾಳೆ ತಾಳ ಹೊಡೆಯಲೋ ಸೇರಿಸಿಕೊಳ್ಳುತ್ತೇವೆ ಎನ್ನುತ್ತಾರೆ. ಗುಡ್ಡರು ಕಥೆ ಕಲಿಸುವ ಗುರುವಿಗೆ ವರ್ಷಕ್ಕೊಂದು ಸಾರಿ ''ಗುರುಮನೆ ಹಣ'' ಎಂದು ಐದು ಹಣವನ್ನು ಕೊಡಬೇಕು. ಇದನ್ನು ಆ ಪುರಸೇಕಾರಿ ಸಾಲೂರು ಮಠಕ್ಕೆ ಒಪ್ಪಿಸುತ್ತಾನೆ. ದೀಕ್ಷೆ ಪಡದ ಮಾದೇಶ್ವರನ ಗುಡ್ಡ ಕ್ಷೌರಣ್ಯ ಕಾರ್ಯ ಮಾಡುತ್ತಾ ತನ್ನ ಗುರುವು ಹೇಳಿದಂತೆ ಗುರು, ಜಂಗಮ, ಗುಡ್ಡ, ಜೋಗಿಗಳನ್ನು ಆದರಿಸುತ್ತಾ ಮಾದೇಶ್ವರನ ಚರಿತ್ರೆಯನ್ನು ಹಾಡಿ ಹೊಗಳುತ್ತಾ 'ಗುಡ್ಡನ' ಜೀವನವನ್ನು ಸಾರ್ಥಕಪಡಿಸಿಕೊಳ್ಳುತ್ತಾನೆ. ಇಲ್ಲಿಗೆ ಪೂಜೆಗೆ ಬೆಟ್ಟ ಗುಡ್ಡ ಶ್ರೇಷ್ಠವಾದ ಎಂದರ್ಥ.

ಮಾದೇಶ್ವರನಿಗೆ ಹರಕೆ ಹೊತ್ತ ಭಕ್ತರು ಸೋಮವಾರ, ದೀಪಾವಳಿ, ಶಿವರಾತ್ರಿ ಮುಂತಾದ ಹಬ್ಬಗಳಲ್ಲಿ ಐದು ಜನ ಗುಡ್ಡರನ್ನು ಕರೆಯಿಸಿ ಕಜ್ಜಾಯ ತುಪ್ಪ ಮಾಡಿಸಿ ಬಡಿಸುತ್ತೇನೆ ಎಂದು ಹೇಳಿ ತಮ್ಮ ಕಷ್ಟ ಪರಿಹಾರವಾದ ಮೇಲೆ ಗುಡ್ಡರನ್ನು ಕರೆಯಿಸಿ ಸಂತೃಪ್ತಿಗೊಳಿಸುವರು. ಗುಡ್ಡರು ಸ್ನಾನ ಮಾಡಿ ಮಡಿಯುಟ್ಟು ವಿಭೂತಿ ಗಟ್ಟಿ, ರುದ್ರಾಕ್ಷಿ ಸರಗಳನ್ನು ಗದ್ದುಗೆ ಮಾಡಿ (ಪೂಜೆ ಮಾಡಿ), ಆ ಮೇಲೆ ಕುಳಿತು ಕಂಸಾಳೆಯಲ್ಲಿ ನೆನೆವಾರ್ತೆ ಮಾಡಲು ತೊಡಗುವರು. ಬಡವರ ಮನೆಗೆ ಒಳ್ಳೆಯದಾಗಲಿ ಎಂದು ಹೀಗೆ ಹರಸುವರು.

'ಹರಹರ ಹರಲಿಂಗ ಗುರುಲಿಂಗ
ಗುರುಶಾಂತ ಲಿಂಗ ನಂಜುಂಡ ಲಿಂಗ
ನಡುಮಲೆಯ ಲಿಂಗ, ನಡುಲಿಂಗ
ನುಡಿಲಿಂಗ ಸಾಕ್ಷಾತ್ ಲಿಂಗ
ಭಾರಿ ಕಂತೆ ಲಿಂಗ ಭಸ್ಮಾದಿಲಿಂಗ
ನಿಮ್ಮವರುಂಟಾಗಿ ವಾರ ವಾರ
ತುಂಬಿದ ಸೋಮವಾರ ದಿವಸ
ಬಡವರ ಮನೆ ಒಳಗೆ ನೀಡಿ ನೀಡಿ
ಮಾಡಿದಂತ ಹಾಲು ಅನ್ನ ಪಾಲು ಪಂಚಾಮೃತ
ಮೇಲಾದಂಥ ವಡೆ ಒಬ್ಬಟ್ಟು ಕಜ್ಜಾಯ ತುಪ್ಪಗಳು
ನೀಡಿ ಮಾಡಿದಂಥ ಭಕ್ತಿ
ಅವರ ಮನೆ ಸ್ವಾಮಿ, ಕುಲಸ್ವಾಮಿ
ಭಾಗ್ಯ ಸ್ವಾಮಿ ಪ್ರೀತಿಯಾಗಿ
ಆನೆಮಲೆಗರಿವಾಗಿ, ಜೇನುಮಲೆಗರಿವಾಗಿ
ವಜ್ರ ಮಲೆ ಗುಂಜಮಲೆ
ಗುಲಗಂಜಿ ಮಲೆ ಎಪ್ಪತ್ತೇಳು ಮಲೆ ಕೈಲಾಸಕರಿವಾಗಿ.

ಎಂದು ಹೇಳಿ ಗುಡ್ಡರು ಎಡೆ ಮಾಡಿ ಊಟ ಮಾಡುತ್ತಾರೆ. ಮನೆಯವರು ಕೊಟ್ಟಂಥ ಕಾಣಿಕೆಯನ್ನು ತೆಗೆದುಕೊಂಡು ಹೊರಡುತ್ತಾರೆ.

## ಕಂಸಾಳೆ ಮೇಳ

ಮಾದೇಶ್ವರ ಜಾತ್ರೆಯಲ್ಲಿ ಕಂಸಾಳೆ ಕಲೆಯನ್ನು ಪ್ರದರ್ಶಿಸುತ್ತಾರೆ. ಮಾದೇಶ್ವರನ ಭಕ್ತರು ಅಥವಾ ಗುಡ್ಡರು ತಮ್ಮ ಆರಾಧ್ಯ ದೈವವನ್ನು ಒಲಿಸಿಕೊಳ್ಳಲು ಕಂಸಾಳೆ ಕಲೆಯನ್ನು ಬಹಳ ಹಿಂದಿನಿಂದ ಉಳಿಸಿಕೊಂಡು ಬಂದಿದ್ದಾರೆ. ಇದರಲ್ಲಿ ಎರಡು ವಿಧಗಳುಂಟು. ಬೀಸು ಕಂಸಾಳೆಮೇಳ ಮತ್ತು ಕುಳಿತು ಹಾಡುವ ಕಂಸಾಳೆ ಮೇಳ

ಬೀಸು ಕಂಸಾಳೆಯ ಮೂಲ ಪ್ರವರ್ತಕ ಮಾದೇಶ್ವರ ಎಂಬುದು ನಮ್ಮ ಜನಪದರ ನಂಬಿಕೆ. ಮಾದೇಶ್ವರರು ಕತ್ತಿಪವಾಡದ ಹಳ್ಳದಲ್ಲಿ ಬಿಲ್ಲಯ್ಯ ಕಾರಯ್ಯರನ್ನು ಪರೀಕ್ಷೆ ಮಾಡಿದ ಮೇಲೆ ಸಂತೋಷದಿಂದ ಕಂಸಾಳೆ ಬೀಸಿ ನೃತ್ಯವೆಸಗಿದನಂತೆ. ಇದೇ ಬೀಸು ಕಂಸಾಳೆಯಾಯಿತು ಎಂಬುದು ಪ್ರತೀತಿ. ಬೀಸು ಕಂಸಾಳೆಯಲ್ಲಿ ಎರಡು ವಿಧಗಳುಂಟು. ''ತಟ್ ಬಟ್ಲು'' ಮತ್ತು ''ತಾರ್ ಬಟ್ಲು'' ಕಂಸಾಳೆಯನ್ನು ಒಬ್ಬರಿಗೊಬ್ಬರು ತಟ್ಟುತ್ತಾ ಹಾಡುತ್ತಾ ಕುಣಿಯುವ ವಿಧಾನ. ಇದರಲ್ಲಿ ಮೂವರಿಂದ ಎಂಟು ಜನರು ಭಾಗವಹಿಸುವುದನ್ನು ಕಾಣಬಹುದು. ಇದು ಕಣ್ಣು ಕಿವಿಗಳೆರಡಕ್ಕೂ ಹಿತ. ಸಾಧಾರಣವಾದ ಅಂಗಿ, ಮೊಣಕಾಲಿನವರೆಗೂ ಕಚ್ಚೆಹಾಕಿಕೊಂಡು ತಲೆಗೆ ಬಣ್ಣ ಬಣ್ಣದ ಅಲಂಕಾರವಾದ ರುಮಾಲನ್ನು ಸುತ್ತಿರುತ್ತಾರೆ. ಹಣೆ, ಮೈಕೈಗಳಿಗೆ ವಿಭೂತಿ ಧಾರಣೆ ಮಾಡಿಕೊಂಡು, ಕೊರಳು ಮತ್ತು ಕಿವಿಗಳಲ್ಲಿ ರುದ್ರಾಕ್ಷಿಗಳನ್ನು ಅಲಂಕರಿಸಿಕೊಂಡಿರುತ್ತಾರೆ. ಕಂಸಾಳೆಯ ಮೇಲು ಮುಸುಕಿಗೆ ಸುಮಾರು ೦.೪೫-ಮೀಟರ್‌ನಿಂದ ೦.೬೧ ಮೀಟರ್ ದಾರಕ್ಕೆ ಬಣ್ಣ ಬಣ್ಣದ ಗೊಂಡೆಗಳನ್ನು ಕಟ್ಟಿರುತ್ತಾರೆ. ಈ ದಾರದ ತುದಿ ಹಿಡಿದುಕೊಂಡು ಬೀಸಿ ತಾಳ ಹಾಕುತ್ತಾರೆ. ವೃತ್ತಾಕಾರವಾಗಿ, ತ್ರಿಕೋಣಾಕಾರವಾಗಿ ನಿಂತು ಆವೇಶದಿಂದ ಕಂಸಾಳೆಗಳನ್ನು ತಟ್ಟುತ್ತಾ ಹಾಡುತ್ತಾ ತಿರುಗಿಸುತ್ತಾ ನರ್ತಿಸುವರು. ಇದು ಚಮತ್ಕಾರ, ಶ್ರಮ, ಎರಡೂ ಸೇರಿ ಅಭಿವ್ಯಕ್ತವಾಗುವ ಒಂದು ವಿಶಿಷ್ಟವಾದ ಕಲೆ. ನಾಲ್ಕು ಜನ ಕಲಾವಿದರಿದ್ದರೆ ಮಧ್ಯೆ ಒಬ್ಬ, ಸುತ್ತಾ ಮೂವರು ನಿಂತು ಮಧ್ಯ ಇರುವ ಕಲಾವಿದ ನಿಂತು ಕುಳಿತು, ತಲೆಯ ಮೇಲೆ, ಬೆನ್ನು ಹಿಂದೆ, ಕಾಲುಗಳ ಕೆಳಗೆ ಬಾಗಿ, ಬಳುಕಿ, ಉರುಳುತ್ತಾ ಸುತ್ತಾ ನಿಂತಿರುವ ಮೂವರು ಕಲಾವಿದರಿಗೂ ತಾಳಗಳನ್ನು ಕೊಡುತ್ತಾ ನಿರ್ದಿಷ್ಟ ವಲಯದಲ್ಲಿ ಕಂಸಾಳೆ ಕಲೆಯನ್ನು ಪ್ರದರ್ಶಿಸುತ್ತಾರೆ. ಮಂದಗತಿಯಲ್ಲಿ ಆರಂಭವಾದ ಈ ಆಟ ತೀವ್ರಗತಿಯಲ್ಲಿ ಸಾಗುತ್ತದೆ.

''ಲಿಂಗ ಬಾ ಮುದ್ದು ಲಿಂಗ ಬಾ
ನಮ್ಮ ಮುದ್ದು ಮಾದಯ್ಯನ ಲಿಂಗ ಬಾ''

ಎಂಬ ಹಾಡನ್ನು ತಾಳಲಯ ಬದ್ಧವಾಗಿ ಹಾಡುತ್ತಾ ನೃತ್ಯ ಎಸಗುವರು. ಈ ನೃತ್ಯದ ಸಂದರ್ಭದಲ್ಲಿ ಕಲಾವಿದನ ಕೈಚಳಕ ಕಂಚಿನ ತಾಳದ ಇಂಪಾದ ನಾದ, ನೋಡಲು ಕೇಳಲು ಆನಂದ, ಆಶ್ಚರ್ಯ ಉಂಟು ಮಾಡುತ್ತದೆ. ತಾರ್ ಬಟ್ಲು ಎಂಬ ವಿಧಾನದಲ್ಲಿ ಕಂಸಾಳೆ

ಕಲಾವಿದನೊಬ್ಬನೇ ಭಾಗವಹಿಸುತ್ತಾನೆ. ಎಡದ ಕೈಯಲ್ಲಿ ಕಂಸಾಳೆಯ ಬಟ್ಟಲನ್ನು ಹಿಡಿದು ಬಲಗೈಯಲ್ಲಿ ಉದ್ದವಾದ ದಾರಗೊಂಡೆ, ಗಗ್ಗರ, ಹೊಂದಿದ ಕಂಸಾಳೆಯ ಮುಸುಕು ಹಿಡಿದುಕೊಳ್ಳುತ್ತಾನೆ. ಕಲಾವಿದನ ಆಯ್ಕೆಗೆ ತಕ್ಕಷ್ಟು ಉದ್ದದ ದಾರ ಬಿಟ್ಟು ಗೊಂಡೆ ಹಿಡಿದ ಕಂಸಾಳೆಯ ಮುಸುಕನ್ನು ಬೀಸಿ ಮೈಕೈ ಬಾಗಿ ಬಳುಕಿಸಿ ಕಲೆಯಲ್ಲಿ ಮೈ ಮರೆತು ಕುಣಿಯುತ್ತಾನೆ ಇದೇ 'ತಾರ್ ಬಟ್ಲು'

ಇತ್ತೀಚಿಗಂತೂ ವೈವಿಧ್ಯಮಯವಾಗಿ ಹಾಡಿ ಆಡುವರು. ಇಡೀ ರಾತ್ರಿ ಮಾದೇಶ್ವರನ ಕಥೆಯನ್ನು ಹಾಡಬೇಕಾದುದರಿಂದ ಕಂಸಾಳೆಯವರು ಕುಳಿತು ಹಾಡಬೇಕಾಗುತ್ತದೆ. ಇದೇ ಕುಳಿತು ಹಾಡುವ ಕಂಸಾಳೆ ಮೇಳ. ಇದರಲ್ಲಿ ಮೂವರಿಂದ ಏಳೆಂಟು ಜನರು ಭಾಗವಹಿಸುತ್ತಾರೆ. ಪ್ರಧಾನ ಗಾಯಕ ಮಧ್ಯದಲ್ಲಿ ಕುಳಿತು ಮಿಕ್ಕವರು ಡಪ್ಪು, ಕಂಸಾಳ, ಕೆಲವು ವೇಳೆ ಚಿಟಿಕೆ, ಏಕತಾರಿ ಹಿಡಿದು ಸುತ್ತಾ ಕುಳಿತುಕೊಳ್ಳುವರು. ಪ್ರಧಾನ ಗಾಯಕ ಕಥೆಯನ್ನು ನಿರೂಪಿಸುತ್ತಾ ಹಾಡಿದರೆ. ಮಿಕ್ಕವರು ವಾದ್ಯ ವಿಶೇಷ ನುಡಿಸುವುದರ ಜೊತೆಗೆ ಸೊಲ್ಲಿಕ್ಕುತ್ತಾರೆ. ಈ ಒಕ್ಕೊರಳ ಉಲಿತ ಆಸ್ವಾಮಮಾನಗಿರುತ್ತದೆ. ಕೆಲವು ಕಥೆ ಸಂಭಾಷಣಾ ರೂಪಿನಲ್ಲೂ ಇರುತ್ತದೆ. ಕೆಲವರು 'ಹೌದಪ್ಪ . . . ಹೌದು'' ಎಂದು ಹ್ಞೂಂ ಗುಟ್ಟುವರು. ಗಣಪತಿ, ಸರಸ್ವತಿ ದೇವತೆಗಳನ್ನು ಸ್ತುತಿಸಿ ಮಾದೇಶ್ವರನ ಕಥೆಯನ್ನು ಆರಂಭಿಸುತ್ತಾರೆ. ಮಂಗಳದೊಡನೆ ಕಥೆ ಮುಕ್ತಾಯವಾಗುವುದು. ಏಳು ರಾತ್ರಿ ಮಾದೇಶ್ವರನ ಏಳು ಕಥೆಯನ್ನು ನಿರರ್ಗಳವಾಗಿ ಹಾಡುವರು. ಅವುಗಳೆಂದರೆ ಹುಟ್ಟಿಬೆಳೆದ ಸಾಲು, ಸಂಕಮ್ಮ, ಜುಂಜೇಗೌಡ, ಇಕ್ಕೇರಿ ದೇವಮ್ಮ, ಬೇವಿನ ಕಾಳಿ, ಮೂಗಯ್ಯ, ಶ್ರವಣನ ಸಾಲುಗಳೆಂದು ನಮ್ಮ ಜನಪದ ಕಲಾವಿದರು ಹಾಡುತ್ತಾರೆ. ರಾತ್ರೋ ರಾತ್ರಿ ಹಾಡುವಾಗ ಜೊತೆ ಜೊತೆಯಲ್ಲಿ ಉಪಕತೆಗಳನ್ನು ಹಾಡಿ ಜನರ ಮನ ರಂಜಿಸುತ್ತಾರೆ. ಜಾತ್ರೆಯ ಸಮಯದಲ್ಲಿ ಗುಂಪು ಗುಂಪಿನಲ್ಲಿ ಜನರು ಕುಳಿತು ವಿವಿಧ ಕಲಾವಿದರಿಂದ ಮಾದೇಶ್ವರ ಕಥೆ ಕೇಳಿ ಆನಂದಿಸುವರು. ಭಕ್ತಿಪರವಶರಾಗಿ ಮಾದೇಶ್ವರರನ್ನು ನೆನೆಯುತ್ತಾರೆ.

## ಜಾತ್ರೆ, ಉತ್ಸವ ಆಚರಣೆಗಳು

ಒಂದು ದೇವನಿಗೆ ಹಲವಾರು ಜಾತ್ರೆಗಳಾಗುವುದು ಒಂದು ವಿಶೇಷವೇ ಸರಿ. ಶಿವರಾತ್ರಿ, ಯುಗಾದಿ, ನವರಾತ್ರಿ, ದೀಪಾವಳಿಗಳಲ್ಲಿ ದೊಡ್ಡ ಪ್ರಮಾಣದ ಜಾತ್ರೆಯಾಗುವುದು. ಶಿವರಾತ್ರಿ ಜಾತ್ರೆ ಪ್ರಸಿದ್ಧವಾದುದು.

ನವರತ್ನ ಕಿರೀಟಧಾರಣೆ, ಏಕದಶವಾದ ರುದ್ರಾಭಿಷೇಕ, ರುದ್ರಾಷೇಕ, ಬಿಲ್ವಾರ್ಚನೆ, ಹುಲಿವಾಹನ ಉತ್ಸವ, ಹುಲಿವಾಹನ ಹೊರಸುತ್ತು - ಒಳಸುತ್ತು, ಬಸವವಾಹನ ಹೊರಸುತ್ತು ಒಳಸುತ್ತು, ರುದ್ರಾಕ್ಷಿಮಂಟಪ ಹೊರಸುತ್ತ - ಒಳಸುತ್ತು, ಮಹಾರುದ್ರಾಭಿಷೇಕ, ನವರತ್ನ ಕಿರೀಟಧಾರಣ ಊರೊಟ್ಟಿನ ಸೇವೆ, ಏಕವಾರ ರುದ್ರಾಭಿಷೇಕ, ಶಿವಸಹಸ್ರಬಿಲ್ವಾರ್ಚನೆ, ಪಂಚಾಮೃತ ಅಭಿಷೇಕ, ರುದ್ರತ್ರಿಶತಿ, ಶಿವಅಷ್ಟೋತ್ತರ ಬಿಲ್ವಾರ್ಚನೆ, ಅನ್ನ ಬ್ರಹ್ಮೋತ್ಸವ, ಅನ್ನ ದಾಸೋಹ ಮಹೋತ್ಸವ, ದಧಿ ಅಭಿಷೇಕ, ಕ್ಷೀರಾಭಿಷೇಕ ಬಸವವಾಹನ ಉತ್ಸವ ರುದ್ರಾಕ್ಷಿ ಮಂಟಪೋತ್ಸವ, ಬೆಳ್ಳಿ ಕಿರೀಟೋತ್ಸವ, ನವರತ್ನ ಕಿರೀಟೋತ್ಸವ, ಒಳಸುತ್ತು ಹೊರಸುತ್ತು, ಚಿನ್ನದ ರಥೋತ್ಸವ, ವಿದ್ಯುತ್ ದೀಪಾಲಂಕಾರ, ಮಧುಪರ್ಕ ಅಭಿಷೇಕ, ಗಂಧಾಭಿಷೇಕ, ಪಂಚಫಲಾಭಿಷೇಕ, ವ್ರತದೀಕ್ಷೆ, ಭಸ್ಮಸೇವೆ, ವಧ್ಯೋದನಸೇವೆ, ರವೆ ಉಂಡೆ ಸೇವೆ, ಪೊಂಗಲ್, ಸುಂಡಲ್, ಪಂಚಕಜ್ಜಾಯ, ಲಾಡು, ಸಿಹಿಕಜ್ಜಾಯ ಮಾದೇಶ್ವರನಿಗೆ ನಡೆಯುವುವು.

ಮಾದೇಶ್ವರ ಕ್ಷೇತ್ರದಲ್ಲಿ ಯುಗಾದಿಯಲ್ಲಿ ರಥೋತ್ಸವ, ಮಾದೇಶ್ವರನ ಉತ್ಸವಗಳು ಮೂರು ದಿನಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ತಮಿಳುನಾಡಿನ ಭಕ್ತರು ವಿಶೇಷವಾಗಿ ಬರುತ್ತಾರೆ.

ಮಹಾನವಮಿ ಆಚರಣೆ ಎಂದರೆ ದಸರಾ ಆರಂಭಕ್ಕೆ ಮುಂಚೆ ಒಂಬತ್ತು ದಿನಗಳು ಮಾದೇಶ್ವರನ ಪೂಜೆ ಉತ್ಸವಗಳು ನಡೆಯುತ್ತವೆ. ಹತ್ತನೆಯ ದಿನ ದಸರಾ ಹಬ್ಬ ಇದಕ್ಕೆ ''ಗಣತಿ ತಿಂಗಳು'' ಎಂದು ಹೆಸರು. ಮಾದೇಶ್ವರವರು ಎದುರು ಬೋಳಿಯಲ್ಲಿ ಕುಳಿತು ಮೂಡಲು ಪಡವಲು, ತೆಂಕ, ಬಡಗ, ಕಾಡುಗಳಿಂದ ಎಷ್ಟು ಜನ ಪರಿಸೆ ಬರುತ್ತಾರೆ ಎಂಬುದನ್ನು ಲೆಕ್ಕ ಹಾಕುತ್ತಾರಂತೆ. ಅದೇ ''ಗಮತಿ ತಿಂಗಳು'' ಈ ಸಂದರ್ಭದಲ್ಲಿ ಮನೆಗೊಂದು ಆಳು ಬರಬೇಕು ಎಂಬ ನಿಯಮವಿರುತ್ತದೆ. ಇದನ್ನು ಮಾದೇಶ್ವರರು 'ಎದುರು ಬೋಳಿ' (ಎದುರು ಬೆಟ್ಟ)ದಲ್ಲಿ ನೋಡುತ್ತಾರೆಂಬ ಪ್ರತೀತಿ. ದೇವರನ್ನು ಅಮವಾಸ್ಯೆಯಾದ ಮೂರನೇ ದಿನಕ್ಕೆ ಪಟ್ಟಕ್ಕೆ ಕೂರಿಸುತ್ತಾರೆ. ಒಂಬತ್ತು ದಿನಗಳ ಪೂಜೆಯಾದ ಮೇಲೆ ಹತ್ತನೇ ದಿನ ಅಂದರೆ ದಸರಾದ ದಿನ ದೇವರು ಬನ್ನಿಮರಕ್ಕೆ ಹೋಗುವುದು. ಆಮೇಲೆ ತೆಪ್ಪೋತ್ಸವ ವಿಜಯದಶಮಿ ಬಹಳ ಮುಖ್ಯವಾದ ಆಚರಣೆ.

ದೀಪಾವಳಿ ಹಬ್ಬದಲ್ಲಿ "ಹಾಲರುವೀ ಸೇವೆ" (ಅರುವಿ - ಮಣ್ಣಿನ ಪಾತ್ರೆ)

ಬಹಳ ಪ್ರಸಿದ್ಧವಾದುದು. ಮಾದೇಶ್ವರರು ಜುಂಜೇಗೌಡನನ್ನು ತಮ್ಮ ಒಕ್ಕಲು ಮಾಡಿಕೊಂಡು'ಹಾಲರುವಿ' ಸೇವೆಯನ್ನು ಮಾಡಿಸಿಕೊಂಡರು. ಇದು ಅವನ ವಂಶಪಾರಂಪರ್ಯವಾಗಿ ನಡೆದು ಬಂದ ಸೇವೆಯಾಗಿದೆ. ಭಕ್ತರು ಹಿಂದಿನ ದಿನ ಹಸಿದುಕೊಂಡು ಮಣ್ಣನ್ನು ಎಂಜಲು ಮಾಡದೆ ಬಿಸಿಲಲ್ಲೇ ಒಣಗಿಸಿ ಜಲಗೊಂಬಿನ ಬಳಿ ಹಸುವಿನ ಹಾಲನ್ನು ತೆಗೆದುಕೊಂಡು ಬಂದು ಆನೆ ತಲೆದಿಂಬಿನಲ್ಲಿ ಇಡುತ್ತಿದ್ದರು. ಹಿಂದೆ ಹನ್ನೆರಡು ಮೈ ನೆರೆಯದ ಬಾಲಕಿಯರು ಹಾಲು ಹಳ್ಳದಿಂದ ತೀರ್ಥ ತಂದು ಮಾದೇಶ್ವರನ ಮಜ್ಜನಕ್ಕೆ ಪೂಜೆಗೆ ನೀಡುತ್ತಿದ್ದರು. ಈರಮಕ್ಕಳು (ವೀರಮಕ್ಕಳು) ಕತ್ತಿ, ದೊಣ್ಣೆವರಸೆ ಮಾಡಿಕೊಂಡು ಹೋಗಿ ಲಿಂಗದ ಮೇಲೆ ಹಾಲೆರೆಯಲು ಹೊರಡುತ್ತಿದ್ದರು. ಈಗ ಬಾಲಕಿಯರ ಸಂಖ್ಯೆ ನೂರೊಂದಕ್ಕೆ ಏರಿದೆ. ಈ ಪೂಜೆಯ ಸಂದರ್ಭದಲ್ಲಿ ಸಾಲೂರು ಮಠದ ಸ್ವಾಮಿಗಳಿರುತ್ತಾರೆ. ಹಾಲುಹಳ್ಳದಿಂದ ಕತ್ತಿ ಪವಾಡದ ಮೂಲಕ ಬಾಲಕಿಯರು ಹಾಲು ಹಳ್ಳದ ತೀರ್ಥವನ್ನು ಮಣ್ಣಿನ ಗಡಿಗೆಯಲ್ಲಿ ತೆಗೆದುಕೊಂಡು ಬರುತ್ತಾರೆ. ಒಂದೊಂದು ರೂಪಾಯಿನ ಕಾಣಿಕೆ ಕೊಟ್ಟು ಭಕ್ತಾದಿಗಳು ರಸ್ತೆಯಲ್ಲಿ ಸಾಲಾಗಿ ಮಲಗಿಕೊಳ್ಳುತಾರೆ. ಆಗ ಸಾಲೂರು ಮಠದ ಸ್ವಾಮಿಗಳು ಅವರ ಮೇಲೆ ನೆಗೆಯುತ್ತಾ ಬರುತ್ತಾರೆ. ಇದು ಮಾದೇಶ್ವರನ ದೇವಾಲಯದವರೆಗೂ ನಡೆಯುವುದು. ಆ ದಿನವೆಲ್ಲಾ ಬಾಲಕಿಯರು ಉಪವಾಸವಿರುತ್ತಾರೆ.

ಕಾರ್ತೀಕ ಸೋಮವಾರ ಭಕ್ತಾದಿಗಳು ವಿಶೇಷವಾಗಿ ಮಾದೇಶ್ವರರ ಗಿರಿಗೆ ಬಂದು ದರ್ಶನ ಪಡೆದು ಪೂಜೆ ನಡೆಸುತ್ತಾರೆ. ಮಣ್ಣಿನ ಹಣತೆಯ ದೀಪಾಲಂಕಾರ ಕೊನೆಯ ಕಾರ್ತೀಕದಲ್ಲಿ ತೆಪ್ಪೋತ್ಸವ ನಡೆಯುತ್ತದೆ. ಕೊನೆಯ ಕಾರ್ತೀಕ ಬಹಳ ಮುಖ್ಯ. ಆಗ ಹೆಚ್ಚಿಗೆ ಭಕ್ತಾದಿಗಳು ಬರುತ್ತಾರೆ. ಶಿವರಾತ್ರಿಯಲ್ಲಿ ಮೂರು ನಾಲ್ಕು ದಿನಗಳು ಉತ್ಸವ ನಡೆಯುತ್ತವೆ. ಈ ಸಂದರ್ಭದಲ್ಲಿ ತಮಿಳುನಾಡಿನ ಭಕ್ತರು ಬಂದು ತಮ್ಮ ಹರಕೆಯನ್ನು ಒಪ್ಪಿಸುತ್ತಾರೆ.

ಗೌರಿ ಹಬ್ಬದ ದಿನ ಗೌರಮ್ಮನನ್ನು ಬಿಡುವಾಗ ಮೂರು ನಾಲ್ಕು ದಿನಗಳಲ್ಲಿ ಕುಂಭಾಭಿಷೇಕ ಮಾಡುತ್ತಾರೆ. ಈ ಸಂದರ್ಭದಲ್ಲಿ ಮತ್ತು ಶಿವರಾತ್ರಿ ವೇಳೆಯಲ್ಲಿ ನಾಗಮಲೆ, ತಬಸರೆ, ಎದುರು ಬೋಳಿ, ಹಿಂಡಿ ಬಸಪ್ಪ, ಪಾದದರೆ, ಕಾರಯ್ಯನ ಬೋಳಿ, ಬಳಪದ ಕಲ್ಲಿನ ಬಸವೇಶ್ವರ, ಸಾಜಲಕ್ಕಿ ಬಸವೇಶ್ವರ, ಕಣಿವೆ ಬಸವೇಶ್ವರ, ಬಂಡೇಹಳ್ಳಿ ಬಸಪ್ಪ, ಆದಿ ಮಾದಪ್ಪನ ಬೆಟ್ಟಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ.

ಮಾದೇಶ್ವರರಿಗೆ ತಳಿಗೆ ಅನ್ನವನ್ನು ಎಡೆಮಾಡುವಾಗ ಜೊಲ್ಲು ಬಿದ್ದೀತೆಂದು ಬಾಯಿಗೆ ಬಟ್ಟೆಯನ್ನು ಕಟ್ಟಿಕೊಂಡು ಮಾಡುತ್ತಾರೆ. ಸಾಲೂರು ಮಠದ ಶ್ರೀಗಳವರ ಆದೇಶದ ಮೇರೆಗೆ ಮಾದೇಶ್ವರ ದೇವಾಲಯದ ಪೂಜೆ ಪುರಸ್ಕಾರಗಳು ನಡೆಯುತ್ತವೆ. ಮಾದೇಶ್ವರರಿಗೆ ನೈವೇದ್ಯ ನೀಡುವಾಗ ಲಿಂಗದ ಮುಂದೆ ಸಾಲೂರು ಮಠದ ಸ್ವಾಮಿಗಳು



ಇರುತ್ತಾರಲ್ಲದೆ, ಏಕಕಾಲದಲ್ಲಿ ಪ್ರಸಾದವನ್ನು ಸ್ವೀಕರಿಸುತಾರೆ. ಇದು ಜಂಗಮಲಿಂಗ ತೃಪ್ತಿಗೆ ಉದಾಹರಣೆ. ನಿತ್ಯೋತ್ಸವ, ಮಾಸೋತ್ಸವ ಸರ್ವ ಪೂಜೆಗಳಲ್ಲೂ ಸಾಲೂರು ಮಠದ ಸ್ವಾಮಿಗಳು ಇದ್ದೇ ಇರಬೇಕು. ಈ ಸಮಯದಲ್ಲಿ ಛತ್ರಿ ಬಿರುದು ಬಾವಲಿಗಳು ವಾದ್ಯ ಸಮೇತ ಶ್ರೀಯವರು ದೇವಾಲಯಕ್ಕೆ ದಯಮಾಡಿಸುವರು.

ಹನ್ನೆರಡು ವರ್ಷಕ್ಕೊಮ್ಮೆ ಶೇಷಣ್ಣೊಡೆಯರ ಜಾತ್ರೆ ನಡೆಯುತ್ತದೆ. ಈ ಉತ್ಸವಕ್ಕೆ ಅನ್ನದ ಎಡೆ ಮಾಡುತ್ತಾರೆ. ಅಗರದ ಗಂಗಡಿಕಾರ ಒಕ್ಕಲಿಗರ ಗದ್ದೆಯ ಗೊನೆಯ ಮೇಲಿನ ಭತ್ತ, ಆಲೆಮನೆಯ ಕೊಪ್ಪರಿಗೆಯಲ್ಲಿ ಆಗ ತಾನೇ ಅರೆಯಿಸಿ ಮಾಡಿಸಿದ ಹೊಸಬೆಲ್ಲ, ಯಳಯೂರು ತೆಂಗಿನಕಾಯಿ, ತಮಿಳುನಾಡಿನ ಎಲ್ಲಮ್ಮನ ದುರ್ಗದ ಬಾಳೆಹಣ್ಣು, ಮೈಸೂರಿನ ನೂರೆಂಟು ಮೊಳ ಚಂದ್ರಗಾವಿ, ಇವೆಲ್ಲಾ ಅಣಿಮಾಡಿಕೊಳ್ಳುತ್ತಾರೆ. ದೇವಸ್ಥಾನದ ಹತ್ತಿರ ಹೊಸದಾಗಿ ಮರದ ಒರಳು, ಮರದ ಒನಕೆ ಮಾಡಿ, ಹಸಿ ಭತ್ತವನ್ನು ಕುಟ್ಟಿ, ಉಪವಾಸದಲ್ಲಿರುವ ಪೂಜಾರಿ ಅಂತರಗಂಗೆ ನೀರು, ಹಾಲಿನಲ್ಲಿ ಮಾಡುತ್ತಾರೆ. ಹಿಂದೆ ಕುದಿಯುವ ಅಕ್ಕಿಯನ್ನು ಕೈ ಹಾಕಿ ಸೌಟಿನಲ್ಲಿ ತಿರುವುವಂತೆ ತಿರುವುತ್ತಿದ್ದರಂತೆ. ಆದರಿಂದ ಆತನಿಗೆ ಏನೂ ಬಿಸಿ ತಟ್ಟುತ್ತಿರಲಿಲ್ಲವೆಂಬ ಪ್ರತೀತಿ. ಆ ಅನ್ನವನ್ನು ಶೇಷಣ್ಣೊಡೆಯರಿಗೆ ಎಡೆ ಮಾಡಿ ನೂರೆಂಟು ಸಾರಿ ಪೂಜೆ ಮಾಡಿ ಕುಂಭಾಭಿಷೇಕ ಮಾಡುತ್ತಾರೆ. ಶೇಷಣ್ಣೊಡೆಯ ದನಕಾಯುತ್ತಿದ್ದ ಎಂಬ ಪ್ರತೀತಿ ಇದ್ದುದರಿಂದ ಅವನ ಪೂಜೆಗೆ ಒಂದು ಕೊಳಲು, ಕತ್ತಿ, ಕೊಡಲಿಗಳನ್ನು ಗದ್ದಿಗೆ ಮೇಲಿಟ್ಟು ಪೂಜುತ್ತಾರೆ. ಆ ದಿನ ತಮ್ಮಡಿ ಹಾಗೂ ಸಾಲೂರು ಮಠದ ಸ್ವಾಮಿಗಳು ಉಪವಾಸವಿರುತ್ತಾರೆ. ಪೂಜೆಯಾದ ಹದಿನೈದು ದಿನಗಳು ತೀರ್ಥಯಾತ್ರೆಗೆ ಹೋಗುವ ಪದ್ಧತಿ ಇದೆ.

ಮೊದಲು ಮಾದೇಶ್ವರರು ತಮ್ಮ ಎಣ್ಣೆ ಮಜ್ಜನವನ್ನು ಸರಗೂರಿನ ಮೂಗಯ್ಯನಿಂದ ಮಾಡಿಸಿಕೊಂಡು ತಮ್ಮ ಒಕ್ಕಲನ್ನಾಗಿ ಮಾಡಿಕೊಂಡರು. ಅದು ವಂಶಪಾರಂಪರ್ಯವಾಗಿ ಮುಂದುವರಿಯಿತು. ಸರಗೂರಿನ ಮೂಗಯ್ಯನ ವಂಶಜರು (ಸರಗೂರ ಸ್ವಾಮಿಗಳು) ಮೂರು ಹೋಳು ಎಳ್ಳನ್ನು ಬೂದುಗಂಬಳಿಯಲ್ಲಿ ಗಂಟು ಹಾಕಿಕೊಂಡು, ಅಡ್ಡರುಮಾಲು ಸುತ್ತಿಕೊಂಡು, ತುಂಬಿದ ಅಮಾವಾಸ್ಯೆಯ ದಿನ ಶಿವರಾತ್ರಿಯಂದು ಅವರೊಬ್ಬರೇ ಸಪ್ಪಟ ಸರಿರಾತ್ರಿಯಲ್ಲಿ ಬಂದು ಅಂಗೈನ ಮೇಲೆ ಎಳ್ಳುಹಾಕಿ, ಮೊಳಸಂದಿನಲ್ಲಿ ಎಣ್ಣೆ ತೆಗೆದು, ಸ್ವಾಮಿಯ ಮಸ್ತಕದ ಮೇಲೆ ಒತ್ತಿ ಅಭಿಷೇಕ ಮಾಡುತ್ತಿದ್ದರು. ಕೆಲವೊಮ್ಮೆ ಭಕ್ತಾದಿಗಳ ಖರ್ಚಿನಲ್ಲೂ ಕೆಲವೊಮ್ಮೆ ಸ್ವಂತ ಖರ್ಚಿನಿಂದಲೂ ಇವರು ಬರುತ್ತಿದ್ದರು. ಹಬ್ಬ, ಜಾತ್ರೆ, ಸಮಯಗಳಲ್ಲಿ ದೇವಸ್ಥಾನದ ಮುಂದೆ ಗುಡಾರ ಹಾಕಿ ಕೊಂಡು, ಭಕ್ತಾದಿಗಳಿಂದ ಕಾಣಿಕೆಯನ್ನು ಸ್ವೀಕರಿಸುತ್ತಿದ್ದರು. ಮೂಗಯ್ಯನ ವಂಶಸ್ಥರ ಮೂರು ಮನೆ ಸರಗೂರಿನಲ್ಲಿದೆ. ಇವರು ಆರಂಭ ಮಾಡಿ ಜೀವನ ನಡೆಸುತ್ತಿದ್ದಾರೆ. ವರ್ಷಗಳಿಂದ ದಾಯಾದಿ ಕಲಹದ ಕಾರಣ ಎಣ್ಣೆ ಮಜ್ಜನ ನಿಂತು ಹೋಗಿದೆ.

ಈಗ ತಿಂಗಳಿಗೊಮ್ಮೆ ಎಣ್ಣೆ ಮಜ್ಜನ ನಡೆಯುತ್ತದೆ. ಎಳ್ಳನ್ನು ಆಡಿಸಿ ಎಣ್ಣೆ ತೆಗೆದು ಆ ಎಣ್ಣೆಯನ್ನು ಸಾಲೂರು ಮಠದ ಗುರುಗಳ ಸಮ್ಮುಖದಲ್ಲಿ ದೇವರ ಮಂಡೆಗೆ ಒತ್ತಿ ಪೂಜಿಸುತ್ತಾರೆ. ಆ ದಿನ ದೇವರಿಗೆ ವಿಶೇಷ ಪೂಜೆ ನೈವೈದ್ಯಗಳು ನಡೆಯುತ್ತವೆ. ಈ ಕಾರ್ಯ ವರ್ಷದ ಪ್ರತಿ ತಿಂಗಳು ಶ್ರೀ ಸಾಲೂರು ಮಠದ ಗುರುಗಳ ಆದೇಶದ ಮೇರೆಗೆ ನಡೆಯುತ್ತದೆ. ಎಣ್ಣೆ ಮಜ್ಜನ ಪ್ರಸಾದವನ್ನು ಭಕ್ತಾದಿಗಳಿಗೆ ಹಂಚುವರು.

ಕುಂತೂರು ಪ್ರಭುಲಿಂಗ ಸ್ವಾಮಿಗಳ ಪಾದ ತೊಳೆದು ತೀರ್ಥವನ್ನು ತಿಂಗಳಿಗೊಂದು ಸಾರಿ ತುಂಬಿದ ಅಮಾವಾಸ್ಯೆಯ ದಿನ ತೆಗೆದುಕೊಂಡು ಬಂದು ಮಾದೇಶ್ವರ ಲಿಂಗದ ಮಸ್ತಕದ ಮೇಲೆ ಅಭಿಷೇಕವನ್ನು ಹಿಂದೆ ಮಾಡುತ್ತಿದ್ದರು. ಕುಂತೂರು ಮಠದ ಲಿಂಗಾಯಿತ ಭಕ್ತ ಇದನ್ನು ರಾತ್ರಿ ಹೊತ್ತು ತೆಗೆದುಕೊಂಡು ಯಾರೂ ಮುಟ್ಟದಂತೆ ಜಾಗ್ರತೆವಹಿಸಿ ಎಲ್ಲೂ ಇಡದೆ ಹೋರಡುತ್ತಿದ್ದ. ಆತನ ತಲೆಯ ಮೇಲೆ ತೀರ್ಥವನ್ನು ಇಟ್ಟ ಕೂಡಲೇ ಆತ ಜ್ಞಾನವಿಲ್ಲದೆ ನಡೆದುಕೊಂಡು ಮಾದೇಶ್ವರ ದೇವಸ್ಥಾನಕ್ಕೆ ಹೋದ ಕೂಡಲೇ ತಮ್ಮಡಿಗಳು ಈ ತೀರ್ಥವನ್ನು ತೆಗೆದುಕೊಂಡು ಮಜ್ಜನ ಮಾಡುತ್ತಿದ್ದರು.

ಹಿಂದೆ ಪ್ರಭುದೇವರ ಬೆಟ್ಟದಲ್ಲಿ ಹಾಲರವಿ ಆದ ನಂತರ ಕುಂತೂರಿನ ಪ್ರಭುದೇವರ ಗದ್ದುಗೆಯಿಂದ ಪಾದತೀರ್ಥವನ್ನು ತಂದು ಮಾದೇಶ್ವರ ಬೆಟ್ಟದಲ್ಲಿ ಹಾಲರುವಿ ಉತ್ಸವ ಮಾಡುತ್ತಿದ್ದರು. ಅದನ್ನು ತರುವಾಗ ಶುಚಿರ್ಭೂತರಾಗಿರಬೇಕಾದುದರಿಂದ ಇಂದು ಅದು ಸಾಧ್ಯವಾಗುತ್ತಿಲ್ಲ. ಆದ ಕಾರಣ ಪ್ರಭುದೇವರ ಗದ್ದುಗೆಯಿಂದ ಪಾದ ತೀರ್ಥಕ್ಕೆ ಬದಲಾಗಿ ಎಳನೀರನ್ನು ತಂದು ಹಾಲರುವಿ ಉತ್ಸವ ಮಾಡುತ್ತಾರೆ.

ಇದು ಐವತ್ತೆರಡು ಸಂವತ್ಸರಗಳ ಮಾತು. ಅಂದು ಮೈಸೂರು ಜಿಲ್ಲೆಯ ವಿವಿಧ ಸ್ಥಳಗಳಿಂದ ಪರಿಸೆಗಳು ಕಾಲ್ನಡಿಗೆಯಲ್ಲಿ ಸಾಗುತ್ತಿದ್ದರು. ಕಂಸಾಳೆ ಗುಡ್ಡರು ಹಣೆಗೆ ಮೂರು ರೇಖೆಯಲ್ಲಿ ವಿಭೂತಿ ಧರಿಸಿಕೊಂಡು, ಕೊರಳಲ್ಲಿ ರುದ್ರಾಕ್ಷಿ ಕಟ್ಟಿಕೊಂಡು ತಲೆಯ ಮೇಲೆ, ಹೆಗಲ ಮೇಲೆ ಹೆಗಲೊಸೆ, ಅದರೊಳಗೆ ಬುತ್ತಿ, ಪೂಜಾ ಸಾಮಗ್ರಿಗಳು. ಕಂಸಾಳೆ ಬಟ್ಟಲುಗಳನ್ನು ತಟ್ಟುತ್ತಾ ಬರುತ್ತಿದ್ದರೆ 'ಪರಿಸೆ ಬಂತು ಪರಿಸೆ' ಎಂದು ಪಡಸಾಲೆಗೆ ಬಂದು ಮಾದೇಶ್ವರನ ಸೇವೆಗೆಂದು ಕಾಸು ಹಾಕುವರು. ಅದನ್ನು ತೆಗೆದುಕೊಂಡು ಕಂಸಾಳೆ ನುಡಿಸುತ್ತಾ ಪ್ರಮುಖ ಗಾಯಕ-

''ಆನೆ ಮಲೆ, ಜೇನು ಮಲೆ<br>
ಕಾನ ಮಲೆ ಗುತ್ತಮಲೆ ಗುಂಜಿಮಲೆ<br>
ಗುಲಗಂಜಿಮಲೆ<br>
ಏಳುಮಲೆ ಎಪ್ಪತ್ತೇಳು ಮಲೆಯಲ್ಲಿ<br>
ತಪ್ಪದೆ ನಾಂಟ್ಯವಾಡುವ ಮಾದಪ್ಪನ ಪಾದಕ್ಕೊಂತ್ಸಲ<br>
ಉಘೇ ಅನ್ನಿ .........''



ಎಂದು ಗತ್ತಿನಲ್ಲಿ ಸೊಲ್ಲಿಕ್ಕಲು ಮಿಕ್ಕ ಭಕ್ತರೆಲ್ಲಾ ಒಕ್ಕೊರಳ ಧ್ವನಿಯಲ್ಲಿ "ಉಘೇ ಉಘೇ" ಎಂದು ಜಯ. ಘೋಷ ಮಾಡುತ್ತಿದ್ದರು. ಕಾಲ್ನಡಿಗೆಯಲ್ಲಿ ಕಾಡಲ್ಲಿ ದಾರಿ ಸಾಗಲು ಮಹಿಳೆಯರು ದನಿ ಎತ್ತರಿಸುತ್ತಾ ಹೊರಡುತ್ತಿದ್ದರು.

''ಮೊಗ್ಗೇ ಮಾತಾಡು ಮಲ್ಲಿಗೇ<br>
ಸಂಪಿಗೆ ಸ್ಯಾವಂತಿಗೆ<br>
ಹೂವೇ ಮಾತಾಡು ಮಲ್ಲಿಗೆ<br>
ಮತ್ತೊಬ್ಬಳು<br>
ಮಾದಪ್ಪ ಗುರುವೆಲ್ಲಿ ಮಜ್ಜಣಾದ ಕೊಳುವೆಲ್ಲಿ<br>
ಜಾಗಲ್ಲೆಲ್ಲಿ ಜಪುವೆಲ್ಲಿ ! ಮಾದೇವು<br>
ನಿಮ್ಮ ರುದ್ರಾಕ್ಷಿ ಮಠವೆಲ್ಲಿ!

ಕಿವಿಗೆ ಹಿತವಾಗುವಂತೆ ಹಾಡುತ್ತಾ ಸಾಗುತ್ತಿದ್ದರು. ತಂದ ಬುತ್ತಿ ಉಂಡು ದಾನಿಗಳು ನೀಡಿದ ಹೆಸರು ಬೇಳೆ ತಿಂದು, ಪಾನಕ, ನೀರುಮಜ್ಜಿಗೆ ತಣ್ಣೀರು ಕುಡಿದು, ಎಲೆ ಅಡಿಕೆ ಜಗಿದು-

ಆನ್ಮಲ್ಲ ಮಳೆ ಹೂದು ಜೇನುಕಲ್ಲ ಕೆರೆ ತುಂಬ<br>
ಜಾಣ ಮಾದಪ್ಪ ಜಲನಾಡಿ ! ಬರುವಾಗ<br>
ಜಾಲದ ಮೊಗ್ಗು ಕೆದರೀವೋ<br>
ಸಾಂಬ್ರಾಣಿ ಮಂಜು ಕವಿದಾವೋ!<br>
ಎಂದು ಮತ್ತೊಬ್ಬಾಕೆ ದನಿಗೂಡಿಸುತ್ತಿದ್ದಳು.

ತಲೆ ತುಂಬಾ ಹೂಮುಡಿದು, ಹೊಸ ಸೀರೆ ಉಟ್ಟು, ಮಳೆಗೆ ಲೆಕ್ಕಿಸದೆ ಬರುತ್ತಿದ್ದ ಇಂಪಾದ ಕಂಠವುಳ್ಳ ಅನುಭವಸ್ಥ ಹೆಣ್ಣುದನಿಗೆ ಕೆಲವರು ಸೊಲ್ಲಕ್ಕುತ್ತಾ ಹೋಗುತ್ತಿದ್ದರು. ಮಾದಪ್ಪನ ಜಾತ್ರೆಗೆ-

ಆನೆ ಮಲೆ ಹಾಸಿಕೊಂಡು<br>
ಜೇನು ಮಲೆ ಹೊದ್ದುಕೊಂಡು<br>
ಎಪ್ಪತ್ತೇಳು ಮಲೆಯನ್ನು ಸುರಳಿಸುತ್ತಿ<br>
ತಲೆದಿಂಬನ್ನಾಗಿ ಮಾಡಿಕೊಂಡು<br>
ಒರಗಿರುವಂತ ನಮ್ಮಪ್ಪಾಜಿ<br>
ಏಳುಮಲೆ ಹೆತ್ತಯ್ಯನ<br>
ಪಾದಕ್ಕೊಂದಲ ಉಘೇ ಅನ್ನಪ್ಪಾ. . . . ."<br>
'ಉಘೇ, ಉಘೇ' ಎಂದು ಮಿಕ್ಕವರು ದನಿಗೂಡಿಸುತ್ತಿದ್ದರು.<br>
ಹಾಲು ಹಳ್ಳ ಮಾಡಿ<br>
ಬೆಣ್ಣೆ ಬೆಟ್ಟವ ಮಾಡಿ<br>
ಮಜ್ಗೆ ಹೆಜ್ಜೂರ ಮಾಡಿ<br>
ತಿಂಗ್ಳು ತಿಂಗ್ಳಿಗೂ ತಿಂಗಳ ಸ್ಯಾವೆ ತಕ್ಕಳೊ<br>
ಹೆಚ್ಚುವ ಹುಲಿವಾಹನದಯ್ಯನ ಪಾದ್ಕೆ

ಒಂದ್ಸಲ ಉಘೇ ಅನ್ನಿ ......."
"ಉಘೇ ............. ಉಘೇ"
ಕಂಸಾಳೆ ಕಲಾವಿದ ಮಾದಯ್ಯನ ನೆನೆಯುತ್ತಾ
"ಅತ್ತ ಆರು ಗಾವುದ ಇತ್ತ ಆರು ಗಾವುದ
ಸುತ್ತ ಹನ್ನೆರಡು ಗಾವುದ
ಬ್ಯಾಡ ಗಂಪುಣ ಸೀಮೆ ನಟ್ಟ ನಡುರಾಣ್ಯ
ಜಲಕಂಡು ತಲಾ ಒಳ್ಳೇದು ಅಂತ್ಹೇಳಿ
ಆನೆ ತಲೆದಿಂಬಿನಿಂದ ಹಾರಿ
ಬಿದ್ರುಮೆಳೆಯಲ್ಲಿ ನೆಲೆಗೊಂಡಂತ
ಮುದ್ದು ಮಾಯಕ್ಕಾರನ ವಾದಕ್ಕೊಂದ್ಸಲ
ಉಘೇ ಅನ್ನಿ .......
"ಉಘೇ ಉಘೇ"

" ಒಡಗಾಯ್ ಬಸಪ್ಪ
ಇಡುಗಾಯ್ ಬಸಪ್ಪ
ತಣ್ಣೀರು ಕುಡ್ಡು ತಂಗಳನ್ನು ತಿಂದು
ದುಡ್ನ ದುಡ್ಡಿಗೆ ಬಡ್ಡಿ ತಕ್ಕಳುವಂತಾ
ಸಿಂಗನಲ್ಲೂರು ಬಸಪ್ಪಗೊಂದ್ಸಲ
ಉಘೇ ಅನ್ನಪ್ಪಾ ........."
"ಉಘೇ ....... ಉಘೇ"
ಆರು ಲಕ್ಷ ರಾಯರ ಗಂಡ
ಮೂರು ಲಕ್ಷ ರಾಯರ ಗಂಡ
ಕೊಟ್ಲಿಂ ತ್ರಾಯರ ಗಂಡ
ನೆಲ ಮುಗಿಲು ಪಾತಾಳ್ರಾ ರ ಗಂಡ
ಒಕ್ಕಳ ಬಿತ್ತಿ ಲಕ್ಕೂಸ ಹೋ ಬೆಳೆವಂತ
ದೊಡ್ನ ಬಸವಣ್ಣೋರ ಪಾದಕ್ಕೊಂದ್ಸಲ
ಉಘೇ ...... ಅನ್ರಪ್ಪಾ.....
"ಉಘೇ .......ಉಘೇ"
ಒಕ್ಕಳಕ್ಕಿ ಹಾಕಿ
ಒಂದು ಬದ್ನೇ ಕಾಯಾಕಿ
ಲಕ್ಸದಮ್ಯಾಲೆ ತೊಂಬತ್ತೇಳು ಕೋಟಿ ಗಣಂಗಳಿಗೆ
ನಿಚ್ಚ ಭೋಜನಾ ಮಾಡಿ
ಮಿಕ್ಕಿದ ಪರ್ಸಾದವನ್ನು ಕಲ್‌ಬಂಡಿಗೆ ತುಂಬಿ
ಕೈಲಾಸಕ್ಕಳಿಸುವಂತಾ
ನೀಲಮ್ಮ ತಾಯಿ ಪಾದಕ್ಕೆ



ಒಂದು ಸಲ ಉಘೇ ಅನ್ರಪ್ಪಾ......"
"ಉಘೇ ...... ಉಘೇ"
"ಕಾರಯ್ಯನಿಗೊಂದ್ಸಲ ಉಘೇ ಅನ್ನಿ"
"ಉಘೇ ...... ಉಘೇ"
"ಬಿಲ್ಲಯ್ಯನ್ಗೊಂದ್ಸಲ ಉಘೇ ಅನ್ನಿ"
"ಉಘೇ ....."
"ಬ್ಯಾಡರ ಕನ್ನಯ್ಯಗೊಂದ್ಸಲ ಉಘೇ ಅನ್ನಿ"
"ಉಘೇ......."
"ಶೇಷಣ್ಣನವರ ಪಾದಕ್ಕೊಂದ್ಸಲ ಉಘೇ ಅನ್ನಿ"
"ಉಘೇ....."
"ರಂಗನೊಡ್ಡಿನ ರಂಗಸ್ವಾಮಿ ಪಾದಕ್ಕೊಂದ್ಸಲ ಉಘೇ ಅನ್ನಿ
"ಉಘೇ ...."
"ಮೂಕಳ್ಳಿ ಮಾರಮ್ಮನಿಗೊಂದ್ಸಲ ಕಿರು ಕಾಕ್ಹಾಕ್ರಪ್ಪೋ"
"ಕ್ಹೀ ......ಕ್ಹೀ.....ಕ್ಹೀ......"
"ಕಟ್ಟೆ ಬಸಪ್ಪನಿಗೊಂದು ಗುಟುರ್ ಹಾಕ್ರಪ್ಪೊ"
"ಅಂಬಾ......"
"ಉಘೇನ್ ಮಲೆಯೋ ...... .ಉಘೇ ....."

ಬಿಸಿಲಲ್ಲಿ ಕಾದು, ನೆರಳಲ್ಲಿ ತಂಪು ಮಾಡಿಕೊಂಡು, ಸೀರೆ ಸೆರಗು ವಲ್ಲಿಗಳಲ್ಲಿ ಬೆವರು ಒರಸಿಕೊಂಡು, ಕೆರೆ ಕಟ್ಟೆಗಳಲ್ಲಿ ನೀರು ಕುಡಿದು, ಬುತ್ತಿ ಉಂಡು, ಎಲೆ ಅಡಿಕೆ ಜಗಿದು, ಮಾದೇವನ ಮಹಿಮೆ ಬಣ್ಣಿಸುತ್ತಾ, ಹುಲ್ಲಿನ ಮೇಲೆ ವಿಶ್ರಾಂತಿ ತೆಗೆದುಕೊಂಡು, ಊರೂರು ಪಡವಸಾ ಯಲ್ಲಿ ಮಲಗಿ ಬೆಳಿಗ್ಗೆ ಮತ್ತೆ ಪಯಣ! ಊರೂರ ಜನರ ಆತಿಥ್ಯ ಸ್ವೀಕರಿಸಿ, ಪರಿಸೆಗಳು ಏಳು ಮಲೆಗೆ ಸಾಗುತ್ತಿದ್ದರು. ಕಾಡಿನ ಕ್ರೂರ ಪ್ರಾಣಿಗಳನ್ನು ಎದುರಿಸಲು ಕಂಸಾಳೆ ನುಡಿಸುತ್ತಾ, ಹಾಡುತ್ತಾ ಪ್ರಕೃತಿ ಮಧ್ಯೆ ಸಾಗುತ್ತಿದ್ದರು. ಅವರ ಸಂಭ್ರಮ ಹೇಳಲಸದಳ, ಮಾದಪ್ಪ ಪಾದ ಬೆಳೆಸಿ ಪಾವನ ಮಾಡಿದ ಸ್ಥಳಗಳನ್ನೆಲ್ಲಾ ಸಂಚರಿಸಿ ಕೈ ಮುಗಿದು ಬರುತ್ತಿದ್ದರು. ಸುತ್ತೂರು ಮಠದಲ್ಲಿ ಮಾದಪ್ಪನ ಗದ್ದುಗೆ ಪೂಜಿಸಿ, ಕುಂತೂರಲ್ಲಿ ಮಾದೇಸ್ವರ ಮಂಡಿಯೂರಿದ ಸ್ಥಳಕ್ಕೆ ನಮಿಸಿ, ಕೊಳ್ಳೇಗಾಲದ ಮರಡೀಗುಡ್ಡದ ತಾಣ ನೋಡಿ. ಸಿಂಗನಲ್ಲೂರು ಕಟ್ಟೆ ಬಸವೇಶ್ವರನ ಪೂಜೆ ಮಾಡಿ, ಉಡಿದಾರ ಹಳ್ಳದಲ್ಲಿ ಉಡಿದಾರ ಕಿತ್ತೆಸೆಯುತ್ತಿದ್ದರು. ಏಕೆಂದರೆ ಮಾದೇಶ್ವರರು ಇಲ್ಲಿ ತಂದೆ-ತಾಯಿ ಬಂಧನ ಕಳೆಯಿತೆಂದು ಉಡಿದಾರ ಕಿತ್ತೆಸದರಂತೆ. ಆ ನಂಬಿಕೆಯ ಮೇಲೆ ಬೇವಿನ ಹಟ್ಟಿಯಲ್ಲಿ ದೂಪ ಹಾಕಿ, ರಾಮಯ್ಯನ ಕೊಳದ ಹತ್ತಿರ ನ್ಯಾನೆ ಕಟ್ಟುತ್ತಿದ್ದರು. ಮಕ್ಕಳಾಗದವರು. ರಂಗಸ್ವಾಮಿ

ಒಬ್ಬಿನಲ್ಲಿ ಪೂಜೆ ಮಾಡಿ, ಹಾಲು ಹಳ್ಳದಲ್ಲಿ ನೀರು ಕುಡಿದು, ಆನೆ ತಲೆದಿಂಬಲ್ಲಿ ವಿಶ್ರಮಿಸಿಕೊಂಡು ಹೋಗುತ್ತಿದ್ದರು.

ಮಾದೇಶ್ವರನ ಬೆಟ್ಟಕ್ಕೆ ಹುಲಿಯ ಬಾಯಿಗೋ ಆನೆಯ ತುಳಿತಕ್ಕೋ ಸಿಕ್ಕಿಕೊಳ್ಳುವೆವೋ ಎಂಬ ಶಂಕೆ ಒಂದೆಡೆಯಾದರೆ, ಸಾಂಕ್ರಾಮಿಕ ರೋಗಗಳಾದ ಕಾಲರಾ, ಪ್ಲೇಗು, ಸಿಡುಬು ಮುಂತಾದುವುಗಳಿಗೆ ಸಿಲುಕಿ ಸಾಯುವೆವೋ ಎಂಬ ಅನುಮಾನ ಕಾಡಿಸುತ್ತಿತ್ತು. ಮುನ್ನೆಚ್ಚರಿಕೆಗೆ ಚುಚ್ಚು ಮದ್ದೂ ಇತ್ತು. ಬಸ್ಸು, ಕಾರು, ರಸ್ತೆ, ಒಂದೂ ಇಲ್ಲದ ಕಾಲದಲ್ಲಿ ಕಾಲುನಡಿಗೆಯಲ್ಲೇ ಬಂದು ಹರಕೆ ಪೂರೈಸಲು ಭಕ್ತಿಯಿಂದ ಭಜಿಸುತ್ತಾ, ಜನಪದ ಕವಿಗಳು ಹೇಳುವಂತೆ ಕತ್ತಲು ರಾಜ್ಯದಲ್ಲಿ ನೆಲೆಯಾದ ಮಾದಪ್ಪನ ಜಾತ್ರೆ ನೋಡಲು ಬರುತ್ತಿದ್ದರು.

ಅವನಿರುವ ಪರಿಸರದಲ್ಲಿ ಮಧ್ಯ ಮಾಂಸ ಸೇವಿಸುವಂತಿಲ್ಲ. ಸ್ತ್ರೀ ಸಂಸರ್ಗ ಮಾಡುವಂತಿಲ್ಲ, ಮುಟ್ಟು ತಟ್ಟು ಮೈಲಿಗೆಯಾಗಿ ಹೋಗುವಂತಿಲ್ಲ. ನಮ್ರತೆಯಿಂದ, ವಿನಯದಿಂದ, ನಡೆದುಕೊಳ್ಳುತ್ತಾ ಕಾಲುದಾರಿಯಲ್ಲಿ ಸರ್ಪನಹಾದಿ, ಬಸವನ ಹಾದಿಯಲ್ಲಿ ಸಾಗಿ ಹೋಗುತ್ತಿದ್ದರು ಪರಸೆಗಳು.

ಇಂದು ಬಸ್ಸು, ಹೋಟೆಲು, ಸೌಕರ್ಯಗಳಿರುವುದರಿಂದ ಬುತ್ತಿ ಬೇಕಿಲ್ಲ, ಈ ನಡಿಗೆ ಇಲ್ಲ, ಛತ್ರಗಳಿರುವುದರಿಂದ ಹೊರಗಡೆಯ ಮೊಳದ ಡೇರೆಗಳಿಲ್ಲ, ಪಡಸಾಲೆಗಳ ಆಶ್ರಯವಿಲ್ಲ. ಝುಗ ಝುಗಿಸುವ ವಿದ್ಯುತ್ ದೀಪಗಳ ಬೆಳಕಲ್ಲಿ ತಿರುಗಾಡುತ್ತಾ, ಧಾರಾಕಾರವಾಗಿ ಬೋರ್‌ವೆಲ್ ನೀರಿಂದ ಸ್ನಾನ ಮಾಡುವರು ಜೊತೆಗೆ ಕುಡಿದು ದಾಹವಿಂಗಿಸಿಕೊಳ್ಳುವರು. ಈಗ ಇದು ಒಂದು ರೀತಿ ಪಟ್ಟಣವೇ ಆಗಿದೆ. ಮಾದಪ್ಪನ ಬೆಟ್ಟ, ಕಾಡು ಕುರುಬರು, ಜೇನು ಕುರುಬರು ಸೋಲಿಗರು ಇಂದಿನ ಸಂಸ್ಕೃತಿಗೆ ಹೊಂದಿಕೊಂಡ ಅವರು ಈ ಜಾತ್ರೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ.

ವಿಸ್ತಾರವಾದ ನಡುಮಲೆಯಲ್ಲಿ ಅಂಗಡಿ ಮುಂಗಟ್ಟು, ತರಕಾರಿ, ಹಣ್ಣು ಎಳನೀರು, ಕಲ್ಲಂಗಡಿ, ಮಿಣಕಿ, ಸೌತೆ, ಮಿಠಾಯಿ, ಬತಾಸು, ಖಾರಸೇವು, ಚಕ್ಕುಲಿ, ನಿಪ್ಪಟ್ಟು, ಕಾಫಿ, ಟೀ, ಹಾಲು, ವಡೆ, ಬೋಂಡ ಮುಂತಾದವುಗಳ ಉಪಹಾರ ಗೃಹಗಳಿವೆ. ಮಾದೇಶ್ವರ ದೇವಾಲಯದ ಸುತ್ತ ಸುಂದರ ಪೌಳಿ, ಮಂಟಪಗಳಿಂದ ಅಲಂಕೃತವಾಗಿದೆ. ದೇವಾಲಯದ ಬಲದ್ವಾರದಲ್ಲಿ ಬಸವನ ವಿಗ್ರಹ ಆಲಂಬಾಡಿಗೆ ಮುಖಮಾಡಿದೆ. ಹಸುಗಳು ಈ ಬಸವನ ದೃಷ್ಟಿಸಿದರೆ ಫಲವಾಗುತ್ತದೆಂಬ ನಂಬಿಕೆ ಭಕ್ತರಿಗೆ. ದೇವಾಲಯದ ಎಡಭಾಗದಲ್ಲಿ ವಿರಕ್ತಕಟ್ಟೆಯಲ್ಲಿ ಸಾಲೂರು ಮಠದ ಜಂಗಮರು ಕುಳಿತು ಬರುವ ಪರಿಸೆಗೆ ಮೂರು ಹಿಡಿ ಕಡಲೆ ಹಾಕಿ ಮತ್ತೆ ಪ್ರಸಾದವಾಗಿ ಅಲ್ಲಿ ಕಡಲೆ ಪಡೆಯುತ್ತಾರೆ. ಹಿಂದೆ ಉಕ್ಕನಳ್ಳಿ ಬಸವಣ್ಣನಿಗೆ ಮಾದೇಶ್ವರರು ಉಕ್ಕಿನ ಕಡಲೆ ತಿನ್ನಿಸುತ್ತಿದ್ದರು. ಈಗ ಅದಕ್ಕೆ ಜಂಗಮರಿಗೆ ಈಗಿನ ಭಕ್ತರು ಕಡಲೆ ತಿನ್ನಿಸುವ ಪ್ರತೀತಿ ಬಂದಿದೆ.

ದೇವಸ್ಥಾನಗಳ ಸುತ್ತಲೂ ಉತ್ಸವ ಮೂರ್ತಿಗಳು ಕಂಸಾಳೆ ಗುಡ್ಡರು ಕಂಸಾಳೆ ನುಡಿಸಿಕೊಂಡು ಜನಪದ ಹಾಡುಗಳನ್ನು ದೇವಸ್ಥಾನದ ಪ್ರದಕ್ಷಿಣೆ ಮಾಡುತ್ತಿದ್ದಾರೆ.



ಭಕ್ತಾದಿಗಳು ಧೂಪ ಹಾಕಿ ಕೈ ಮುಗಿದು ಮೂರು ಸುತ್ತು ಸುತ್ತುತ್ತಿದ್ದಾರೆ. ಬೆಳೆದ ಧಾನ್ಯಗಳಾದ ಭತ್ತ, ರಾಗಿ, ಹರಳು, ಅವರೆ ಮುಂತಾದವುಗಳನ್ನು ಸುತ್ತಲೂ ಎರಚುತ್ತಾ, ಹರಕೆ ಹೊತ್ತವರು ಹರಕೆ ಸಲ್ಲಿಸುತ್ತಾ, ಮಾದೇಶ್ವರ ದರ್ಶನ ಮಾಡಲು ಸಾಲಾಗಿ ನಿಂತಿದ್ದಾರೆ. ದೇವಸ್ಥಾನದ ಕಲ್ಲಿನ ಮೇಲೆ ಕೈಯನ್ನು ಇಟ್ಟು, ಸರಿಸುತ್ತಾ, ತಮ್ಮ ಇಷ್ಟಾರ್ಥಗಳು ನೆರವೇರುವುದೋ ಏನೋ ಎಂಬುದನ್ನು ಪರಿಶೀಲಿಸುತ್ತಿದ್ದಾರೆ. ಕೆಲವೆಡೆ ದೆವ್ವ ಬಿಡಿಸುವ ಕೆಲಸ ಸಾಗುತ್ತಿದೆ. ಮಠದಲ್ಲಿ ಪರದಲ್ಲಿ ಊಟ ಮಾಡುವವರು ಕೆಲವರು. ಜಾತಿ ಮತ ಭೇಧಗಳಿಲ್ಲದೆ ಎಲ್ಲರೂ ಮಾದಪ್ಪನ ದರ್ಶನ ಪಡೆಯಲು ಬರುತ್ತಿದ್ದಾರೆ. ವಿನೋದಾವಳಿಯಲ್ಲಿ ಭಾಗವಹಿಸುವವರು ಕೆಲವರು. ಹರಕೆ ಹೊತ್ತವರು ಮುಡಿ ತೆಗಿಸಿ, ಅಂತರ ಗಂಗೆಯಿಂದ ದೇವರ ದರ್ಶನಕ್ಕೆ ಬರುತ್ತಿದ್ದಾರೆ. ಅಗ್ನಿ ಕುಂಡಕ್ಕೆ ಪಂಜಿನ ಸೇವೆ ಮಾಡಿ ಪಂಜುಗಳನ್ನು ಹಾಕುತ್ತಿದ್ದಾರೆ. ತಮಿಳು ನಾಡಿನಿಂದ ಬಂದ ಭಕ್ತರು 'ಮಾದಯ್ಯ ...... ಮಾದಯ್ಯ' ಎಂದು ಬೇಡುತ್ತಿದ್ದಾರೆ. ತೇರಿನೆಡೆಗೆ ಸಾಗುವ ಮಹಿಳೆಯರು ಹಾಡುತ್ತಾ ಬರುತ್ತಿದ್ದಾರೆ. ಪರಸೆ ಜವನ ಸಿಕ್ಕಿಸಿದ ಬಾಳೆಹಣ್ಣನ್ನು ತೇರಿನ ಮೇಲೆ ಎಸೆಯುತ್ತಿದ್ದಾರೆ. ಕೆಲವರು ಚಿಲ್ಲರೆ ನಾಣ್ಯ ಎಸೆಯುತ್ತಿದ್ದಾರೆ. ಕೆಲವರು ಆಯ್ದುಕೊಂಡು ಕತ್ತಿಗೆ ಹಾಕಿಕೊಳ್ಳಲು ಕಾತುರರಾಗಿದ್ದಾರೆ. ತೇರು ಹರಿಯುತ್ತಿದ್ದಂತೆ "ಉಘ್ಘೋ ಮಾದಪ್ಪನಿಗೆ" ಎಂದು ಪರಸೆ ಜಯ ಘೋಷ ಮಾಡುವರು. ತಮಿಳುನಾಡಿನ ಭಕ್ತರು ಉಡುಕು ವಾದ್ಯಬಾರಿಸುತ್ತಾ "ಮಾದಯ್ಯ .......ಮಾದಯ್ಯ" ಎಂದು ನಮಿಸುತ್ತಿದ್ದಾರೆ. ಉಗಾದಿ ಶಿವರಾತ್ರಿಗಳಲ್ಲಿ ತಮಿಳು ನಾಡಿನ ಪರಸೆ ಹೆಚ್ಚು. ಹಾಡು, ನರ್ತನ, ಕೀರ್ತನೆಗಳಿಂದ ವಾತಾವರಣ ಶಬ್ದಮಾಯವಾಗಿದೆ. ಮಾದೇಶ್ವರನ ಮೇಲಿನ ಹಾಡುಗಳು, ಸುಪ್ರಭಾತಗಳು ಒಂದೆಡೆ ಮೊಳಗುತ್ತಿವೆ."ಯಾತ್ರೆ ಮಾಡಿ ಪಾತ್ರೆ ತೆಗೆದುಕೋ' ಎಂದು ಪಾತ್ರೆ ತೆಗೆದುಕೊಳ್ಳುವವರು ವಿಭೂತಿ ಗಟ್ಟಿ, ಹೂವು, ಬೆಟ್ಟನೆಲ್ಲಿ, ಮಾವು ಮುಂತಾದುವುಗಳನ್ನು ಕೊಂಡುಕೊಳ್ಳುತ್ತಾರೆ. ಸತ್ಯ ಮಂಗಲ ರಸ್ತೆಯಲ್ಲಿ ಗೋಪಿ ತಾಲ್ಲೂಕಿನ ಗೇರುಮಾಳದ ಬಳಿ ಶ್ರವಣನ ಬೋಳಿ ಇದೆ. ಶ್ರವಣನನ್ನು ಸಂಹಾರ ಮಾಡುವ ಮೊದಲು ಮಾದೇಶ್ವರರು ತಪಸ್ಸು ಮಾಡಿದ ಸ್ಥಳವೇ ತಪಸರೆ. ಇಲ್ಲಿ ವರ್ಷಕ್ಕೊಂದು ಸಾರಿ ಜಾತ್ರೆ ಆಗುತ್ತದೆ. ಮಧ್ಯರಾತ್ರಿ ಒಂದು ಹಸು ಬರುತ್ತದಂತೆ, ತಮ್ಮಡಿ ಹಾಲುಕರೆದ ಕೂಡಲೇ ಹಸು ಯಾರಿಗೂ ಕಾಣಿಸಿಕೊಳ್ಳದೆ ಹೊರಟುಹೋಗುವುದಂತೆ.

ಮಾದೇಶ್ವರರು ನಡುಮಲೆಗೆ ಬರುವಾಗ ತಪಸರೆಯಲ್ಲಿ ಜಾಲಿ ಕಂಬವನ್ನು ನೆಟ್ಟರಂತೆ. ಇಲ್ಲಿ ಮಾದೇಶ್ವರ ಕ್ಷೇತ್ರಕ್ಕೆ ಬರುವ ಪರಸೆಗಳು ಸಂಸರ್ಗ ಸೇರಿದರೆ ಅಲ್ಲಿಗೆ ಹುಲಿ ಹೊತ್ತುಕೊಂಡು ಹೋಗಿ ಕುಕ್ಕುವುದೆಂಬ ಪ್ರತೀತಿ.

ರುದ್ರಾಕ್ಷಿಮಂಟಪದ ಸೇವೆ, ಚಿನ್ನದ ತೇರಿನ ಸೇವೆ, ಬಸವನ ವಾಹನ ಸೇವೆ, ಹುಲಿವಾಹನದ ಸೇವೆ, ಬೆಳ್ಳಿ ದಂಡ ಹಿಡಿದು ಮಾದೇಶ್ವರನ ಉತ್ಸವ ಮೂರ್ತಿ ಕುಳ್ಳರಿಸಿ ಓಲಗದ ಇಂಪಾದ ದನಿಯೊಡನೆ ಮಾದೇಶ್ವರನ ಉತ್ಸವ ಮಾಡುತ್ತಿದ್ದರೆ ಸಾಲೂರು ಮಠಕ್ಕೆ

ಜನರು ಸಾಲಾಗಿ ಹೋಗಿ ಗುರುಕಾಣಿಕೆ ಒಪ್ಪಿಸಿ ಗುರುಗಳಿಂದ ಆಶೀರ್ವಾದ ಪಡೆದು ಒಂದೆಡೆ ಪುರುಸೇಕಾರಿಯಿಂದ ಗುಡ್ಡರಿಗೆ ದೀಕ್ಷಾಕಾರ್ಯ ನೆರವೇರುತ್ತಿದೆ.

ಜಾತ್ರೆಯಿಂದ ಬರುವಾಗ ಬಿದರುಬುಟ್ಟಿಗಳು, ದೊಣ್ಣೆ, ಸಣ್ಣಸಣ್ಣ ವಿಭೂತಿಯುಂಡೆ, ಕಾಯಿ, ತೆಗೆದುಕೊಂಡು ಊರಿನಲ್ಲಿ ಕಡಲೆ ಪುರಿಯನ್ನು ತಂದು ಜನರ ಮನೆಗೆಲ್ಲಾ ಹಂಚುತ್ತಿದ್ದರು. ಈಗಲೂ ಇದು ಸಣ್ಣ ಪ್ರಮಾಣದಲ್ಲಿ ಮುಂದುವರಿಯುತ್ತಿದೆ.

ಹಿಂದೆ ತಮ್ಮಡಗೇರಿಯಲ್ಲಿನ ಪಡಸಾಲೆಗಳ ಮೇಲೆ ಜಾತ್ರೆಯ ಜನ ಮಲಗುತ್ತಿದ್ದರು. ಮಿಕ್ಕವರು ಗೋಣಿತಾಟು, ಗುಡಾರಗಳಿಂದ ಟೆಂಟ್ ಮಾಡಿ ಅದರೊಳಗೆ ಇರುತ್ತಿದ್ದರು. ಹೊರಗಡೆ ಬೆಂಕಿ ಹಾಕಿ ಕಾಯುತ್ತಾ ಇರುತ್ತಿದ್ದುದನ್ನು ನೋಡಿದರೆ ರಣರಂಗದಲ್ಲಿ ಸೈನಿಕರ ಟೆಂಟಿನಂತೆ ಕಾಣುತ್ತಿತ್ತು. ಆದರೆ ಇಂದು ಆ ದೃಶ್ಯ ಮಾಯವಾಗಿ ಎಲ್ಲರೂ ಛತ್ರಗಳಲ್ಲಿ ಪಟ್ಟಣಕ್ಕಿಂತ ಹೆಚ್ಚಾಗಿ ಎಲ್ಲಾ ಸೌಲಭ್ಯಗಳನ್ನು ಪಡೆದು ವಾಸವಾಗುವ ಕಾಲವಾಗಿದೆ. ಭಕ್ತಾದಿಗಳು ಸಂಕೀರ್ತನೆಗಳ ಶ್ರವಣ ಮಾಡುತ್ತಾ ರಾತ್ರಿಯೆಲ್ಲಾ ದೇವನ ಧ್ಯಾನದಲ್ಲಿರುತ್ತಾರೆ.

ಮೈಸೂರಿನ ಅರಸರಾದ ಜಯಚಾಮರಾಜೇಂದ್ರ ಒಡೆಯರು ಮಾದೇಶ್ವರನ ಭಕ್ತರು. ಅವರೂ ಜಾತ್ರೆಗೆ ಹೋಗುತ್ತಿದ್ದರು. ಅವರ ಕಾರು ಬಂದಾಗ ಜನರೆಲ್ಲಾ ಹೂವು - ಹಣ್ಣು ನೀಡಿ ಗೌರವಿಸಿ ನಮ್ಮೂರಿಂದ ಬೀಳ್ಕೊಡುತ್ತಿದ್ದರು. ಬೀದಿ ಬೀದಿಗಳಲ್ಲಿ ಜನರು ಪರಿಸೆಗಳಿಗೆ ಮಾದೇಶ್ವರನ ಸೇವೆಗೆಂದು ಕಾಸು ನೀಡುತ್ತಿದ್ದರು.

ಮಾದೇಶ್ವರನ ಜಾತ್ರೆಗೆ ಹಳ್ಳಿಯವರು - ಪಟ್ಟಣದವರು, ಬಡವರು-ಬಲ್ಲಿದರು, ದೊಡ್ಡವರು-ಮಕ್ಕಳು, ಜಾತಿಮತ ಭೇದಗಳಿಲ್ಲದೆ ಎಲ್ಲಾ ರೀತಿಯ ಜನರೂ ಸೇರುವರು. ಮಾದೇಶ್ವರನ ಸೇವೆ ಮಾಡಲು ಜಾತ್ರೆಯೊಂದು ನೆಪ. ಸ್ನಾನ ಪೂಜೆಮಾಡಿ ಹೊಸ ಬಟ್ಟೆಯುಟ್ಟು, ಜನರ ದನಿಯೊಡನೆ, ವಾದ್ಯಗಳ ಇಂಪಿನೊಡನೆ, ಧ್ವನಿವರ್ಧಕಗಳ ಕೂಗಿನೊಡನೆ ಕಂಸಾಳೆ ನೃತ್ಯ, ಗಾಯನದೊಡನೆ ಕೂಡಿದ ಶಬ್ದ, ಬಣ್ಣ ಬಣ್ಣದ ಬಟ್ಟೆಯುಟ್ಟ ಜನ ಸಂದಣಿಯಲ್ಲಿ ಮಾದೇಶ್ವರನ ದೇವಾಲಯದ ಮುಂದೆ ತೇರು ರಂಜಿಸುತ್ತದೆ. ವ್ಯಾಪಾರಿಗಳಿಗೆ ಹಬ್ಬವೋ ಹಬ್ಬ. ಅಲ್ಲಲ್ಲಿ ದಾನಿಗಳ ಅರವಟ್ಟಿಗೆಗಳು ಅನ್ನ, ನೀರುಮಜ್ಜಿಗೆ, ಪಾನಕ ಹೆಸರು ಬೇಳೆಗಳ ದಾನ, ಸಿನಿಮಾ, ಜನಪದ ಸಂಗೀತಗಳ ಅಬ್ಬರ, ರುಚಿ ರುಚಿ ತಿಂಡಿ ಊಟಗಳ ಹೋಟೇಲುಗಳು, ಹಣ್ಣುಹಂಪಲು, ಎಳನೀರು, ತರಕಾರಿ, ಪಾತ್ರೆ ಪಗಡಿ ದೇವರ ನೈವೇದ್ಯದ ಪದಾರ್ಥಗಳ ವ್ಯಾಪಾರ. ಮೋಜಿನ ಆಟಗಳು, ಗಿಣಿ ಶಾಸ್ತ್ರ, ಹಸ್ತ ಮುದ್ರಿಕೆಯ ನೋಡುವವರು, ಕರಪಾಲ ಮೇಳದವರು, ನಂದೀಧ್ವಜ ಕುಣಿಸುವವರು, ಒಂದೇ ಎರಡೇ ಅನೇಕ ಜನಪದ ಕಲೆಗಳ ಪ್ರದರ್ಶನ ಎಲ್ಲಿ ನೋಡಿದರಲ್ಲಿ ಜನ ! ಜನ!!ಜನ!!! ಮುಡಿ ಕೊಟ್ಟು ಮಾದೇಶ್ವರ ಸ್ತೋತ್ರ ಮಾಡಿ "ಉಘೇ ಉಘೇ" ಎನ್ನುತ್ತಾ ಜಯ ಘೋಷ ಮಾಡುವರು. ಪಂಜಿನ ಸೇವೆ, ಧೂಪದ ಸೇವೆ, ಉರುಳುಸೇವೆ ದೇವಾಲಯದ ಸುತ್ತಾ ನಡೆಯುತ್ತಲೇ ಇರುತ್ತಾರೆ. ವೀರಭದ್ರ ಕುಣಿತ, ಕಂಸಾಳೆ,



ನಂದಿಧ್ವಜ, ಸತ್ತಿಗೆಗಳ ಕುಣಿಸಿ, ಚಾಮರ ಬೀಸುತ್ತಾ, ವಿಗ್ರಹಮೂರ್ತಿಯನ್ನು ಮರದ ತೇರಿನಲ್ಲಿ ಕುಳ್ಳರಿಸಿ, ಚಿನ್ನದ ಪ್ರಭಾವಳಿ ಇಟ್ಟು ಅಲಂಕರಿಸಿ, ಪೂಜೆ, ತೇರನ್ನು ಸಿಂಗರಿಸಿ ಅದು ಎಳೆಯುವುದಕ್ಕಾಗಿ ಜನರು ಕಾತುರರಾಗಿ ಕಾದಿರುತ್ತಾರೆ. ಬಾಳೆಹಣ್ಣು ಜವನ ತೆಗೆದುಕೊಂಡು ಧೂಪ ಹಾಕಿ, ಹಣ್ಣುಕಾಯಿ ಮಾಡಿಸುವವರು ಮಾಡಿಸಿ, ಮಂಗಳ ವಾದ್ಯಗಳನ್ನು ಮೊಳಗಿಸುತ್ತಾ, ಜನರು, ಗುಡ್ಡರು ಆವೇಶದಿಂದ ಕುಣಿಯುತ್ತಾ ಕರ್ಪೂರವನ್ನು ನಾಲಿಗೆ ಮೇಲೆ ಹಾಕಿಕೊಂಡು ನುಂಗುವರು. ಮಾದೇಶ್ವರ ಮೈ ಮೇಲೆ ಬಂದನೆಂದು ಬೇವಿನಸೊಪ್ಪನ್ನು ಮೈಮೇಲೆ ಕಟ್ಟಿಕೊಂಡು ಮೈಮರೆತು ಕುಣಿಯುವರು. ಅವರನ್ನು ಹಿಡಿಯಲೆ ನಾಲ್ಕಾರುಜನರು ಬೇಕು. ದೇವನ ನೆನೆಯುತ್ತಾರೆ. ಬಲಮುರಿ ಗಣಪತಿ ಪೂಜುವವರು ಕೆಲವರು, ಸಾಲೂರು ಮಠದಲ್ಲಿ ಮೂಲ ಗುರುಗಳ ಗದ್ದುಗೆಗೆ ಪೂಜೆ ಮಾಡಿ ನಮಿಸಿ ಗುರುಕಾಣಿಕೆ ಒಪ್ಪಿಸಿ ಸಾಲೂರು ಸ್ವಾಮಿಗಳ ಆಶೀರ್ವಾದ ಪಡೆಯುವವರು ಹಲವರು. ಮಕ್ಕಳು ಗೊಂಬೆಯಾಟದ ಗಿರಗಿಟಲೆ, ಪೀಪಿ ಮುಂತಾದುವುಗಳನ್ನು ಕೊಂಡುಕೊಂಡರೆ, ದೊಡ್ಡವರು ಪಾತ್ರೆ ಪಗಡಿ, ವಿಭೂತಿ, ಬಿದರ ಬುಟ್ಟಿ ಮುಂತಾದುವುಗಳನ್ನು ಮಾರಿದರೆ, ಯುವಕರು ಸಿನೆಮಾ, ಜೂಜು ಮುಂತಾದುವುಗಳಲ್ಲಿ ನಿರತರಾದರೆ, ಹುಡುಗರು ಹಣ್ಣು ಹಂಪಲು, ಎಳನೀರು, ಕಲ್ಲಂಗಡಿ, ಸೌತೆಕಾಯಿ ಮುಂತಾದ ನೀರಡಿಕೆ ವಸ್ತುಗಳನ್ನು ಸೇವಿಸುತ್ತಾ, ತೇರಿನ ಮಾಳದಲ್ಲೆಲ್ಲಾ ಸುತ್ತಾಡಿ ದೇವರಿಗೆ ಕೈಮುಗಿದು, ತಮ್ಮ ಭಕ್ತಿಯನ್ನು ಸಲ್ಲಿಸುತ್ತಾ, ತೇರು ಹರಿವವರೆಗೆ ಓಡಾಡುವರು, ತೇರು ಹರಿಯುತ್ತಿದ್ದಂತೆ ನೈವೇದ್ಯ ಮಾಡಿಸಿ ಎಲ್ಲರೂ ಊಟಕ್ಕೆ ಅಣಿಯಾಗುವರು. ಅದಾದ ಮೇಲೆ ಪಲ್ಲಕ್ಕಿಯ ಉತ್ಸವ, ಕೊಂಡ, ತೆಪ್ಪೋತ್ಸವಗಳನ್ನು ಮಾಡಿ ಭಕ್ತಾದಿಗಳು ಮಾದೇಶ್ವರನನ್ನು ನೆನೆಯುತ್ತಾರೆ. ಝುಗಝುಗಿಸುವ ವಿದ್ಯುತ್‌ದೀಪದ ಅಲಂಕಾರಗಳಲ್ಲಿ ರಾತ್ರಿ ಹೊತ್ತಿನ ಉತ್ಸವಗಳು ಕಣ್ಮನಗಳಿಗೆ ಆನಂದವೀಯುವುವು!

ಮಾದೇಶ್ವರನ ಜಾತ್ರೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳು ನಡೆಯುತ್ತವೆ. ರಾತ್ರೋರಾತ್ರಿ ಮಾದೇಶ್ವರನ ಕಥೆಯನ್ನು ಕಂಸಾಳೆಯ ಗುಡ್ಡರು ಕಂಸಾಳೆ ನುಡಿಸಿಕೊಂಡು ಹಾಡುತ್ತಾರೆ.ಜನರು ಕುಳಿತು ಭಕ್ತಿಯಿಂದ ಕೇಳುತ್ತಾರೆ. ಮತ್ತೆ ಕೆಲವರು ಬೀಸುಕಂಸಾಳೆ ಆಡಿ ಜನರ ರಂಜಿಸುತ್ತಾರೆ. ತೇರಿನ ಸುತ್ತಾ ಈ ಕಾರ್ಯಕ್ರಮ ಸತತವಾಗಿ ನಡೆಯುತ್ತಲೇ ಇರುತ್ತದೆ. ಮತ್ತೆ ಕೆಲವರು ಕಂಸಾಳೆ ಮಾಡಿಸಿಕೊಂಡು ಮಾದೇಶ್ವರನ ನೆನೆವಾರ್ತೆ ಮಾಡುತ್ತಾ

ಹರ ಹರ ಲಿಂಗ ಗುರುಲಿಂಗ
ಗುರು ಶಾಂತ ಲಿಂಗ ನಂಜುಂಡಲಿಂಗ
ನಡುಮಲೆಯ ಲಿಂಗ ನಡುಲಿಂಗ
ನುಡಿ ಲಿಂಗ ಸಾಕ್ಷಾತ್ ಲಿಂಗ
ಭಾರಿ ಕಂತೆ ಲಿಂಗ ಭಸ್ಮಾದಿಲಿಂಗ
ನಿಮ್ಮವರುಂಟಾಗಿ ವಾರ ವಾರ
ತುಂಬಿದ ಸೋಮವಾರದ ದಿವಸ
ಬಡವರ ಮನೆ ಒಳಗೆ ನೀಡಿ ನೀಡಿ

ಮಾಡಿದಂಥ ಹಾಲು ಅನ್ನ ಪಾಲು ಪಂಚಾಮೃತ
ಮೇಲಾದಂತ ವಡೆ ಒಬ್ಬಟ್ಟು ಕಜ್ಜಾಯ ತುಪ್ಪಗಳು
ನೀಡಿ ಮಾಡಿದಂಥ ಭಕ್ತಿ
ಅವರ ಮನ ಸ್ವಾಮಿ ಕುಲಸ್ವಾಮಿ
ಭಾಗ್ಯ ಸ್ವಾಮಿ ಪ್ರೀತಿಯಾಗಿ
ಆನೆಮಲೆಗರಿವಾಗಿ ಜೇನುಮಲೆಗರಿವಾಗಿ
ವಜ್ರ ಮಲೆ, ಗುಂಜ ಮಲೆ
ಗುಲಗಂಜಿಮಲೆ ಎಪ್ಪತ್ತೇಳು ಮಲೆ ಕೈಲಾಸಕರಿವಾಗಿ !!

ಪರವು ಮಾಡುವ ಜಾಗದಲ್ಲಿ ವೀಳ್ಯ, ಕಾಣಿಕೆ ಕಪ್ಪ ಎಡೆ ಸ್ವೀಕರಿಸಿದ ಮೇಲೆ ಮಿಕ್ಕವರು ಪ್ರಸಾದ ಸ್ವೀಕರಿಸುವರು. ತಮಿಳು ನಾಡಿನ ಭಕ್ತರು ಉಡುಕು ವಾದ್ಯವನ್ನು ಬಾರಿಸುತ್ತಾ ಮಾದೇಶ್ವರನ ಸ್ತೋತ್ರ ಮಾಡುತ್ತಿರುತ್ತಾರೆ.

ಮಾದೇಶ್ವರನಿಗೆ ಕೆಲವರು ಕೋಳಿ ಕುರಿಗಳನ್ನು ಬಿಡುವರು. ಜಾತ್ರೆಯ ಸಮಯದಲ್ಲಿ ಮಾದೇಶ್ವರ ಕ್ಷೇತ್ರದ ಹಲವಾರು ಪ್ರದೇಶಗಳ ದರ್ಶನ ಮಾಡುವರು ಅವುಗಳೆಂದರೆ ನಾಗಮಲೆ, ತಪಸರೆ, ಕಂಬದ ಬೋಳಿ, ರಂಗಸ್ವಾಮಿ ಒಡ್ಡು, ಆನೆತಲೆದಿಂಬು, ಸರ್ಪನ ಹಾದಿ, ಬಸವನ ಹಾದಿ, ಅಂತರ ಗಂಗೆ, ಶೇಷಣ್ಣೊಡೆಯರ ಗದ್ದುಗೆ, ಸಾಲೂರು ಮಠ, ಹಾಲುಹಳ್ಳ, ಉಡಿದಾರದಳ್ಳ, ಆಲಂಬಾಡಿ ಮುಂತಾದುವು.

ಇದುವರೆಗೆ ಅದೆಷ್ಟು ಕಣ್ಣುಗಳು ಮಾದೇಶ್ವರರ ಜಾತ್ರೆಯನ್ನು ಕಂಡು ಆನಂದಿಸಿವೆಯೋ? ಒಂದೊಂದು ಕಾಲಕ್ಕೂ ಒಂದೊಂದು ಬದಲಾವಣೆ. ಈ ಜಾತ್ರೆಯನ್ನು ಸಾಹಿತ್ಯದಲ್ಲಿ ಚಿತ್ರಿಸಿದ ಕವಿಗಳೆಷ್ಟೋ!

ಮಾದೇಶ್ವರನ ಜಾತ್ರೆ ಒಂದು ದೇವತೆಗೆ ಸೀಮಿತವಾದರೂ, ಒಂದು ಊರಿಗೆ, ಒಂದು ಕ್ಷೇತ್ರಕ್ಕೆ ಸೀಮಿತವಾದುದಲ್ಲ, ಒಂದು ಜನಾಂಗಕ್ಕೆ ಸೀಮಿತವಾದುದಲ್ಲ, ಎಲ್ಲರಿಗೂ ಸ್ವಾಗತಿಸುವ ಆದರಿಸುವ, ಮುದನೀಡುವ, ಭಕ್ತಿ ಚಿಲುಮೆ ಉಕ್ಕಿಸುವ ಕಲಾವಿದರಿಗೆ ಆದರಿಸಿ ಪುರಸ್ಕರಿಸುವ ಒಂದು ವಿಶಿಷ್ಟ ವೈವಿಧ್ಯಮಯ ಪೂರ್ಣ ಜಾತ್ರೆ, ಒಮ್ಮೆ ಮಾದೇಶ್ವರನ ಒಂದು ಜಾತ್ರೆಗೆ ಹೋದರೆ ಆತನ ಎಲ್ಲಾ ಜಾತ್ರೆಗೆ ಹೋಗುವ ಮನಸ್ಸುಂಟಾಗುತ್ತದೆ. ಎಲ್ಲರನ್ನು ಆಕರ್ಷಿಸುವ ಶಕ್ತಿ ಇದೆ ಈ ಜಾತ್ರೆಗೆ. ಈ ಜಾತ್ರೆ ಜನರನ್ನು ಮರಳು ಮಾಡುತ್ತದೆ. ಮಾದೇಶ್ವರನ ಜಾತ್ರೆ ಒಂದೊಂದು ಊರಲ್ಲಿ ಒಂದೊಂದು ರೀತಿ. ಮಾದೇಶ್ವರ ಕ್ಷೇತ್ರದಲ್ಲಿ ನಡೆಯುವ ಒಂದೊಂದು ಸಾರಿಯ ಜಾತ್ರೆಯೂ ಒಂದೊಂದು ರೀತಿ. ಇದನ್ನು ಕಣ್ಣಾರೆ ನೋಡಿದಾಗಲೇ ಅದರ ಅಂದ ಚಂದ ಮನಕಾನಂದ. ಹದಿನೈದನೆಯ ಶತಮಾನದಿಂದ ಈ ಮಾದೇಶ್ವರನ ಜಾತ್ರೆ ನಡೆದುಕೊಂಡೇ ಬಂದಿದೆ.

## ಜನಪದ ಸಾಹಿತ್ಯದಲ್ಲಿ ಜಾತ್ರೆ

**ತೇರು**

ಹೂವ ನೋಡೆ ತಂಗಿ ಕಾಯ ನೋಡೆ
ಕಡಲೀಯ ಗೊಂಬೆ ತೇರಿನ ಮ್ಯಾಲೆ ಗಜನಿಂಬೆ
ತಂಗಿ ಹೂವ ನೋಡೇ ||ಸೊಲ್ಲು||
ತೇರು ನಾಳೆಂದು ಸಾರಿದರು ಗೊಲ್ಲಾರು
ತೇರಿಗೆ ಬಣ್ಣ ಬರಲೆಂದು ಮಾದಯ್ಯ
ಸಣ್ಣದನಿಯಲ್ಲಿ ಸಾರಿದರು ||
ಆರು ಗಳುಗೆ ಆಯ್ತು ಏರಯ್ಯ ತೇರಿಗೆ
ಮಾರೇಯ ಗಂಧ ಬೆವರಿತು ಮಾದಯ್ಯ
ಏರಿ ಮಡಗಯ್ಯ ಕಳಸಾವ |ಮಾದಯ್ಯ|
ಧೀರ ಪಾಲಕ್ಕ ಎಡಕೆ
ಹತ್ತು ಗಳುಗೆ ಆಯ್ತು ಹತ್ತಯ್ಯ ತೇರಿಗೆ
ಕತ್ತಲ್ಲಿ ಗಂಧ ಬೆವರೀತು |ಮಾದಯ್ಯ|
ಇಟ್ಟಾಡ್ತಾವೆ ಹಣ್ಣು ಜವನ |ಮಾದಯ್ಯ|
ದೃಷ್ಟಿ ಪಾಲಕ್ಕ ಎಡಬಲಕೆ ||
ತೇರು ಹೊಸ ತೇರು ಯಾರು ಗೇದೋರು
ಮೈಸೂರಿಂದಾಚೆ ಮಲಸೀಮೆ |
ಹುಡುಗಾರು ಗೇದು ಮಡುಗವರೆ ಗಿರಿಯಲಿ |
ತೇರು ಹೊಸ ತೇರು ಹುರಿಯೆಲ್ಲ ಚಿರರ್ಮ್ರಿ
ಯಾರು ಎಳದಾರು ಬರದಲ್ಲ |
ನಿಮ ತೇರು ಸಾಲೂರು ಮಠದ ಸರಣಾರು | ಬಂದಾರೆ
ಗಲುಗಲನೆ ತೇರು ಹರಿದಾವು |
ಎಲ್ಲಾರ ತೇರು ಮೆಲ್ಲಾನೆ ಹರಿದಾರೆ
ವಲ್ಲಣಗಾರ ಮಾದಪ್ಪ |ನಿಮತೇರು
ಧರೆಯ ದಲ್ಲಣಿಸಿ ಹರಿದಾವೆ ||
ತೇರು ಬರುವಾಗ ತಂಬುಡ್ಲೇರಿ ನಾರೀರು
ನೂರೊಂದು ಆರತಿ ಬೆಳಗೀರು
ನೂರೊಂದಾರತಿಯ ಬೆಳುಗೋಗ ಮಾದೇವ್ನ

ತೇರು ತಲ್ಲಣಿಸಿ ಹರಿದಾವು |
ಉದ್ದಾದ ನಿಮ್ತೇರು ಎಳೆಯ್ಯಾಗ ನಿಮ್ತೇರು
ಉದಂಕಕಾರ ಏಳುಮಲೆಯ |ಮಾದೇವ
ಮದ್ದನ್ನೇ ಮೊದಲೆ ಹರಿದಾವು |
ಅಗಲ ಆದಿಯ ತೇರು ಮುಗಿಲು ಮುಟ್ಟುವ ತೇರು
ಬಗೆಯ ಬಣ್ಣದ ಗೊಂಬೆ ತೇರು |
ಹರಿವಾಗ ಹಗಲಾಡೊ ಏಳು ಮಲೆಯಲ್ಲಿ |
ತಳಗುಳ ಗೂಟ್ಟೀತು ನಡುಬಾಣ ಮಿಂಚೀತು
ದಡವುಳ್ಳ ಮಾದೇವ್ನ ಜಾತ್ರೇಲಿ |
ತೇರಿನ ಮ್ಯಾಲೆ ಜಾಲೀಸಿ ಹುಯ್ಯೊ ಮಳೆರಾಯ |
ಗುಡುಗುಡು ಗುಡುಗೀತು ನಡುಬಾಣ ಮಿಂಚೀತು
ನಡು ಮಲೆಯಲ್ಲಿ ಮಳೆಯಾಯ್ತು |
ಮಾದೇವ್ನ ತೇರೀಗೆ ಮುತ್ತೀನ ಹನಿಬಿದ್ದೊ
ಕಂಚು ಮಿಂಚೀತು ಕಾಳೆ ಸಿರಿಗುಡುಗೀತು
ದುಂಡುಳ್ಳ ಮಾದೇವ್ನ ಜಾತ್ರೆಲಿ | ತೇರಿನ ಮ್ಯಾಲೆ
ಜಾಲೀಸಿ ಹುಯ್ಯೊ ಮಳೆರಾಯ |
ತೇರ ಎಳೀವಾಗ ದೂರದ ಮುಗುಲಿಂದ
ತ್ವಾರ ಮುತ್ತೀನ ಮಳೆಬಿದ್ದೊ | ಮಾದೇವ
ತೋರುಣ್ಣ ಸುಂಗಾಕ್ಕಿ ಸುಮನಾಡೊ|
ಮೂಕುರುಚಿ ಮರದಡೀಲಿ ಮಾರುತ ಮಾಡೊ ಶಿವನೀಗೆ
ಕಗ್ಗಡಲಿ ಬರುವ ಕುರುಜೀಗೆ
ಕಗ್ಗಡಲಿ ಬರುವ ಕುರುಜೀನ ಬೆಡಗೀಗೆ
ಬಂದುಸ ಶರಣಾರು ಒಲಿದಾರು |
ಬಂದು ಶರಣಾರು ಒಲಿದಾರು ಶಿವಲಿಂಗ
ಹಾರಾಡುತಾವೆ ಹಣ್ಣು ಜವುನೆ |
ಹಾರಾಡುತಾವೆ ಜವುನ ಬಾಳೆಹಣ್ಣು
ಸದ್ದುಳ್ಳ ಶಿವಲಿಂಗನ ಎಡಬಲುಕೆ

ಅಪ್ಪ ಮಾದಯ್ಯನ ತೇರಿನ ಮ್ಯಾಲೆ
ಎಪ್ಪತ್ತೇಳು ಕೋಟಿ ನವುಲಿಂಡು |
ಕೂತಿಗೊಂಡು
ತುಪ್ಪಾದ ಗುಟುಕೆ ಕೊಡುತಾವೆ



ಅಪ್ಪ ಮಾದಯ್ನ ತೆಪ್ಪ ತೇರಿನ ಮ್ಯಾಲೆ
ಎಪ್ಪತ್ತು ಏಳೆಡೆ ಸರುಪಣ್ಣ
ಎಪ್ಪತ್ತು ಏಳೆಡೆ ಸರುಪಣ್ಣ ಸೆಡೆ ಮ್ಯಾಲೆ
ಅಪ್ಪ ಮಾದಯ್ನ ಒರುಗವನೆ |
ಅಣ್ಣ ಮಾದಯ್ನ ಸಣ್ಣ ತೇರಿನ ಮ್ಯಾಲೆ
ಹನ್ನೆರಡು ತಲೆಯ ಸರುಪಣ್ಣ
ಹನ್ನೆರಡು ತಲೆಯ ಸರುಪಣ್ಣಾನ ಸೆಡೆ ಮ್ಯಾಲೆ
ಅಣ್ಣ ಮಾದಯ್ನ ಲೊರುಗವನೆ |
ಹಳ್ಳ ಕೊಳ್ಳದ ನೀರು ಬೆಳ್ಳೀಯ ಕೈ ಚೊಂಬು
ಅಲ್ಲಿ ಮಾದಯ್ನ ಶಿವುಪೂಜೆ |
ಆಗುವಾಗ ಬೆಳ್ಳೀಯ ಗಂಟೆ ಧಣಿರೆಂದೊ| ಮಾದೇವ
ಮರಳಿ ನತ್ತೀಗೆ ಉಘೆಯೆಂದೊ| ಮಾದೇವ
ನಿನ್ನ ಹಾಲೆಣ್ಣೆ ಹೊತ್ತೀಗೆ ಗೊಳ್ಳೆಂದೊ| ಮಾದೇವ |
ನಿನ್ನ ತೇರಿನ್ಹೊತ್ತೀಗೆ ಉಘೆಯೆಂದೊ| ಮಾದೇವ
ಬಿದ್ದು ಬಿಡೇರು ಬರುತಾರೆ ಮಾದೇವ
ಉದ್ದಾ ಉದ್ದಾಕು ಕಾಪುಲಡೋ |
ಮುತ್ತೀನ ತೇರಲ್ಲಿ ಮತ್ಯಾರು ಶರಣಾರು
ಅತ್ತ ಇತ್ತೆಲ್ಲ ಮೆರಿವಾರು | ಮಾದೇವ
ನೀನೊಪ್ಪೀದ ಕಾರಯ್ನ ಬಿಲ್ಲಯ್ನ

ಮಾದಯ್ನ ಗಿರಿಗೆ ಬಿಳಿಯ ಚಿನ್ನದಗಾರೆ |
ಸುತ್ತ ಹಬ್ಬೀತು ರಸ ಬೆಳ್ಳಿ |
ಮಾದಯ್ನ ತಾಣಕಬ್ಬೀತು ಸಿರಿಗಂಧ |
ಮಾದೇವ್ನ ಗಿರಿಯಲ್ಲಿ ಕಮ್ಮು ತಮ್ಟವ್ಯಾರ
ಕಮ್ಮು ತಮ್ಟೆಲ್ಲ ಕೌಸಾಳೆ
ಕಮ್ಮು ತಮ್ಟೆಲ್ಲ ಕೌಸಾಳ್ ಸೂಳ್ಯಾರ್ ಮ್ಯಾಳ್
ಆಗ ಮಾದಯ್ನ ಗಿರಿಯಲ್ಲಿ ಹಗುಲಾದೊ |
ಸಂತೆ ಕಾಣಲು ಸಂತೋಷವೇನಯ್ನ
ಶಂಖ ಜಾಗಟೆ ವಿಪರೀತ | ಸೂಳೇಕೇಳ
ಸಂತೋಷ ಮಾದಯ್ನ, ಗಿರಿಯಲ್ಲಿ |
ಓಣೇಲೀ ಉತ್ರಾಣಿ ನೋಡೋಳ ಕಣ್ಣಾಲಿ
ಹನ್ನೆರಡು ಹುಲ್ಲೀನ ಬಿದರೇಣಿ |ಮಾದಪ್ನ

ತೇರಿಗೆ ಬಿಗಿಯೋದು ನೂ ಲೇಣಿ |
ಜಾಣ ಹೊಯ್ತಾನಂತ ಜಾತ್ರಿಗೆ ನಾ ಬಂದ
ಜಾಣ ಬರ್ನಿಲ್ಲ ಜಾತ್ರೀಗೆ |ಮಾದಪ್ಪ
ನಿನ್ತೇರ ನೋಡಾಕೆ ಮನುಸಿಲ್ಲ |

*****

## ಮಾದೇಶ್ವರ ಸಾಂಗತ್ಯ

**ಜಾತ್ರೆ ಸಂಧಿ**

ಮಾಘ ಬಹುಳ ಚತುರ್ದಶಿಯ ದಿವಸದಲಿ |
ನಾಗಧರನ ಮಲೆಗಾಗಿ ||
ಸಾಗಿ ಬರುವ ಪರಿಷೆಯ ಶೃಂಗಾರವ ನೀಗಿ ಪೇಳುವ ಮುದದಿಂದ ||೧||

ಕೊಂಬು ತಮಟೆ ಸಮ್ಮೇಳ ಕಂಸಾಳೆಯು |
ಇಂಬಾಗಿ ನುಡಿವ ಢಮರೀಲು ||
ಕುಂಭಣಿ ದೊರೆಗಳು ಪೊಡೆವ ಭೇರಿಯದನಿ ||
ಸಂಭ್ರಮದಿಂದ ನಡೆದಾರು||೨||

ಗುರುವ ಗಂಭೀರರು ಸಿರಿವಂತರು ಗುರು |
ಹಿರಿಮರ ಕಂಡು ನಮಿಸುವ||
ಪರಮ ಭಕ್ತರು 'ಹರಿಹರ' ಎಂದು ಸ್ತುತಿಸುತ
ಹರುಷದಿ ಬಂದರರ್ಥಿಯಲಿ ||೩||

ಕಾಣಿಕೆಯನು ಕಟ್ಟಿಕೊಂಡು ಮಾದೇಶನ
ಮಾಣದೆ ನೆನೆವ ಜನರಿಗೆ
ಕಾಣಿಸುತಿಹ ನಡುಮಲೆಗೆ ಉನ್ನತವಾಗಿ |
ಜಾಣರು ಬರುವ ದಾರಿಯೊಳು ||೪||

ಬೆಲ್ಲ ಬೇಳೆ ಹಣ್ಣು ಕಾಯಿ ಕಡಲೆ ಕಬ್ಬು |
ಒಳ್ಳೆಯ ಎಳನೀರು ಕಾಯಿ|
ಎಲ್ಲ ಅಕ್ಕಿಯು ಬೇಳೆ ಹೇರುಗಳನು ಹೊತ್ತು
ನಿಲ್ಲದೆ ಬರುವ ಎತ್ತುಗಳು ||೫||

ಕಾರಿಯು ಬೆಳ್ಳಿ ಕೊಂದನು ಬಟ್ಟೆ ಬೆಂಚನಾ |
ಕಾರವುಳ್ಳವು ಮೊದಲಾಗಿ
ದಾರಿಯೊಳಗೆ ಹೇರನು ಹೊತ್ತು
ಬರುವ ಶೃಂಗಾರವನೇನ ಹೇಳುವೆನು ||೬||

ಕೂಡು ಗೊಂಬುಗಳು ಸೇರುತಿಗೊಂಬು ಮೊದಲಾದ |
ಗೂಡುಗೊಳಿಯ ಮಂಡೆಗೊಂಬು ||

ನೀಡಿದ ಸಾಗರಗೊಂಬು ಎತ್ತುಗಳಲ್ಲಿ
ರೂಢಿಗೀಶನ ಮಲೆಗಾಗಿ ||೭||

ಹೇರಿನ ಎತ್ತು ಕೆಲವು ಲೆಕ್ಕವಿಲ್ಲದ
ಹೇರುಗಳನು ಹೊತ್ತು ತರಲು ||
ಆರಾರು ಬಣ್ಣಿಸಲವೇ ಬಸವನಾ |
ಗಾರವ ಬಲಂತೆ ಪೇಳ್ವೆ ||೮||

ಕೊಂಬನಣಸು ಸರಪಣಿ ಗೆಜ್ಜೆ ಗಂಟೆ ಮುಖ |
ಕಂಬವು ಕಾಲಗಗ್ಗರವು ||
ನಂಬಿದವರ ಸಲಹುವ ಬಸವನು ಬಹ |
ಸಂಭ್ರಮವೇನ ಹೇಳುವೆನು || ೯||

ನಿಲ್ಲದೆ ನಾಲ್ಕು ದಿಕ್ಕಿನಲ್ಲಿ ಸಂದಣಿಸಿಮೆ
ಮೆಲ್ಲನೆ ನಡೆದ ರೊಗ್ಗಿನಲಿ ||
ಎಲ್ಲಿದೇವರುಗಳ ವಲಭನಿಹ ಮಲೆ |
ಗಲ್ಲಿ ಬಂದರು ಹರುಷದಲಿ ||೧೦||

ಶೃಂಗಾರವಾಗಿ ನಡೆವ ಸತಿಮರುಗಳ
ಅಂಗವನಿನ್ನ ಹೇಳುವೆನು |
ಹಿಂಗದೆ ತಮ್ಮ ಪುರುಷರು ಮಕ್ಕಳು ಸಹ
ಹೆಂಗಳು ನಡೆವ ರೊಗ್ಗನಲಿ ||೧೧||

ಪಟ್ಟೆ ಬರಹ ಬಣ್ಣ ಸೀರೆ ಬಳಿದನುಟ್ಟು
ತೊಟ್ಟರು ಮಿಸುಸಿದೊಡಿಗೆಯ
ಕಟ್ಟಿದ ತೋರದುರುಬು ಕಣ್ಣೆಗಂಜನ
ಯಿಟ್ಟು ತಿಲಕ ಫಣೆಯೊಳಗೆ ||೧೨||

ಹಳದಿ ಹಸುರು ತಿಳಿಗಾವಿ ಬಿಳಿದನುಟ್ಟು
ಬೆಳತಿಗೆಗಣ್ಣ ನೀರೆಯರು
ಕಳೆ ನಗೆ ಮೊಗ ಸೋಗೆ ಮುಡಿ ಪೆರೆನೊಸಲಿನ |
ಕಳ ಹಂಸಗಮನೆ ನಡೆದರು ||೧೩||

ಬಟ್ಟೆ ಮುಖದ ಭಾವತಿಯರ ಕುಚಗಳ್ಗೆ
ದೃಷ್ಟಿತಾಗೀತೆಂದು ಬೇಗ |



ತೊಟ್ಟ ರವಿಕೆ ಉಟ್ಟ ದೇವಾಂಗವು ಅಡಿ
ಯಿಟ್ಟರು ಮದಗಜದಂತೆ ||೧೪|

ಎರಳೆಗಣ್ಣಿನ ತೆಳುಗಲ್ಲ ಅಳಿಗುರುಳಿನ |
ಕೊರಳ ಮುತ್ತಿನ ಸರದಿಂದ
ತರಳೆಯ ಕುಚ ಭಾರಕೆ ನಡುಬಳುಕುತ |
ತೆರಳೀತು ಎಳೆ ಪೆಣ್ಗಳಾಗ ||೧೫||

ಕಾರಮಿಂಚುಗಳಂತೆ ಕಣ್ಣ ಬೆಳಗುವ ಮರ |
ವಾರಣ ದಂತಡಿಯಿಡುವ||
ನೀರೆ ಪೇರ್ಮುಡಿಯ ಮೇಲ್ಮುಸುಕಿಟ್ಟುಕೊಂಡು
ತಾ ನಾರಿಯ ರೆಯ್ದುರೊಗ್ಗಿನಲಿ ||೧೬||

ತಳಿರಡಿ ನುಣ್ದೊಡೆ ಸೆಳೆ ನಡು ನಳಿತೋಳು
ಕಳಸ ಕುಚದ ಬಾಲೆಯರು |
ಬಳಿಲು ಮುಡಿಯ ಬಟ್ಟಮುಖ ತೆಳುಗಲ್ಲದ
ನಳಿನಾಕ್ಷಿಯರು ನಡೆದರು ||೧೭||

ತನ್ನ ಪುರುಷನಲ್ಲದೆ ಅನ್ಯಪುರುಷರ |
ತನ್ನ ಸೋದರರೆಂದು ಬಗೆವ ||
ಮನ್ನಣೆಯಲಿ ಪತಿಭಕ್ತಿಯೊಳಿರುವ ಸಂ|
ಪನ್ನೆಯರೆಯ್ದುರೊಗಿನಲಿ ||೧೮||

ಹಾರವ ತೆಗೆದು ಕುಚಕೆ ಸಿಂಗಾರ ಮಾಡಿ
ಹಾರಾವರನ್ಯ ಪುರುಷರ |
ನಾರಿ ತನ್ನಯ ಗಂಡನ ಮನಸಿಗೆ ಬಹ |
ಜಾರೆವೆಣ್ಣುಗಳು ನಡೆದರು ||೧೯||

ಬಾಲೆ ಯವ್ವನೆಯರು ಲೋಲಾಕ್ಷಿ ಮದುವೆ
ಶೂಲಧರನ ಮಲೆಗಾಗಿ
ಲೀಲೆಯಿಂದಲಿ ಮಕ್ಕಳನೆತ್ತಿಕೊಳ್ಳುತ
ಕಾಲಹರನ ಭಜಿಸುತಲಿ ||೨೦||

ಸುತರ ಬೇಡುವ ಸತಿಯರು ಒಂದು ಲಕ್ಷವು |
ಗತಿಯ ಬಯಸುವವರು ಕೆಲಬರು ||

ಪತಿವ್ರತೆಯರು ಮುತ್ತೈದೆತನವ ಬೇಡಿ
ಅತಿಶಯದಿಂದ ನಡೆದರು ||೨೧||

ಅಲ್ಲಲ್ಲಿ ಅನ್ನದಾನವು ಅರವಟ್ಟಿಗೆ
ಬೆಲ್ಲದ ಪಾನಕದಿಂದ
ನಿಲ್ಲದೆ ದಾರಿಯೊಳಗೆ ಉಪಚರಿಸುತ
ಮೆಲ್ಲನೆ ನಡೆದರರ್ಥಿಯಲಿ ||೨೨||

ಇಂತು ಬರುವ ಪರಿಷೆಯ ಶೃಂಗಾರವ
ನೆಂತು ಪೇಳುವರಳನಲ್ಲ
ಕಂತು ಹರನ ರೂಪಿನಿಂದ ಚರಿಸುವರು
ಮುಂತು, ಸುರುವೆ ಮುದದಿಂದ ||೨೩||

ಕ್ಷತ್ರಿಯ ಬ್ರಾಹ್ಮಣ, ವೈಶ್ಯ ಶೂದ್ರರುಗಳು
ಮತ್ತಾಶ್ರಮದಲಿ ಜನಿಸಿ
ವಿಸ್ತರಿಸಿಯೆ ಪೂರ್ವತಳಿದು ಶ್ರೀಗುರುಲಿಂಗ
ಉತ್ತಮಹಾತ್ಮರ ಪೊಗಳಿ ||೨೪||

ಇರದೆ ಜನರ ಭಕ್ತರ ಮಾಡಿ ಮುಕ್ತರ |
ಕರುಣಿಸಿ ಕೃಪೆಯಿಂದ ಕೊಡುವ
ಸ್ಮರನ ವೈರಿಯ ರೂಪ ತಾಳ್ದು ಮರ್ತ್ಯದೊಳಗೆ
ಯಿರುವ ಮಹಿಮೆಯ ಪೊಗಳುವೆನು ||೨೫||

ಅಷ್ಟಮದಂಗಳ ಮೆಟ್ಟಿ ಕರಣೇಂದ್ರಿಯ
ಸುಟುರುಹಿದ ಯೋಗಿಗಳ
ಸೃಷ್ಟಿಗಿಳಿದು ಬಂದು ದೃಷ್ಟನ ತೋರಿದ
ದೃಷ್ಟಿ ಮೂರುಳ್ಳ ಕಂಡ ||೨೬||

ಸಪ್ಪೆಯಲಿಂಗ ಉಪ್ಪಿನಹಳ್ಳಿಯ ಸ್ವಾಮಿ
ಕಪ್ಪುಗೊರಳ ತೋಂಟದಯ್ಯ
ಮುಪ್ಪುರ ವೈರಿ ಕೊಟ್ಟೂರ ಬಸವಲಿಂ
ಗಪ್ಪನು ಬೋಳಬಸವೇಶ ||೨೭||

ಕಟ್ಟಿಗಯ್ಯನು ಭಿಕ್ಷದ ಮಹಾಂತಯ್ಯನು |
ದಿಟ್ಟನು ಪಶುಪತಿ ಸ್ವಾಮಿ



ನೆಟ್ಟನೆ ನಿರ್ವಾಣ ಬಸವಲಿಂಗೇಶನು
ಸೃಷ್ಟಿಯೊಳಗೆ ಪೊಗಳುವೆನು ||೨೮||

ವಸುಧೆಯೊಳಗಚ್ಚರಿಯೆಸೆವ ಮಹಾತ್ಮರು |
ಪೆಸರು ಪಡೆದ ಮಲೆಗಾಗಿ
ಬಿಸಿಗಣ್ಣ ಮಾದೇಶ್ವರನ ನೋಡುವೆನೆಂದು |
ದಶಮುಖದಯ್ಯ ಚಿತ್ತೈಸಿ ||೨೯||

ಶಂಕು ಬರಗು ಚಿನ್ನಗಾಳಿ ನಗಾರಿಯು
ಓಂಕಾರಗಂಟೆ ಜಾಗಟೆಯ |
ಬಿಂಕದಿ ಚರಿಸುವ ಚರಲಿಂಗ ಮೂರ್ತಿಗಳು
ಭೋಂಕನೆ ಚಿತ್ತೈಸಿದರು ||೩೦||

ಕಂತೆ ಖಟ್ವಾಂಗ ಕಮಂಡಲು ಕರದಲ್ಲಿ
ಪಿಂತೆ ಪಿಡಿದ ದುಂಡು ಕೋಲು ನಿ
ಶ್ಚಿತರು ಕಪ್ಪರ ಜೋಳಿಗೆ ಸಹ ಕಾ
ಲಾಂತಕರುಗಳು ಚಿತ್ತೈಸೆ ||೩೧||

ಭಸಿತ ರುದ್ರಾಕ್ಷಿ ಕಂಜೆಡೆ ಸುಲಿಪಲ್ಲಿನ
ಮಿಸುಗಿಯ ಕರ್ಣಪತ್ರಗಳು
ಎಸೆವ ಅತೀತ ಪೂಜೆಯ ಗಣಾಧೀಶರು
ಪಶುಪತಿ ಇಹ ಮತಿಗೆ||೩೨||

ಕಾಸೆ ಕೈಯೊಳಗೆ ಮರದ ಕತ್ತಿ ವಂಕುಡಿ |
ಪಾಳ್ಯವ ಜರೆದ ನಿರಕ್ತರ್
ಆಸೆಯ ಕಳೆದ ಉದಾಸಿ ಮೂರ್ತಿಗಳು ಭವ |
ನಾಶವಪ್ಪವರು ಚಿತ್ತೈಸೆ ||೩೩||

ಜಂಗಮಲಿಂಗವು ಮಂಗಳ ಹೃದಯರು |
ಅಂಗಜ ವೈರಿಯ ರೂಪ |
ಹಿಂಗದ ತಾಳ್ದು ಮರ್ತ್ಯಕೊಳು ಚರಿಸುವ ಬೆ |
ಡಂಗಿನ ಮಹಿಮರೈದಿದರು ||೨೪||

ನಂಜನಗೂಡೆರಗಂಬಳ್ಳಿ ಸುತ್ತೂರು
ಹೊಂಡರಬಾಳು ಕುಂತೂರು

ರಂಜಿಸುತಿಹ ಪಂಚಮಠದ ಮಹಾತ್ಮರು ನೀ |
ರಂಜನ ಯತಿಗಳೈದಿದರು ||೩೫||

ಪೃಥ್ವಿಯೊಳಗೆ ಚರಿಸುವ ಮಹತ್ತಿಗೆ
ಭಕ್ತನಾಗಿರವ ವಿರಕ್ತ
ಮುಕ್ತಿಯ ಪಡೆದು ಒಪ್ಪುವ ಹಂಪಯ್ಯನು ||
ಚಿತ್ತೈಸಿದ ನಡುಮಲೆಗೆ ||೩೬||

ಗವಿ ಗಹ್ವರದೊಳಗಿರುವ ತಪಸ್ವಿಗಳು
ಭವಹರನಡಿಯ ಧ್ಯಾನಿಸುತ
ತವೆ ಭಜಿಸುತ ಮುನಿಪತಿಗಳು ಬಂದರು
ಭುವನಕಧಿಕ ಮಲೆಗಾಗಿ ||೩೭||

ವೀರಶೈವರು ವ್ರತಶೀಲರು ಪರಮಾಚಾರ್ಯರು ಹರನ ಪೂಜಕರು
ಓರಂತೆ ಶಿವಶರಣರು ಬಂದರು ನೆರೆ |
ಮುರಾರಿಯ ಮಲೆಗಾಗಿ ||೩೮||

ಬಂದರು ಸುರ ಗಂಧರ್ವರು ಮಲೆಗಾಗಿ
ಸಂದಣಿಸಿತು ಗಣ ವೃಂದ
ಕುಂದದೆ ಅಲ್ಲಲ್ಲಿ ಲಿಂಗದ ಮಹಿಮೆಯ ಮು
ಕುಂದ ಅಜನು ಪೇಳಲರಿದು ||೩೯||

ಆದೇಶದಿ ನೆಲೆಸಿರುವ ಲಿಂಗವು ಕೂಡಿ
ಮಾದೇಶ್ವರನಿಹ ಮಲೆಗಾಗಿ
ಭೇದವಿಲ್ಲದೆ ಚಿತ್ತೈಸಿದರೆಂಬುದ
ಆದರದಿಂದ ಪೇಳುವೆನು ||೪೦||

ಸಂದಣಿಯನು ತೊಲಗಿಸಿ ಹಾಹಾ ಎಂದು
ಇಂದುಧರನ ಓಲಗದಿ
ನಂದಿ ಮಹಂಕಾಳರು ಎಡಬಲದಲ್ಲಿ
ನಿಂದು ಬಿಲ್ಸೈಸಿದರಾಗ ||೪೧||

ಪೊಡವಿಗಧಿಕವೆನಿಸುವ ಸ್ಥಲವಿದುಯೆಂದು
ಮಡಿವಾಳದೊಳಗೆ ತಾನೆಲಸಿ
ಬಿಡದೆವೊಂದು ಸೋಗುಗಿತ್ತಿಗೆ ಮೂಜ ನ



ದೊಡಿಯ ಬಂದವನೆ ಚಿತ್ತೈಸಿ ||೪೨||

ಹಂಬಲಿಸುವ ಭಕ್ತರಿಗೆ ನಂಬಿಗೆಯಿತ್ತು
ಕಂಬಾಳದೊಳಗೆ ತಾ ನೆಲಸಿ
ಅಂಬು ಐದುಳ್ಳನ ವೈರಿ ಸಿದ್ದೇಶ ತ್ರಿ
ಯಂಬಕದೇವ ಚಿತ್ತೈಸಿ ||೪೪||

ಬಂಟನಾಗಿಯೇ ಬಾಣನ ಬಾಗಿಲ ಕಾಯ್ದು |
ಗಂಟಿ ಕದ್ದನು ಘನಪತಿಯ
ಕುಂಟನಾಗಿಯೇ ಮರೆ ಹೊಕ್ಕ ಶಾಲ್ಮದ ನೀಲ
ಕಂಠೇಶ್ವರನೆ ಚಿತ್ತೈಸಿ ||೪೫||

ಪೂಸರಿವಿಯ ನೆಲಸಿದ ವೈರಿಕಪ್ಪುರ |
ಈಶನು ಸರ್ವೇಶನು |
ಶೇಷ ಭೂಷಣ ಶಿವಲಂಕಾರೇಶನು ಬಂದ |
ಮೀಶ ಮಾದೇಶ ಚಿತ್ತೈಸಿ ||೪೬||

ಕಂಡಿಹೆವೆಂದಡಿ ಮುಡಿಯ ವಾದಿಸಿ ಮುಂ|
ಕೊಂಡು ನುಡಿಯ ಹರಿಬ್ರಹ್ಮ
ಬಂಡೆ ಹಳ್ಳಿಯಲಿ ನೆಲಸಿದಳಮೇಶ ಭೂ
ಮಂಡಲದೊಡೆಯ ಚಿತ್ತೈಸಿ ||೪೭||

ಹಲವು ಪದಾರ್ಥವ ಒಲಿದು ಪಾಶವ ಮಾಡಿ
ತೊಲಗಿಸಿ ಹಿಂಗಡಿಸಿದನು|
ಅಲಗು ಮೂಲೆಯ ಮಲ್ಲಿಕಾರ್ಜುನ ದೇವರು |
ಸುಲಭ ದೇವನೆ ಚಿತ್ತೈಸಿ ||೪೮||

ಬಣ್ಣಿಸಿಪಾಡಿ ಶಿವನ ಮರೆಯನು ಹೊಕ್ಕ |
ಹೆಣ್ಣಿಗೆ ಗಂಡು ರೂಪಿತ್ತ
ಕಣ್ಣು ನೂರೊಳುನಿಂದ ಶಿವನಂಕಾರೇಶ ಮು |
ಕಣ್ಣ ಹರನೆ ಚಿತ್ತೈಸಿ ||೪೯||

ಕುಂಭಿಣಿಪತೆ ಬಲ್ಲಾಳ ಸತಿಮ ಕೂಡೆ |
ರಂಭೆಗೆ ಶಿಶುವಾಗಿರ್ದು
ತ್ರ್ಯಂಬಕದೇವನು ತಮ್ಮ ನಾಚಿಮ ಲಿಂಗ

ಶಂಭು ಬಂದವರೆ ಚಿತ್ತೈಸಿ ||೫೦||

ಹೇಮಾದ್ರಿಯಿಂದಲಿ ಪ್ರೇಮದಿ ಕಂಪಣ
ಸೀಮೆಯ ಭಕ್ತರಿಗೊಲಿದು
ಈ ಮಹಿಮೆಯಾಳು ಗಾಜನೂರೊಳು ನೆಲೆಸಿದ
ಸೋಮೇಶ್ವರನ ಚಿತ್ತೈಸಿ ||೫೧||

ಮನ್ನಣೆಯಿಂದಲಿ ಮುನ್ನ ಕಲ್ಯಾಣದಿ |
ಚೆನ್ನಾಗಿ ನೀಡಿ ಜಂಗಮಕೆ |
ಇನ್ನೂ ಭಕ್ತರ ಸಲಹುವೆನೆಂದು ನೆಲಸಿದ |
ಮಿಣ್ಣದ ಬಸವ ಚಿತ್ತೈಸಿ ||೫೨||

ಆಗಮ ಶಾಸ್ತ್ರ ಕಗೋಚರ ಕಾಶಿಯ |
ಬೇಗದಿ ಕ್ಷೇತ್ರದಿ ಬಂದು.
ಯೋಗದಿ ನೆಲೆಸಿದ ಶಿವನಂಕಾರೇಶ್ವರ
ನಾಗಭೂಷಣನ ಚಿತ್ತೈಸಿ ||೫೩||

ಬಲ್ಲಿದ ಮೂಜಗದೊಡೆಯ ನೆನಿಸಿಕೊಂಡೆ
ಬಿಲ್ಲಿನೊಳಗೆ ಪಾರ್ಥ ಬಡಿಯೆ
ನಲ್ಲೂರೊಳಿಹ ಶಿವನಂಕಾರೇಶ್ವರ ಕಬ್ಬು
ವಿಲ್ಲನ ವೈರಿ ಚಿತ್ತೈಸಿ ||೫೪||

ಹಮ್ಮನಾಡಿದ ಬ್ರಹ್ಮನಿಗೆ ಶಿಕ್ಷೆಯ ಮಾಡಿ
ಗಮ್ಮನೆ ನಿಮ್ಮ ಪೂಜಿಸಲು
ನಿರ್ಮಳ ಪದವಿಯ ನಿತ್ತ ಮಾರಟಹಳ್ಳಿ
ಬ್ರಹ್ಮಲಿಂಗವೆ ಚಿತ್ತೈಸಿ ||೫೫||

ಅಂದು ರಕ್ಷನಿಗೆ ಶಿಕ್ಷೆಯ ಮಾಡೆಂದು |
ಕಂದ ವೀರೇಶಗೆ ಪೇಳಿ
ಬಂದೀಗ ಬರಗೂರ ಬೆಟ್ಟದೊಳಗೆ ನಿಂದ
ಪಂದೇಶ್ವರನೆ ಚಿತ್ತೈಸಿ ||೫೬||

ಕಾಲನ ಶೂಲದೆ ಕಟ್ಟಿ ಬೇಗದಿ ಮತ್ತೆ|
ಲೀಲೆಯಿಂದಲಿ ತಾನು ವೊಲಿದು |
ಪಾಲಮಲೆಯ ಸಿದ್ಧೇಶ್ವರ ದೇವರೆ |



ಶೂಲ ಧರನ ಚಿತ್ತೈಸಿ ||೫೭||

ಪೊನ್ನಾಚಿ ಬೆಟ್ಟದೊಳಗೆ ತಾ ಭಕ್ತರ |
ಮನ್ನಿಸಿ ಕರೆದ್ವರವಿತ್ತು |
ಚನ್ನಾಗಿ ಸಲಹುವ ಪನ್ನಗಾಭರಣನೆ
ಪೊನ್ನ ಮಲ್ಲೇಶ ಚಿತ್ತೈಸಿ ||೫೮||

ಒಂದು ಕುಸುಮ ಕಂದಿತೆಂದು ಕಂಗಳಿತ್ತು |
ಅಂದು ನಿಮ್ಮಡಿಯೊಳಗಿರಿಸೆ |
ಬಂದು ಹರಿಯು ಬೇಗನಿಂದು ಕೈಮುಗಿದನು |
ಇಂದುಧರನೆ ಚಿತ್ತೈಸಿ ||೫೯||

ಅಜನು ಹಂಸೆಯ ವಾಹನ ವೇರಿಕೊಂಡಾಗ
ತ್ರಿಜಗವ ಸೃಜಿಸಬೇಕೆಂದು |
ನಿಜವಾಗಿ ಅಪ್ಪಣೆಯನು ಕೇಳ ಬಂದನು |
ಭುಜಗಾಭರಣನೆ ಚಿತ್ತೈಸಿ ||೬೦||

ಸುರಪತಿ ಗಜವಾಹನವೇರಿಕೊಂಡೀಗ
ಯಿರದೆ ಬಂದನು ನಡು ಮಲೆಗೆ |
ಪುರಹರ ಮಾದೇಶ್ವರನೆ ಸಲಹು ಎಂದು |
ಎರಗಿ ನಿಂದವನೆ ಭಕ್ತಿಯಲಿ ||೬೧||

ನುಗ್ಗು ದೈವ ಗಂಡ ಮಾದೇಶ್ವರಗೆ ಮನ |
ಒಗ್ಗಿ ಮೆರಗಿ ಭೀತಿಯಲಿ |
ಅಗ್ನಿ ತಗರವಾಹನವೇರಿ ಕೊಂಡು ತಾ |
ಶೀಘ್ರದಿ ಬಂದನು ಮಲೆಗೆ ||೬೨||

ಯಮನು ಕೋಣವನೇರಿ ಗಮನಿಸಿ ಅಲ್ಲಿಂದ
ಕ್ರಮದಿಂದ ಪಯಣಗತಿಯಲ್ಲಿ
ದ್ಯುಮಣಿಯ ಸುತ ತನ್ನ ಮಣಿಹದೇಳಿರುವನು
ಯಮನು ಬನ್ನೈಸಿದನಾಗ ||೬೩||

ನಿರುತಿ ನರ ವಾಹನವೇರಿಕೊಂಡು ತಾ |
ಬರುತ ಪ್ರೀತಿಯಲಿ ನೋಡಿದನು
ಪುರಹರ ಮಾದೇಶ್ವರನಿಹ ಮಲೆಗಾಗಿ |

ಹರುಶದಿ ಬಂದನರ್ತಿಯಲಿ ||೧೪||

ವರಣ ದಿಕ್ಕಿನ ಗಡಿಮನು ಕಾದಿರುತಿಹ|
ಬಿಡದೆ ನೆಗಳನೇರಿಕೊಂಡು
ಸಡಗರದಿಂದ ವರುಣ ಸಾಗಿ ಬಂದನು |
ಬಿಡದೆ ಮಾದೇಶನ ಬಳಿಗೆ ||೧೫||

ವಾಯುವ್ಯ ದಿಕ್ಕಿನೊಳಗೆ ಮಿರು ನೀನೆಯ
ದೇವರು ಕಟ್ಟು ಮಾಡಿಹನು
ವಾಯುವು ತನ್ನ ವಾಹನವೇರಿ ಬಂದನು
ಭಾವಜ ವೈರಿಯ ಬಳಿಗೆ ||೧೬||

ಉತ್ತರ ದಿಕ್ಕಿನೊಳಗೆ ಒಪ್ಪಿರ್ದನು
ಕೀರ್ತಿಪಡೆದು ಹರುಷದಲಿ
ಮತ್ತೆ ಕುರುಗವೇರಿಕೊಂಡು ಕುಬೇರನು
ಕರ್ತೃ ಮಾದೇಶನ ಬಳಿಗೆ ||೧೭||

ನಂದಿ ವಾಹನವೇರಿಕೊಂಡು ಈಶಾನ್ಯವು |
ಬಂದನು ತನ್ನ ದಿಕ್ಕಿನಿಂದ|
ನಿಂದು ನೋಡಿದ ನಡುಮಲೆಯೊಳು ನೆಲೆಸಿದ |
ಇಂದುಧರನ ಬಳಿಗಾಗಿ ||೧೮||

ಆವಾದ ಮಟ್ಟದ ಹಿರಿಯ ಮಹತ್ತುಮ |
ತ್ತಾವ ಗವಿಯ ಮತಿಗಳು |
ಆವಾದ ಸ್ಥಳದ ಲಿಂಗವು ಬಂದುವುಯೆಂದು |
ದೇವನು ಕೇಳ್ದ ಮಾದೇಶ ||೧೯||

ಬಂದರು ಹರಿಯಜ ಸುರಮುನಿ ನಿಕರವು |
ನಿಂದರು ದಿಕ್ಕು ಪಾಲಕರು|
ಇಂದು ಮಾದೇಶ್ವರ ನೆಲೆಸಿದ ಮಲೆಯೊಳು |
ಸಂದಣಿಗಿಟ್ಟು ಅಲ್ಲಲಿ ||೨೦||

ಮೂಲೋಕದೊಡೋಯನು ನೆಲೆಸಿದ ಗಿರಿಯೋಳು |
ತಾಲನ ಗೆಲಿದ ಮಹಿಮರ |
ಶೂಲಧರನ ಮಾದೇಶ್ವರ ನೋಲಗ



ಶಾಲೆಯೊಳಿರ್ಪರರ್ತಿಯಲಿ ||೨೧||

ರಂಭ ಊರ್ವಶಿಯು ತಿಲೋತ್ತಮೆ ಮೇನಕಿ |
ಯೆಂಬ ಸತಿಯರು ಸಂಭ್ರಮದಿ
ತುಂಬುರ ನಾರದ ಗರುಡ ಗಂಧರ್ವರು
ಇಂಪಾಗಿ ಪಾಡಲೊಗಿನಲಿ ||೨೨||

ಕಿನ್ನರ ಕಿಂಪುರುಷರು ಸುರಲೋಕದ
ಕನ್ನೆಯರೊಳಗೊಂದು ದೆಸೆಯ
ಪನ್ನಗಧರನ ಓಲಗದೊಳಗಿರ್ಕರು
ಮುನ್ನೂರ ಮುವತ್ತು ಕೋಟಿ ||೨೩||

ಮದ್ದಳೆ ತಾಳಗತಿಗೆ ನಲಿಯುತ ಬೇಗ |
ಮುದ್ದು ಮುಖದ ನಾರಿಯರು |
ದಿದ್ಧಮಿ ಧಿಮಿರೆಂಬ ಮದ್ದಳೆಗತಿಗೆ ಮ
ತ್ತೆದು ನೃತ್ಯವನಾಡಿದರು ||೨೪||

ಇಂತೊಪ್ಪುವ ಓಲದದೊಳಿರ್ದರು |
ಕುಂತುಹರನು ಮಾದೇಶ |
ಸಂತೋಷದಲಿ ಭಕ್ತರ್ಗೆ ಮುಕ್ತಿಯ ಕೊಟ್ಟು
ಚಿಂತಾಯಕ ಕೃಪೆಯಿಂದ ||೨೫||

ಅಲ್ಲಲ್ಲಿ ಲಿಂಗವು ಅಲ್ಲಲ್ಲಿ ಜಂಗಮ |
ಅಲ್ಲಲ್ಲಿ ಮುನಿ ತಪಸಿಗಳು |
ಅಲ್ಲಲ್ಲಿ ಪರುವವು ಅಲ್ಲಲ್ಲಿ ಪರುಷೆಯು |
ಯೆಲ್ಲ ಕಾವಿನೊಳೆಡೆನಿಡದೆ ||೨೬||

ಹರಿವ ಹಳ್ಳವು ಕೆರೆತೋಪಿನ ತಡಿಯಲಿ |
ಹಿರಿಯರು ಶಿವನ ಪೂಜೆಯನು |
ಪರಿಮಳವುಳ್ಳ ಪತ್ರೆಯು ಪುಷ್ಪ ಮೊದಲಾಗಿ
ಹರನ ಅರ್ಚನೆಯ ಮಾಡಿದರು ||೨೭||

ಬಿಂದಿಗೆ ಪಾಸಾಲೆ ಅಡ್ಡಣಿಗಳನು
ತಂದು ಹರಿವಾಣದೊಳಿರಿಸಿ
ಚಂದವಾಗಿಮೆ ತಟ್ಟೆಬಟ್ಟಲು ಎಡೆಮಾಡಿ

ನಿಂದಾ ಕೈಮುಗಿದು ಬೆಟ್ಟಿಗರು ||೭೮||

ಮೌನದಿಂದಲಿ ಜಪಧ್ಯಾನವು ಮಣಿಮಂತ್ರ
ಜ್ಞಾನಯತಿಗಳು ಮಾಡುವರು
ಬಾನುಪ್ರಕಾಶ ಲಿಂಗವು ಕರದಲ್ಲಿ ಸುಯಿ
ದಾನಿ ಹಿರಿಯರೆನೆದಿಹರು ||೭೯||

ಮಾಘ ಬಹುಳ ಚತುರ್ದಶಿ ಚಂದ್ರವಾರ ಶಿವ |
ಯೋಗವಾರಾತ್ರಿ ಜಾಗರದಿ
ಆಗಮ ಸ್ತ್ರೋತ್ರ ಮಂತ್ರವ ನಾಚರಿಸುತ
ಭೋಗಿ ಭೂಷಣನ ಅರ್ಚಿಪರು ||೮೦||

ಅಷ್ಟದಿಧಾರ್ಚನೆ ಷೋಡಶ ಉಪಚಾರ |
ಇಷ್ಟಲಿಂಗಾರ್ಚನೆ ಮಾಡಿ
ಘಟ್ಟಿಗೊಳಿಸಿ ಮನವನು ಸಂಚಲಿಸಿದ
ದಿಟ್ಟ ಮಹಾತ್ಮರಿಲ್ಲಿಹರು ||೮೧||

ಮೂಡಿತು ಪರಿಷೆ ಪರುವನು ಅಲ್ಲಲ್ಲಿಗೆ |
ರೂಢಿಗೊಡೆಯನ ಮಲೆಯೊಳು
ಬೇಡಿದ ಪಂಚಾಮೃತದ ಜಂಗಮಕೆಡೆ |
ಮಾಡಿಸಿದನು ಮಾದೇಶ ||೮೨||

ಹಪ್ಪಳುಪಿನ ಕಾಯ ಕಡಬು ಕಜ್ಜಾಯರಿ
ತುಪ್ಪ ತೈಲವು ಬೇಗದಲಿ
ತಪ್ಪದೆ ನೀಡಿಸಿದನು ಹಿರಿಯರಿಗೆ ಕಂ
ದರ್ಪಹರನು ಮಾದೇಶ ||೮೩ ||

ಕುಂಬಳ ಬದನೆ ಬೆಳೆಯ ಹಾಗಲಹೀರೆ |
ಯೆಂಬ ಕಾಯ್ಗಳ ಪಾಕ ಮಾಡಿ
ಸಂಬಾರದಿಂದಲೆಸೆವ ಪದಾರ್ಥವ |
ಸಂಭ್ರಮದಿಂದ ಮಾಡಿದನು ||೮೪||

ಗುಳ್ಳದ ಹಣ್ಣು ಮಾವಿನಕಾಯು ನಿಂಬೆಯ |
ಅಲ್ಲಿ ಹರಳೆಯ ಹಣ್ಣಗಳು
ಕಲ್ಲಿಡೆ ಮಾಗಳಿ ಕಳಲೆ ಉಪ್ಪಿನಕಾಯಿ



ನಿಲ್ಲದೆ ಎಡೆಯ ಮಾಡಿದರು ||೮೫ ||

ಬೀಸು ಹೊರಿಗೆ ಗಾರಿಕೆ ಎಣ್ಣೆ ಹೊರಿಗೆ
ಲೇಸಾದ ಉದ್ದಿನ ಕಡಬು
ಸಾಸಲುಂಡೆಗೆ ದೋಸೆಯ ಕಜ್ಜಾಯವ
ಈಶ ಜಂಗಮಕೆ ನೀಡಿದರು ||೮೬||

ಪಾಯಸ ತುಪ್ಪವು ಪರಿಕರ ಕೆಲದಲ್ಲಿ |
ತೋಯ ಶಾಲ್ಯಾನ್ನದ ಭಕ್ಷ್ಯ
ಮಾಯಾಕೋಳಾಹಲನೆಂಬ ವಿರಕ್ತಂಗೆ |
ಕಾಯಜ ಹರನು ನೀಡಿಸಿದ ||೮೭||

ಭಕ್ತಮಹೇಶರು ಸತ್ಯ ಸದಾಚಾರಿ
ನಿತ್ಯ ಪ್ರಸಾದ ದೇಹಿಗಳು
ಕರ್ತೃವ ನೆನೆವ ಜನಕ್ಕೆಮಾದೇಶ್ವರ |
ಅರ್ಥಿಯಿಂದಲಿ ನೀಡಿಸಿದ ||೮೮||

ಹಾಲು ಸಕ್ಕರೆ ಜೇನು ಪಾನಕ ಎಳನೀರು
ಬಾಳೆಯಹಣ್ಣು ಬೇಗದಲಿ
ಶೂಲಧರನ ರೂಪ ಕಾಳ್ವ ಜಂಗಮರಿಗೆ
ಕಾಲಹರನು ನೀಡಿಸಿದನು ||೮೯||

ಉತ್ತರ ದಕ್ಷಿಣ. ಪೂರ್ವ ಪಶ್ಚಿಮದೊಳು
ಮತ್ತೆ ಚರಿಸುವ ಜಂಗಮಕೆ
ನಿತ್ಯ ನೀಡಿಸಿದ ಮಾದೇಶ್ವರನಹುದೆಂದು ವಿ |
ರಕ್ತ ಮೂರ್ತಿಗಳು ಕೊಂಡಾಡಿ ||೯೦||

ಅರ್ತಿಯಿಂದಲಿ ಷಡುರುಚಿಯ ಮಹತ್ತಿಗೆ
ಭಕ್ತರ ದೇವ ನೀಡಿಸಿದ
ಮತ್ತೆ ದೇವಾಲಯಕೆ ಮಾದೇಶ್ವರ ಬಂದ |
ಇತ್ತ ತಮ್ಮಡಿ ಬೆಳಗಾಗೆ ||೯೧||

ಬಂದರು ಮಾದೇವರನ ಸೇವಕರಾಗ
ಗಂಧ ಪುಷ್ಪವು ಕೊಡಲಾಗಿ |
ಬಂದಿಗೆ ಅಗ್ಗಣೆ ಅಭಿಷೇಕವನ ಮಾಡಿ

ಚೆಂದದ ಪೂಜೆ ಮಾಡಿದರು ||೯೨||

ಕಾಣಿಕೆಯನು ಕೈಲಿ ಪಿಡಿದು ಕೂಡಿದ ಜನ
ಮಾಣದೆ ಭಮ ಭಕ್ತಿಯಿಂದ ||
ಕ್ಷೋಣಿಯೊಡೆಯ ಮಾದೇಶನೋಲಗಕೆ |
ಜಾಣರು ಸ್ತುತಿ ಸುತ್ತ ಬಹರು ||೯೩||

ಹೊನ್ನು ಹಣವು ಕಾಸು ಬಣ್ಣ ಬಂಗಾರದಿ |
ಕಣ್ಣು ಮಣಿಯು ಮೊದಲಾಗಿ |
ಚನ್ನ ಮಾದೇಶ್ವರನಡಿಗೆ ಕಾಣಿಕೆಯಿಕ್ಕೆ |
ಕನ್ನೆ ಸುತರ ಬೇಡಿಕೊಂಡು ||೯೪||

ಚಿನ್ನದ ಪುಷ್ಪ ಬೆಳ್ಳಿಯ ಪುಷ್ಪವ ತಂದು |
ಚಿನ್ನಡಿಗಿರಿಸಿ ಕೈ ಮುಗಿದು
ಬಿನ್ನೈಸಿ ಬೇಡಿಕೊಂಡರು ಬೇಗ ಸತಿಯರು
ಎನ್ನಯ್ಯ ಸುತನ ಕೊಡೆಂದು ||೯೫||

ಭೂತ ಸೋಂಕಿದವರು ಬಂಜೆ ಬರಡಿಯರು |
ಸೂತಕ ತಪ್ಪಿಯಿದ್ದವರು
ಭೀತಿ ಪಟ್ಟಿರುವಂಥ ಸತಿಯರ ದುರಿತಕ್ಕೆ
ಧಾತು ಗುಂದಿಯೆ ಬರುತಿಹರ ||೯೬ ||

ವಾಸ ಕಂಸಾಳೆಯ ನುಡಿಸಿಕೊಂಡು ಮಾ
ದೇಶನಂಘ್ರಿಗೆ ನಮೋಯೆಂದು |
ಭಾಷೆ ಪಾಲಕ ದುರಿತನ ಪೊರೆಯೆಂದು ನೀ |
ರೇಶನ ಕೊಂಡಾಡಿದರು ||೯೭||

ದಕ್ಷನ ವೈರಿ ವೀರೇಶನೆ ದುರಿತನ |
ಶಿಕ್ಷೆಮಾಡೆಂದು ತಾ ಬೆಸಸಿ ಆಕ್ಷಣದಲ್ಲಿ ಕೇಶಣ್ಣನಿಗೊಪ್ಪಿಸೆ
ತಕ್ಷಣದಲ್ಲಿ ಹೊರಡಿಸಿದ ||೯೮||

ದುರಿತಕ್ಕೆ ಕುಳಿತ ಸತಿಯರು ತಲೆದೂಗೆ|
ತಿರುಗುತ್ತ ಮಾತನಾಡಿದರು |
ಇರಲಮ್ಮೆವೆಂದು ಬೆರಳ ಕಚ್ಚಿ ಭೂತ ದ |
ಲ್ಲಿಂದು ಬಿನ್ನೈಸಿದುದಾಗ ||೯೯||



ಬಿಟ್ಟೋಡುವ ಭೂತನ ಹಿಡಿತರಿಸಾಗ |
ಕಟ್ಟು ಮಾಡಿದ ವೀರೇಶ
ಮುಟ್ಟಲಮ್ಮೆವು ನಿಮ್ಮ ಪಾದದಾಣೆಯು ಯೆಂದು |
ಅಷ್ಟದಿಕ್ಕಿಗೆ ಷೋಡಿದವು||೧೦೦||

ಉರಿವ ಉದ್ದಂಡನೆ ಹರನ ಕುಮಾರನೆ |
ಕರುಣಿಸು ವರವ ಬೇಗದಲಿ
ಹರಸಿ ಕಾಣಿಕೆಯಿಕ್ಕಿ ಕರುಣೆಯ ಸಲಹೆಂದು
ಕರವ ಮುಗಿದು ಬೇಡಿದರು ||೧೦೧||

ಬೇಡಿದವರವನು ಕೊಟ್ಟು ಮಾದೇಶ್ವರ |
ರೂಢಿಯ ಜನರಿಗೆ ಬೇಗ,
ಆಡಿದ ಲೀಲೆಯಿಂದಲೆ ಮಲೆಯೊಳು ಹೆರೆ |
ಸೂಡಿದ ಅಭವನೊಪ್ಪಿದನು ||೧೦೨||

ಜಾತ್ರೆಯ ಪರಿಷೆ ಪರಿಯಿತು ತಮ್ಮೂರಿಗೆ
ಖ್ಯಾತಿ ಪಡೆದ ಲಿಂಗವನು
ಪ್ರೀತಿಯಿಂದಲಿ ಲಿಂಗವ ಕಳುಗಿದರಾಗ
ಭೂತಳದೊಡೆಯ ಮಾದೇಶ ||೧೦೩||

ಬಂದ ಜ ಹರಿಸುರಪತಿ ದಿಕ್ಪಾಲಕ
ಇಂದು ಧರನು ಕಳುಹಿದನು
ಎಂದಿನಿಂದದಿ ನಡುಮಲೆಯೊಳೊಪ್ಪಿರ್ದನು
ನಂದವಹನನು ಮಾದೇಶ ||೧೦೪||

ಸೃಷ್ಟಿಗಧಿಕ ಕೈಲಾಸವೆನಿಸಿದ ನಡು |
ಬೆಟ್ಟದೊಳಗೆ ನೆಲೆಸಿರ್ದು
ಇಷ್ಟಾರ್ಥ ವರವನು ಬೇಗದಿ ಜನರಿಗೆ
ಕೊಟ್ಟನು ಮಾದೇಶ್ವರನು ||೧೦೫||

* * * * *

## ಗ್ರಂಥ ಋಣ


(೧) ಕರ್ನಾಟಕದ ಜಾತ್ರೆಗಳು. ಹಂಪ ನಾಗರಾಜಯ್ಯ. ಕನ್ನಡ ಸಾಹಿತ್ಯ ಪರಿಷತ್ತು. ಪಂಪಮಹಾಕವಿ ರಸ್ತೆ. ಬೆಂಗಳೂರು. ೧೯೮೫.

(೨) ಮಾದೇಶ್ವರ ಸಾಂಗತ್ಯ - ಮಿಣ್ಯದ ಗುರುಸಿದ್ಧಕವಿ

(೩) ಮಾದೇಶ್ವರ ಸಾಂಗತ್ಯ ದರ್ಶನ - ವಿದ್ವಾನ್ ಹ. ಜ. ಶಿವಶಂಕರಪ್ಪ. ಮಾದೇಶ್ವರಸ್ವಾಮಿ ಇತಿಹಾಸ ಸಂಶೋಧನಾ ಸಂಸ್ಥೆ. ಮಧುವನಹಳ್ಳಿ, ಕೊಳ್ಳೇಗಾಲ ತಾಲ್ಲೂಕು

(೪) ಶ್ರೀ ಮಾದೇಶ್ವರ ಚರಿತ್ರೆ. ಆಸ್ಥಾನ ವಿದ್ವಾನ್ ಪಂಡಿತರತ್ನಂ ಬಿ. ಶಿವಮೂರ್ತಿ ಶಾಸ್ತ್ರೀಗಳು ಪ್ರ. ಧರ್ಮದರ್ಶಿಗಳ ಸಮಿತಿ, ಶ್ರೀಮಲೆ ಮಾದೇಶ್ವರ ದೇವಾಲಯ ೧೯೬೨.

(೫) ಹೂವು -ಹೊಂಬಾಳೆ; ಸಂ. ಡಿ. ಲಿಂಗಯ್ಯ. ಜಾನಪದ ಜಗತ್ತು ವಿಶೇಷ ಸಂಚಿಕೆ (ಜುಲೈ -ಡಿಸೆಂಬರ್ ೧೯೯೩, ಸಂಪುಟ ೧೪, ಸಂಚಿಕೆ ೨), ಲೇಖಿನ ವೈ. ಸಿ. ಭಾನುಮತಿ

(೬) ಮಲೆಯ ಮಾದೇಶ್ವರ - ಒಂದು ಅಧ್ಯಯನ, ಡಾ. ಬಿ. ಎಸ್. ಸ್ವಾಮಿ ನವೀನ ಪ್ರಕಾಶನ, ೨೦೨, ೭ನೇ 'ಎ'ಮುಖ್ಯ ರಸ್ತೆ, ಆರ್.ಪಿ.ಸಿ. ಲೇಔಟ್, ವಿಜಯನಗರ ಪೂರ್ವ, ಬೆಂಗಳೂರು -೪. ಮಹಾಜ್ಯೋತಿ ಮಾದೇಶ್ವರ - ಡಾ. ಬಿ. ನ್. ಸ್ವಾಮಿ.

(೮) ಮಲೆಯ ಮಾದೇಶ್ವರ (ಸಂಪುಟ ೨) ಸಂ. ಪಿ. ಕೆ. ರಾಜಶೇಖರ, ಕನ್ನಡ ಅಧ್ಯಯನ ಸಂಸ್ಥೆ. ಮಾನಸಗಂಗೋತ್ರಿ. ಮೈಸೂರು ೧೯೭೩.

(೯) ಶ್ರೀ ಮಾದೇಶ್ವರ ದರ್ಶನಮ್. ಜೂನ್. ೧೯೮೫, ಮಾಸಪತ್ರಿಕೆ, ಸಂಚಿಕೆ ೬ ಸಂಪುಟ ೧

(೧೦) ಯುಗಾದಿ ಕ್ರೋಧನ ಸಂವತ್ಸರ, ಸಂಪುಟ ೧, ಸಂಚಿಕೆ ೩

(೧೧) ರೋಹಣ ಮಾಸಕ್ರೋಧನ ಸಂವತ್ಸರ. ಸಂಚಿಕೆ ೪ ಸಂಪುಟ ೧.

ಜಾತ್ರೆಗಳು ನಮ್ಮ ಸಂಸ್ಕೃತಿಕ ಪರಂಪರೆಯ ಪ್ರಮುಖ ದಾಖಲೆಗಳು. ಗ್ರಾಮೀಣ ಬದುಕಿನ ಜೀವಂತ ನಾಡಿಮಿಡಿತಗಳು. ಸಾಮಾಜಿಕ, ಧಾರ್ಮಿಕ ಹಾಗೂ ಕಲಾತ್ಮಕ ಬದುಕಿನ ಜೀವಸತ್ವ ಅಲ್ಲಿ ಹಲವು ಮುಖಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣಬಹುದು. ಜಾತ್ರೆ ಕೇವಲ ಜನ-ದನಗಳ, ವ್ಯಾಪಾರ-ವಹಿವಾಟುಗಳ, ಕೇಂದ್ರವಷ್ಟೇ ಅಲ್ಲ; ಅದೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗಮ. ಒಂದೊಂದು ಜಾತ್ರೆಯೂ, ಒಂದೊಂದು ಗ್ರಾಮದ, ಗ್ರಾಮದೇವತೆಯ ಹಿನ್ನೆಲೆಯನ್ನೂ, ಅದರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನೂ ಒಳಗೊಂಡಿರುತ್ತದೆ. ಒಂದು ಜಾತ್ರೆಯ ತಲಸ್ಪರ್ಶಿಯಾದ ಅಧ್ಯಯನವೆಂದರೆ, ಅದೊಂದು ಸಂಸ್ಕೃತಿಯ ಅಧ್ಯಯನವಿದ್ದಂತೆ. ಅದರ ಹುಟ್ಟು, ಬೆಳವಣಿಗೆ, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯಗಳು, - ಇವೆಲ್ಲವನ್ನೂ ಮೈಗೂಡಿಸಿಕೊಂಡಿರುತ್ತದೆ. ಜಾತ್ರೆಗಳು ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದಿರುವಂತೆಯೇ, ಸಾಮಾಜಿಕ ಮಹತ್ವವನ್ನೂ ಪಡೆದುಕೊಂಡಿವೆ. ಅವು ಅಂದಿನಿಂದ ಇಂದಿನವರೆವಿಗೂ ಅಷ್ಟೇ ಮಹತ್ವವನ್ನು ಉಳಿಸಿಕೊಂಡು ಬಂದಿರುವುದರ ಹಿನ್ನೆಲೆಯೇ ಇದಾಗಿದೆ.